A.—The Hon'ble Sri H. C. DASAPPA (Minister for Finance and Industries)—

	Pig Iron	*Steel Sections.*
	Tons.	Tons.
1944–45 ...	16,211	25,991
1945–46 ..	25,021	24,710
1946–47 ...	24 634	21,735
1947–48 ...	21,545	22·475
1948–49 ...	22,130	22,997
1949–50 ...	6.703	18,684
9 months from 1st July 1949 to 31st March 1950)		
1950–51 ..	21,825	22,188

(From 1st April 1950 to 31st January 1951).

RESOLUTIONS.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).—ನೆನ್ನೆ ದಿನದ 5ನೇ ನಿರ್ಣಯದಮೇಲೆ ಚರ್ಚೆ ಇವತ್ತು ಮುಂದುವರಿಯಬಹುದು.

RESOLUTION No 5.*

Plea for de-controlling and de-rationing in all areas except in the cities of Bangalore, Mysore, Davangere and K.G.F.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಶ್ರೀ ಮಂಜಪ್ಪನವರು ತಂದಿರತಕ್ಕ ಈ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ದೇಶದಲ್ಲಿ, ಭಿನ್ನಾಭಿಪ್ರಾಯವಿರುವ ಅಂಶ ಯಾವುದೆಂದರೆ, ಹತೋಟಿ ಆಚೆ ಹೋಗತಕ್ಕ ವಿಚಾರ. ಇದು ಈ ಸಭೆಯಲ್ಲಿ ಈಗಾಗಲೇ ಅನೇಕಸಾರಿ ಚರ್ಚೆಗೆ ಬಂದಿದೆ. ಆಗಲೇ ಪ್ರತಿಯೊಬ್ಬರೂ ಕೂಡ ಇದನ್ನು ಒಮ್ಮತವಾಗಿ ತೆಗೆಯಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ. ಶ್ರೀ ವೀರಣ್ಣಗೌಡರು ಇದು ಆಗಲೇ 2 ತಿಂಗಳ ಕೆಳಗೆ ಚರ್ಚೆಗೆ ಬಂದಿತ್ತು, ಆದ್ದರಿಂದ ಈಗ 'ಪುನಃ ಚರ್ಚೆ ಮಾಡಬೇಕಾದ ಅವಶ್ಯಕತೆ ಇಲ್ಲವೆಂದು ಅಭಿಪ್ರಾಯ ಪಟ್ಟರು. ಇದು ಕಳೆದ 10 ವರ್ಷಗಳಿಂದಲೂ ಕೂಡ ಚರ್ಚೆಗೆ ಬರತಕ್ಕ ಒಂದು ಸಂಪ್ರದಾಯವಾಗಿದೆ. ಒಂದು ವೇಳೆ ಬರದೇ ಇದ್ದರೂ ಈ ಸಭೆಯವರು ಒತ್ತಾಯ ಮಾಡಿ ಇದನ್ನು ಚರ್ಚೆ ಮಾಡಲು ಒಂದೊಂದು ದಿನ ಮೀಸಲಾಗಿಟ್ಟು ತಮ್ಮ ಅಭಿಪ್ರಾಯವನ್ನು ಕೊಡುತ್ತಾ ಇದ್ದಾರೆ. ಈಗ ಆಹಾರದ ಹತೋಟಿ ದಿನದಿನಕ್ಕೆ ಬದಲಾಯಿಸುತ್ತ ಇದೆ. ಒಂದೊಂದು ಕಾನ್ಫರೆನ್ಸು ದೆಹಲಿಯಲ್ಲಿ ನಡೆಯಿತು ಎಂದರೆ ಒಂದು ವಿಶೇಷ ತೆಗೆದುಕೊಂಡು ಬರುತ್ತಾರೆ. ಮೊನ್ನೆ ಮೀಟಿಂಗ್‌ನಲ್ಲಿ ಧಾನ್ಯ ಶೇಕಡ 10ರಷ್ಟು ಕಡಿಮೆ ಮಾಡಿಕೊಂಡು ಬಂದಿದ್ದಾರೆ. ಧಾರಣೆಯೂ ಸಹ ಅದೇ ರೀತಿ ಜಾಸ್ತಿಯಾಗಿದೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದಕ್ಕೆ ಸಂಬಂಧಪಟ್ಟಂತೆ ಧಾರಣೆ ವಿಚಾರ ಮಾತನಾಡಬಹುದೇ?

ಶ್ರೀ ಬಿ. ಹುಚ್ಚೇಗೌಡರು.—ಏನೇ ಆಗಲೀ ಶ್ರೀ ಮಂಜಪ್ಪನವರು ದೇಶದಲ್ಲಿ ಹತೋಟಿಯಿಂದ ಎಷ್ಟು ಮಟ್ಟಿಗೆ ಅನೀತಿ, ಅಧರ್ಮ, ಲಂಚಕೋರತನ ಇವೆಲ್ಲಾ ಹೆಚ್ಚಾಗಿದೆ, ಜನಗಳಿಗೆ ಅದರಲ್ಲೂ ಮುಖ್ಯವಾಗಿ ಆಹಾರ ಬೆಳೆಯತಕ್ಕವರಿಗೆ ಎಂದರೆ ರೈತರಿಗೆ ಎಷ್ಟು ಹಿಂಸೆಯಾಗಿದೆ ಎಂಬುದನ್ನು ಹೇಳಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರೂ ಕೂಡ ಅಷ್ಟೇ ಚನ್ನಾಗಿ ಪ್ರತಿಯೊಬ್ಬರಿಗೂ ಮನದಟ್ಟಾಗುವಂತೆ ಹೇಳಿದ್ದಾರೆ. ಅಷ್ಟೇ ಅಲ್ಲದೆ ಇದರಿಂದಾಗತಕ್ಕ ಅನಾನುಕೂಲ ಮತ್ತು ಸರ್ಕಾರದವರು ತಮ್ಮ ಕರ್ತವ್ಯ ಲೋಪ ಎಷ್ಟು ಮಟ್ಟಿಗೆ ಮಾಡಿದ್ದಾರೆ ಎಂಬುದನ್ನೂ ಸಹ ಪೂರ್ಣ ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ನೆಹರೂರವರೇ ಬಂದರೂ ಆಹಾರದ ಹತೋಟಿ ಹೋಗಬೇಕೆಂಬ ವಿಚಾರದಲ್ಲಿ ಯಾವ ಬದಲಾವಣೆಯನ್ನೂ ಸೂಚಿಸಲಿಚ್ಛಿಸುವುದಿಲ್ಲವೆಂದು ನಾನು ಹೇಳುತ್ತೇನೆ. ಈ ಆಹಾರ ಪರಿಸ್ಥಿತಿಯಲ್ಲಿ ಎಷ್ಟುಮಟ್ಟಿಗೆ ಜನಗಳಿಗೆ ಸಂಕಟ ಇದೆ ಎಂಬುದನ್ನು ತೋರಿಸುವುದಕ್ಕೆ ಆ ಮಾತು ಹೇಳಿದೆನೇ ಹೊರತು ನೆಹರೂರವರ ಮೇಲೆ ಒಂದು ಟೀಕೆ ಮಾಡಬೇಕೆಂದು ಅಲ್ಲ. ಇದೂ ಅಲ್ಲದೆ ಲಾಗಾಯ್ತಿನಿಂದ ಈಗ ಅಧಿಕಾರದಲ್ಲಿರುವ ಪಕ್ಷದವರು ಮತ್ತು ತಾವೂ ಕೂಡ ಹಿಂದೆ ಅಸೆಂಬ್ಲಿಯೊಳಗೆ ಈ ವಿಚಾರವನ್ನು ಘಂಟೆಗಟ್ಟಲೆ ಹೇಳಿದ್ದೀರಿ. ಆಹಾರ ಹತೋಟಿಯಿಂದ ಎಷ್ಟು ಮಟ್ಟಿಗೆ ತೊಂದರೆಯಾಗಿದೆ ಎಂಬುದನ್ನು ಪ್ರತಿಯೊಂದು ಸಭೆಯಲ್ಲೂ ಸಹ ಅನೇಕರು ಹೇಳಿದ್ದಾರೆ ಇದು ನಿರ್ವಿವಾದವಾದ ಅಂಶವೆಂದು ನಮ್ಮ ಆಹಾರ ಮಂತ್ರಿಗಳೂ ಸಹ ಹೇಳುತ್ತಾ ಇದ್ದೇವೆಂದು ಒಪ್ಪಿಕೊಂಡಿದ್ದಾರೆ. ಅಂಥಾದ್ದರಲ್ಲಿ ಅವರು ಅಧಿಕಾರಕ್ಕೆ ಬಂದಕೂಡಲೇ ಯಥಾಪ್ರಕಾರ ಹಿಂದೆ ಇದ್ದುದರಲ್ಲಿ ಯಾವ ಬದಲಾವಣೆಯನ್ನೂ ಮಾಡದೆ ಅದನ್ನು ಮುಂದುವರಿಸಿಕೊಂಡು ಬಂದಿದ್ದಾರೆ. 1948ರಲ್ಲಿ ಚುನಾವಣೆ ರಾಜ್ಯಾಂಗ ರಚನಾ ಸಭೆಗೆ ನಡೆಯಿತು ಆಗ ನಮ್ಮನ್ನು ತೆಗೆದುಹಾಕಿ ಬಿಟ್ಟರೆ ಏನು ಮಾಡುವುದು ಎಂದು ನೀವು ಎಲೆಕ್ಟೋರೇಟ್‌ಗೆ ಒಂದು ಭರವಸೆಯನ್ನು ನೀಡಿ ಚುನಾಯಿತರಾಗಿ ಬಂದಿರಿ. ಈಗ ಅದನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಿ ಪುನಃ ಅಧಿಕಾರದಲ್ಲಿ ಕುಳಿತಿರುವುದು ತುಂಬಾ ನಾಚಿಕೆಗೇಡು. ಪ್ರಪಂಚದಲ್ಲಿ ಪ್ರಜಾಪ್ರಭುತ್ವದಂತೆ ನಡೆಯುವ ಯಾವ ಸರ್ಕಾರವೂ ಈ ರೀತಿ ಮಾಡುವುದಿಲ್ಲ. ಕೆಲವು ಭರವಸೆಗಳನ್ನು ಎಲೆಕ್ಷನ್ ಇಷ್ಯೂ ಆಗಿಟ್ಟುಕೊಂಡು ಬಂದು ಅದನ್ನು ಈಡೇರಿಸದಿದ್ದ ಪಕ್ಷದಲ್ಲಿ ರಾಜೀನಾಮೆ ಕೊಡಿ. ಹೊಸದಾಗಿ ಚುನಾವಣೆಯಾಗಲಿ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ವಯಸ್ಕರ ಮತದಾನ ಪದ್ಧತಿಯಂತೆ ಚುನಾವಣೆ ನಡೆಯಬೇಕೋ ಅಥವಾ ಹಳೇ ಪದ್ಧತಿಯಂತೆ ನಡೆಯಬೇಕೋ?

* ನಿರ್ಣಯ 5.—ಮೈಸೂರು, ಬೆಂಗಳೂರು, ದಾವಣಗೆರೆ ಮತ್ತು ಕೋಲಾರದ ಚಿನ್ನದಗಣಿ ಪ್ರದೇಶ—ಈ ಸಿಟಿಗಳಲ್ಲಿ ಹೊರತು ಸಂಸ್ಥಾನದ ಇತರ ಎಲ್ಲಾ ಪ್ರದೇಶಗಳಲ್ಲಿಯೂ ಆಹಾರದ ಹತೋಟಿಯನ್ನೂ ಮತ್ತು ಆಹಾರ ಧಾನ್ಯಗಳ ಪಡಿತರದ 'ರೇಷನಿಂಗ್' ಪದ್ಧತಿಯನ್ನೂ, ವಜಾ ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.— ಯಾವುದಾದರೂ ಸರಿಯೇ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊನ್ನೆ ತಾನೆ ಬೆಂಗಳೂರು ಸಿಟಿಯಲ್ಲಿ ಚುನಾವಣೆ ನಡೆಯಿತು ಇದಕ್ಕೂ ನಡೆಯುತ್ತದೆ, ಏಕೆ ಆತುರ ಪಡುತ್ತೀರಿ?

ಶ್ರೀ ಬಿ. ಹುಚ್ಚೇಗೌಡರು.— ನೀವು ಜನಗಳಿಗೆ ನೀಡಿದ ಭರವಸೆಯನ್ನು ಚುನಾವಣೆ ಆದನಂತರ ಏಕಾ ಏಕೀ ಬದಲಾಯಿಸುವುದು ಯಾವ ನೀತಿ!

The Hon'ble Sri H. C. DASAPPA.— I rise to a point of order. The Hon'ble Member may read from our election manifesto. Instead of that, trusting to his own convenient memory, if he draws on it, it is very unfair.

Sri B. HUTCHE GOWDA.—If it is to the contrary, let him point out.

The Hon'ble Sri H. C. DASAPPA.— That statement has to be challenged.

ಶ್ರೀ ಬಿ. ಹುಚ್ಚೇಗೌಡರು.—ಎಲೆಕ್ಷನ್ ಮ್ಯಾನಿಫೆಸ್ಟೋ ತಂದುಕೊಡಿ, ತೋರಿಸುತ್ತೇನೆ.

The Hon'ble Sri T. MARIAPPA.—The parliamentary debate naturally necessitates, particularly for an important member of the Opposition, that he should quote from the records. He need not ask us to give him the necessary material. We are not here to supply him with all the materials. On the other hand he must make a thorough study. After all his words must be very responsible ; they must be based on facts, because they go into cold print. He must be able to substantiate every word of what he says.

ಶ್ರೀ ಬಿ. ಹುಚ್ಚೇಗೌಡರು.—It is for him to deny it. I am one with the Hon'ble Minister in that respect.

ಈಗ ದೇಶದಲ್ಲಿ ಪರಿಸ್ಥಿತಿ ಹೇಗಿದೆಯೆಂದರೆ, ಉತ್ಪತ್ತಿಯಾಗುವುದನ್ನು ಸಂಗ್ರಹಿಸಿ ಅದನ್ನು ಹಂಚುತ್ತಿದ್ದಾರೆ. ಆಹಾರೋತ್ಪತ್ತಿಯನ್ನು ಹೆಚ್ಚಿಸಿ ಆದಷ್ಟುಬೇಗ ಕಂಟ್ರೋಲನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕು ಈಗ ಈ ಹತೋಟಿಯಿಂದ ಏಕೆ ಇಷ್ಟು ತೊಂದರೆಯೆಂದರೆ, ಮೊದಲನೆಯದಾಗಿ ರೈತರಿಂದ ಧಾನ್ಯ ತರಬೇಕಾದರೆ ಅವರಿಗೆ ಒಂದು ಕಾಳನ್ನೂ ಬಿಡದೆ ತರುತ್ತಾರೆ ಅದೇ ಪಕ್ಕದಲ್ಲೇ ಯಾರಾದರೂ ತಿನ್ನುವುದಕ್ಕಿಲ್ಲದೇ ಇರುವವನಿದ್ದರೆ ಅವನಿಗೆ ಬೇಕಾದಷ್ಟನ್ನು ಕೊಡುವ ಹಾಗಿಲ್ಲ. ಕೇಳಿದರೆ ನಾನ್‌ಸ್ಟ್ಯಾಚುಟರಿ ರೇಷನ್ಡ್ ಪ್ರದೇಶ ಎಂದು ಹೇಳುತ್ತಾರೆ. ಬೆಳೆ ಬೆಳೆಯುವವನಿಗೂ ಹಿಂಸೆ, ಬೆಳೆಯದವನಿಗೂ ಹಿಂಸೆ. ಬೆಳೆದವನು ಸಾಗಿಸಬೇಕಾದರೆ ತೊಂದರೆ. ಧಾನ್ಯವನ್ನು ಮಾರಬೇಕಾದರೆ ತಾಲ್ಲೂಕು ಕಚೇರಿಯ ಮುಂದೆ ಮೂರು ನಾಲ್ಕು ದಿನ ಕಾದರೆ ಆಮೇಲೆ ಅಳೆದುಕೊಳ್ಳುತ್ತಾರೆ. ಅದಕ್ಕೆ ಹಣ ಬರಬೇಕಾದರೆ ಅವನು ದಿನಗಟ್ಟಲೆ ಕಾಯುವುದಲ್ಲದೆ ಕನಿಷ್ಠಪಕ್ಷ ನೂರಕ್ಕೆ 50 ರೂಪಾಯಿ ಲಂಚ ಕೊಡಬೇಕು ಈರೀತಿಯಾದರೆ ರೈತರು ಹೇಗೆ ಹೆಚ್ಚು ಆಹಾರ ಬೆಳೆಯುವುದು? ಎಚ್. ಎಸ್. ಲೆಕ್ಕ ಬರೆಯುವುದರಲ್ಲಿ ಶಾನುಭೋಗರು ಇಬ್ಬರು ಪಂಚಾಯಿತಿದಾರರನ್ನು ಕರೆದುಕೊಂಡು ಹೋಗಿ ಅವರ ಎದುರಿನಲ್ಲಿ ಬರೆಯಬೇಕೆಂದಿದೆ. ಇದಕ್ಕೆ ಯಾರು ಹೋಗುತ್ತಾರೆ? ಶಾನುಭೋಗರು ಕುಳಿತಕಡೆಯೇ ಬರೆಯುತ್ತಾರೆ. ಇಂತಿಂಥ ಜಮೀನಿನಲ್ಲಿ ಇಷ್ಟು ದಿನಸಿ ಬೆಳೆಯಾಗುತ್ತದೆಂದು ಯಾವ ಲೆಕ್ಕದ ಮೇಲೆ ಹೇಳುತ್ತಾರೆ ?

ಅಧ್ಯಕ್ಷರು.—ಈಗ ಹತೋಟಿ ಇರುವುದೇ ಬೇಡವೆ ಎಂಬುದನ್ನು ಹೇಳಬೇಕೇ ಹೊರತು ಇದೆಲ್ಲಾ ಏಕೆ?

ಶ್ರೀ ಬಿ. ಹುಚ್ಚೇಗೌಡರು.—ಏನೇನು ತೊಂದರೆಗಳಿವೆ ಎಂಬುದು ಗೊತ್ತಾಗದೇ ಹೋದರೆ ಇವು ಯಾವ ರೀತಿ ನಿವಾರಣೆಯಾಗುವುದು !

ನಮ್ಮ ಆಹಾರ ಮಂತ್ರಿಗಳೇ ಹೋಗಿ ಒಂದು ಜಮೀನಿನಲ್ಲಿ ಎಷ್ಟು ಬೆಳೆಯುತ್ತದೆ ಎಂದು ಅಂದಾಜು ಮಾಡಲಿ ಅದು ಸರಿಯಾಗಿದ್ದರೆ ನಾನು ಒಪ್ಪುತ್ತೇನೆ.

ಅಧ್ಯಕ್ಷರು.—ತಾವು ಹೇಳುವುದು ಹತೋಟಿಗೆ ಸಂಬಂಧಪಟ್ಟದ್ದಲ್ಲ ಈಗ ನೀವು ವಾದ ಮಾಡುತ್ತಿರುವುದು ಹತೋಟಿಯನ್ನು ತೆಗೆಯಬೇಕೆಂದು. ಮಂತ್ರಿಗಳು ಹೋಗಿ ಸರಿಯಾಗಿ ಅಂದಾಜು ಮಾಡಿದರೆ, ಹತೋಟಿ ತೆಗೆಯುವುದು ಬೇಡವೆಂದು ಹೇಳುತ್ತೀರಾ?

ಶ್ರೀ ಬಿ. ಹುಚ್ಚೇಗೌಡರು.—ಏಕೆ ಹೇಳುತ್ತೇನೆಂದರೆ, ಒಂದು ಜಮೀನಿನಲ್ಲಿ ಇಷ್ಟೇ ಬೆಳೆ ಆಗುತ್ತದೆಂದು ಯಾರೂ ಕೂಡ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.— ಕೈತೂಕ ಬಾಯಿ ಬಣ್ಣ ಎಂದು ಹೇಳುವ ಹಾಗೆ!

ಶ್ರೀ ಬಿ. ಹುಚ್ಚೇಗೌಡರು.— ಶಾನುಭೋಗರು ಬರೆದ ಲೆಕ್ಕವನ್ನು ತಾಲ್ಲೂಕು ಅಮಲ್ದಾರರು ಬೇರೆ ತಿದ್ದಿಸುವುದು. ಅವರ ಮೇಲ್ಪಟ್ಟ ಸಬ ಡಿವಿಜನ್ ಆಫೀಸರು, ಡೆಪ್ಯುಟಿ ಕಮೀಷನರು ಹೆಚ್ಚು ವಸೂಲು ಮಾಡಬೇಕೆಂದು ಹೇಳುವುದು. ಹೀಗೆ ವಸೂಲು ಮಾಡುವುದರಲ್ಲಿ ಬೆಳೆಯುವವನಿಗೆ ಬೇಕಾದಷ್ಟನ್ನೂ ಬಿಡದೆ ವಸೂಲು ಮಾಡುತ್ತಾರೆ. ಅವನು ಹೋಗಿ ಕಾಳಸಂತೆಯಲ್ಲಿ ಕೊಂಡುಕೊಳ್ಳಬೇಕು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದ್ದದ್ದೆಲ್ಲವನ್ನೂ ತೆಗೆದುಕೊಂಡು ಹೋದಮೇಲೆ ಕಾಳಸಂತೆಯಲ್ಲಿ ಎಲ್ಲಿ ಸಿಕ್ಕುತ್ತದೆ ?

ಶ್ರೀ ಬಿ. ಹುಚ್ಚೇಗೌಡರು.—ಯಾರು ಬಚ್ಚಿಟ್ಟುಕೊಂಡಿರುತ್ತಾರೋ ಅವರಲ್ಲಿ ಸಿಕ್ಕುತ್ತದೆ.

ಸ್ಟ್ಯಾಚುಟರಿ ರೇಷನ್ ಪ್ರದೇಶದಲ್ಲಿ 12½ ಲಕ್ಷ ಪ್ರಜಾಸಂಖ್ಯೆ ಇದೆ. ಬಾಕಿ ಕಡೆ ಸುಮಾರು 35ಲಕ್ಷ ಜನರಿದ್ದಾರೆ. 1950ನೆಯ ಡಿಸೆಂಬರಿನಲ್ಲಿ ಕೊಟ್ಟಿರುವ ಒಂದು ಪ್ರೆಸ್ ಸ್ಟೇಟ್‌ಮೆಂಟಿನ ಪ್ರಕಾರ ಸ್ಟ್ಯಾಚುಟರಿ ರೇಷನ್ಡ್ ಪ್ರದೇಶದಲ್ಲಿ 11.67,598 ಜನರಿದ್ದಾರೆ, ನಾನ್‌ಸ್ಟ್ಯಾಚುಟರಿ ರೇಷನ್ಡ್ ಪ್ರದೇಶದಲ್ಲಿ 53,50,093 ಜನರಿದ್ದಾರೆ. ಜನರಲ್ಲಿ ಉತ್ಸಾಹವಿದೆಯೆ, ಅವರಲ್ಲಿ ಹೆಚ್ಚು ಬೆಳೆ ಬೆಳೆಯಬೇಕೆಂಬ ಮನಸ್ಸು ಬಂದಿದೆಯೆ? ಬೆಳೆ ಯಾವ ರೀತಿ ಬರುತ್ತದೆಯೆಂಬುದನ್ನು ನೋಡಿದರೆ ಇದು ಗೊತ್ತಾಗುತ್ತದೆ, 1947-48 ರಲ್ಲಿ ಬತ್ತ ಬೆಳೆದ ಪ್ರದೇಶ 7,43,051 ಎಕರೆ ಇತ್ತು. 1948-49 ರಲ್ಲಿ 7,67,946 ಎಕರೆ ಆಯಿತು. ಇದು 1949-50 ರಲ್ಲಿ 7,48 382 ಎಕರೆಗೆ ಇಳಿದಿದೆ. ರಾಗಿ ಬೆಳೆದ ಪ್ರದೇಶ 1947-48 ರಲ್ಲಿ 19,23,436 ಎಕರೆ ಇತ್ತು ; 1948-49 ರಲ್ಲಿ 19,16,382 ಎಕರೆ ಆಯಿತು, 1949-50 ರಲ್ಲಿ ಇದು 18,74,604 ಎಕರೆ ಆಯಿತು.

Sri B. N. BORANNA GOWDA (Hassan District-General).—I rise to a point of order sir, The Hon'ble

Member is not confining himself to the resolution before the House.

The Hon'ble Sri T. MARIAPPA.—All those points I have made clear. With regard to acreage it depends upon various factors. Suppose tanks do not get supply of water. It relates to Grow More Food scheme and not to controls.

ಶ್ರೀ ಬಿ. ಹುಚ್ಚೇಗೌಡರು.—ವಿವರಗಳನ್ನು ಕೊಡದೆ ಒಟ್ಟಿನಲ್ಲಿ ಹೇಳುವುದಾದರೆ, ನಮ್ಮ ದೇಶದಲ್ಲಿ ಈಗ ಸುಮಾರು ನಾಲ್ಕು ವರ್ಷಗಳ ಲೆಕ್ಕಗಳನ್ನು ನೋಡಿದರೆ, ರಾಗಿ ಶೇಕಡ 4 ರಷ್ಟು ಕಡಿಮೆಯಾಗಿದೆ.........

ಅಧ್ಯಕ್ಷರು.—ಈ ನಿರ್ಣಯದ ವಿಚಾರದಲ್ಲಿ ಇದೆಲ್ಲಾ ಏಕೆ ?

ಶ್ರೀ ಬಿ. ಹುಚ್ಚೇಗೌಡರು.—ಕಂಟ್ರೋಲ್ ತೆಗೆದರೆ ಬೆಳೆ ಹೆಚ್ಚಾಗುತ್ತದೆಂದು ಹೇಳುವುದಕ್ಕೆ ಬತ್ತ ಸೇಕಡ 3 ರಷ್ಟು ಕಡಿಮೆಯಾಗಿದೆ, ರಾಗಿ ಸೇಕಡ 4 ರಷ್ಟು ಕಡಿಮೆಯಾಗಿದೆ, ಜೋಳ ಸೇಕಡ 31·3 ರಷ್ಟು ಕಡಿಮೆಯಾಗಿದೆ, ಆದರೆ ಕಬ್ಬಿನ ಬೆಳೆ ಮಾತ್ರ ಸೇಕಡ 22·4 ರಷ್ಟು ಜಾಸ್ತಿಯಾಗಿದೆ. ಹೀಗೆಯೇ ಕಡಲೇಕಾಯಿ ಬೆಳೆಯೂ ಜಾಸ್ತಿಯಾಗಿದೆ. ಮುಖ್ಯವಾಗಿ, ಆಹಾರ ಹೆಚ್ಚು ಬೆಳೆಯಬೇಕು, ಹತೋಟಿಯನ್ನು ತೆಗೆಯಬೇಕು ಎಂದರೆ, ರೈತನ ಸ್ಥಿತಿಯನ್ನು ಉತ್ತಮಗೊಳಿಸಬೇಕು. ರೈತನಿಗೆ ಕಿರುಕುಳವಿಲ್ಲದಂತೆ ಸರ್ಕಾರದವರು ಮಾಡಬೇಕು, ಬೆಳೆಯಲು ತಗಲುವ ಖರ್ಚನ್ನು ಲೆಕ್ಕಹಾಕಿ ಅದರಂತೆ ಬೆಲೆ ಕೊಟ್ಟು ಅವನ ಮನೆ ಬಾಗಿಲಿಗೆ ಹೋಗಿ ತೆಗೆದುಕೊಂಡು ಬರಲು ಏರ್ಪಾಡು ಮಾಡಬೇಕು.

ಅಧ್ಯಕ್ಷರು.—ಹತೋಟಿ ತೆಗೆಯುವುದಕ್ಕೆ ಏನು ಮಾಡಬೇಕೆಂಬುದನ್ನು ಹೇಳಿ.

ಶ್ರೀ ಬಿ. ಹುಚ್ಚೇಗೌಡರು.—ಈಗ ರೈತರಿಗೆ ಹಿಂಸೆಯಾಗಿದೆ. ಇದರಿಂದ ದೇಶಕ್ಕೆ ಈ ಅನಾಹುತವಾಗಿದೆ ಹೀಗಿದ್ದರೆ ಆಹಾರಕ್ಕಾಗಿ ಪರದೇಶದವರ ಮೇಲೆ ಭಾರ ಹಾಕುವುದು ತಪ್ಪುವುದಿಲ್ಲ. ಹೊರಗಿನಿಂದ ಎಷ್ಟೆಷ್ಟು ತರಿಸುತ್ತಿದ್ದಾರೆಂದರೆ, 1946–47 ರಲ್ಲಿ 200 ಲಕ್ಷ ಪಲ್ಲ ಆಮದಾಗಿದೆ. 1947–48 ರಲ್ಲಿ ಇದು 300 ಲಕ್ಷ ಪಲ್ಲಕ್ಕೆ ಏರಿದೆ. 1948–49 ರಲ್ಲಿ ಇದು 400 ಲಕ್ಷ ಪಲ್ಲಕ್ಕೆ ಏರಿತು. ಈ ಹತೋಟಿ ಇರುವುದರಿಂದ ವರ್ಷ ವರ್ಷವೂ ಹೊರದೇಶಗಳ ಮೇಲೆ ಭಾರ ಹಾಕುವುದಾಗಿದೆ. ಇದನ್ನು ತಪ್ಪಿಸಲು ಹತೋಟಿ ತೆಗೆಯುವುದೊಂದೇ ಮಾರ್ಗ. ಸುಮ್ಮನೆ ನೀವು ದೇಶಭಕ್ತಿಯಿಂದ ಬೆಳೆಯಬೇಕು, ಬೇಕಾದಷ್ಟು ಬೆಳೆಯಬೇಕು ಎಂದು ರೈತರಿಗೆ ಹೇಳುತ್ತಾ, ಅವರಿಗೆ ಸರಿಯಾದ ಸ್ಥಾನಮಾನವನ್ನೂ ಕೊಡದೆ ಅವರನ್ನು ಬಾಕಿಯವರಿಗೆ ಬೆಳೆದು ಕೊಡತಕ್ಕ ಗುಲಾಮರಂತೆ ಭಾವಿಸಿದರೆ, ಹೇಗೆ ಬೆಳೆದು ಕೊಡುತ್ತಾರೆ ? ಎಲ್ಲಿಯವರೆಗೆ ಈ ಹತೋಟಿ ಆಜ್ಞೆ ಇರುತ್ತದೆಯೋ ಅಲ್ಲಿಯವರೆಗೆ ದೇಶಕ್ಕೆ ಕ್ಷೇಮವಿಲ್ಲ.

Sri W. H. HANUMANTHAPPA.—I object to the statement. ರೈತರನ್ನೆಲ್ಲಾ ಗುಲಾಮರ ಸ್ಥಿತಿಯಲ್ಲಿಡುತ್ತಾರೆಂದು ಹೇಳುವುದು ಜವಾಬ್ದಾರಿ ಮಾತಲ್ಲ.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಕಂಟ್ರೋಲ್ ಆಜ್ಞೆ, ಪಡಿತರ ಪದ್ಧತಿ ಆದಷ್ಟು ಜಾಗ್ರತೆ ಹೋಗಬೇಕು. ಇದು ನಮ್ಮ ಬೆನ್ನು ಹತ್ತಿರುವ ದೊಡ್ಡ ಪಿಶಾಚಿ. ಇದನ್ನು ಎಷ್ಟು ಬೇಗ ದೂರ ಮಾಡಿದರೆ ಅಷ್ಟು ಬೇಗ ಎಲ್ಲರಿಗೂ ಕ್ಷೇಮ, ದೇಶಕ್ಕೂ ಕ್ಷೇಮ ಎಂಬ ವಿಚಾರವಲ್ಲಿ ಹೆಚ್ಚು ಭಿನ್ನಾಭಿಪ್ರಾಯ ಇರಲಾರದೆಂದು ಭಾವಿಸುತ್ತೇನೆ. ಈಗ ನಾನಾದರೂ ಈ ಪಡಿತರ ಪದ್ಧತಿ ಮತ್ತು ಹತೋಟಿ ಆಜ್ಞೆಗಳು ನಮ್ಮ ದೇಶದಲ್ಲಿ ಜಾರಿಗೆ ಬಂದಮೇಲೆ ಏನೇನು ದುಷ್ಕಾರ್ಯಗಳು ಮತ್ತು ದುರ್ವರ್ತನೆಗಳು ಪ್ರಾರಂಭವಾಗಿ ನೀತಿಯ ಪತನವಾಗುತ್ತಿದೆ ಎಂಬುದನ್ನು ವರ್ಣನೆ ಮಾಡುವುದಕ್ಕೆ ಹೋಗುವುದಿಲ್ಲ, ಎಷ್ಟು ಜಾಗ್ರತೆ ಈ ಮೃಹತ್ತಿದ ಪಿಶಾಚಿಯನ್ನು ಹೋಗಲಾಡಿಸುತ್ತೇವೆಯೋ ಅಷ್ಟು ಜಾಗ್ರತೆ ನಮಗೆ ಒಳ್ಳೆಯದೆಂದು ನನಗೆನ್ನಿಸುತ್ತದೆ. ಹಾಗಿಲ್ಲದಿದ್ದರೆ, ಹೆಚ್ಚುಕಾಲ ಬಿಟ್ಟರೆ ನಮ್ಮಲ್ಲಿ ಈ ಪಿಶಾಚಿ ಒಂದು ಸ್ಥಾನ ಮಾಡಿಕೊಂಡು ಆಮೇಲೆ ಈ ಹತೋಟಿ ಆಜ್ಞೆ ಇದ್ದರೇ ಒಳ್ಳೆಯದೋ ಏನೋ ಎಂಬ ಅನುಮಾನ ಹುಟ್ಟುತ್ತದೆಯೋ ಏನೋ ಎಂದು ನನಗೆ ಭಾಸವಾಗುತ್ತದೆ. ಈಗಾಗಲೇ ಅನೇಕ ಜನರು ಹೇಳುತ್ತಿದ್ದಾರೆ. ನಮಗೆ ಇದ್ದರೆ ಒಳ್ಳೆಯದು ಎಂದು. ಇಂತಹ ಭಾವನೆ ಬರುವ ರೀತಿಯಲ್ಲಿ ಅವರನ್ನಾಕ್ರಮಿಸಿಕೊಂಡಿದೆ. ಆದುದರಿಂದ ಅಷ್ಟು ಜಾಗ್ರತೆ ಹತೋಟಿ ಆಜ್ಞೆ ಮತ್ತು ಪಡಿತರ ಪದ್ಧತಿಯನ್ನು ಹೋಗಲಾಡಿಸುವುದು ನಮ್ಮ ಕರ್ತವ್ಯ.

ನನಗಾದರೂ ಅನ್ನಿಸುತ್ತದೆ, ಎಲ್ಲಿಯವರೆಗೆ ನಾವು ಧೈರ್ಯ ಮಾಡುವುದಿಲ್ಲವೋ ಅಲ್ಲಿಯವರೆಗೂ ನಮಗೀಗ ಯಾವ ಭೀತಿಯಿದೆಯೋ, ಹತೋಟಿ ಆಜ್ಞೆಗಳನ್ನು ತೆಗೆದುಬಿಟ್ಟರೆ ದೇಶದಲ್ಲಿ ಎಲ್ಲಿ ಒಂದು ಭಯಂಕರ ಪರಿಸ್ಥಿತಿ ಉಂಟಾಗುತ್ತದೆಯೋ ಎಂಬ ಭೀತಿ ಇದ್ದೇ ಇರುತ್ತದೆ. ನನಗೆ ತೋರುವ ಮಟ್ಟಿಗೆ ಹಾಗೆ ಭೀತಿ ಪಡುವ ಅಗತ್ಯವೇನೂ ಇಲ್ಲವೆಂದು ಕಾಣುತ್ತದೆ. ತಾವು ಸ್ವಲ್ಪ ಧೈರ್ಯ ಮಾಡಬೇಕು ಅಷ್ಟೆ. ಸರಿಯಾದ ದಿಗ್ಬಂಧನಗಳನ್ನು ಮಾಡಿಟ್ಟುಕೊಂಡು ಹತೋಟಿ ಆಜ್ಞೆಗಳನ್ನು ತೆಗೆದರೆ ಏನೂ ತೊಂದರೆಯಾಗುವುದಿಲ್ಲ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಧೈರ್ಯಕ್ಕೇನೂ ಕಡಿಮೆ ಇಲ್ಲ !

ಹಿಂದೊಮ್ಮೆ ಮಹಾತ್ಮ ಗಾಂಧಿಯವರ ಸಲಹೆಯ ಮೇಲೆ ಈ ಹತೋಟಿ ಆಜ್ಞೆಗಳನ್ನು ತೆಗೆದಿತ್ತು. ಅದರ ಫಲವಾಗಿ ಬಹು ಜಾಗ್ರತೆಯಾಗಿ ಎಲ್ಲಾ ಕಡೆಯಲ್ಲೂ ಅನುಕೂಲವಾದ ಬೆಲೆಗಳಲ್ಲಿ ರಾಗಿ, ಅಕ್ಕಿ ವ್ಯಾಪಾರವಾಗಲು ಪ್ರಾರಂಭವಾಯಿತು. ತಮಗೆ ಗೊತ್ತಿರುವ ಹಾಗೆ ರೂಪಾಯಿಗೆ 6 ಸೇರು, 8 ಸೇರು ಕೂಡ ಆಯಿತು.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಷ್ಟು ದಿವಸ ಹಾಗಿತ್ತು ?

ಶ್ರೀ ಟಿ. ಮಾದಯ್ಯಗೌಡರು.—ಸ್ವಲ್ಪ ದಿವಸವೇನೋ ಹೌದು. ಆದರೂ ಹಾಗಾಗುವುದಕ್ಕೆ ಕಾರಣವಿದೆ. ನೀವು ಹಾಗೆ ಹತೋಟಿ ತೆಗೆಯುವುದಕ್ಕೆ ಮುಂಚೆ ಯಾವ ಅಷ್ಟದಿಗ್ಬಂಧನ ಮಾಡಿಕೊಳ್ಳಬೇಕಾಗಿತ್ತೋ ಅದನ್ನು ಮಾಡಿಕೊಳ್ಳದುದರಿಂದ ಹೀಗಾಯಿತು, ಅಷ್ಟೆ. ಆದ್ದರಿಂದ ತಾವು ಸರಿಯಾಗಿ ಮಾಡಬೇಕಾದ್ದನ್ನೆಲ್ಲಾ 3-4 ತಿಂಗಳ ಹಿಂದೆಯೇ ಮಾಡಿಕೊಂಡರೆ ಮುಂದೆ ಸುಲಭವಾಗಿ ಹತೋಟಿ ಆಜ್ಞೆಗಳನ್ನು ತೆಗೆದು ಹಾಕಬಹುದು. ಇದರಿಂದ ದೇಶಕ್ಕೆ ಪ್ರಯೋಜನವಾಗುತ್ತದೆ. ಮುಖ್ಯವಾಗಿ ನೀವು ಧೈರ್ಯವಾಗಿ ಮುನ್ನುಗ್ಗಬೇಕು.

---

* Speech not revised by the Hon'ble Member concerned.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಷ್ಟೊಂದು ಅಭಿಪ್ರಾಯಗಳಿದ್ದರೂ ಸರ್ಕಾರದವರು ಈ ಕಂಟ್ರೋಲ್ ಆಜ್ಞೆಯನ್ನು ಇನ್ನೂ ಇಟ್ಟುಕೊಂಡಿದ್ದಾರಲ್ಲಾ! ಅದು ಸರ್ಕಾರಂದ ಧೈರ್ಯವಲ್ಲವೆ?

ಶ್ರೀ ಟಿ. ಮಾದಯ್ಯಗೌಡರು.—ಇದಕ್ಕೆ ಮುಖ್ಯವಾಗಿ ಏನು ಏರ್ಪಾಡು ಮಾಡಿಕೊಳ್ಳಬೇಕು ಎಂದರೆ, ಶ್ರೀಮಾನ್ ಸುಬ್ರಹ್ಮಣ್ಯರವರು ಅಪ್ಪಣೆ ಕೊಡಿಸಿದ ಹಾಗೆ ನಾನಾ ಕಾರಣಗಳಿಂದ ನಮ್ಮ ದೇಶದ ದವಸ ಹೊರಗಡೆ ಹೋಗುತ್ತಿರುವುದನ್ನು ತಪ್ಪಿಸಬೇಕು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಒಂದು ತರದ ಕಂಟ್ರೋಲೇ!!

ಶ್ರೀ ಟಿ. ಮಾದಯ್ಯಗೌಡರು.—ಕೊಂಚ ಕಾಲ ಅದು ಅಗತ್ಯ, ನಮ್ಮ ದೇಶದ ಗಡಿಯಲ್ಲಿ ಕೊಳ್ಳೆಗಾಲ, ಕಾನಕಾನಹಳ್ಳಿ, ಹೊಸೂರು, ಹರಿಹರ ಮುಂತಾದ ಕೆಲವು ಕಡೆಗಳಲ್ಲಿ ಕೆಲವು ಕನ್ನಗಂಡಿಗಳಿವೆ. ಅವುಗಳನ್ನು ಭದ್ರಪಡಿಸಿ ನಮ್ಮ ದೇಶದ ದವಸ ನಮ್ಮ ದೇಶದಲ್ಲೇ ಇರುವಂತೆ ಕಟ್ಟುನಿಟ್ಟನ್ನು ಮಾಡಿಕೊಂಡರೆ ಬಹಳ ಸಹಾಯವಾಗುತ್ತದೆ.

ಎರಡನೆಯದಾಗಿ, ಇಲ್ಲಿ ಉತ್ಪನ್ನವಾಗುವ ಬೆಳೆ ನಾನಾ ಕಾರಣಗಳಿಂದ ದಿನೇ ದಿನೇ ಕಡಿಮೆಯಾಗುತ್ತಿದೆಯೆಂದು ಕಂಡುಬರುತ್ತಿದೆ. ರೈತರಿಗೆ ಹೆಚ್ಚಿಗೆ ಪ್ರೋತ್ಸಾಹ ಕೊಟ್ಟು ಅವರು ಹೆಚ್ಚು ಬೆಳೆ ಬೆಳೆಯುವಂತೆ ಮಾಡಬೇಕು. ಈಗ ಬಂದಿರತಕ್ಕ ಕಷ್ಟನಿಷ್ಠೂರಗಳನ್ನು ಕಡಿಮೆ ಮಾಡಬೇಕೆಂದು ಹೇಳಿ ದವಸ ಧಾನ್ಯಗಳಿಗೆ ಹೆಚ್ಚಿಗೆ ಧಾರಣೆವಾಸಿಗಳನ್ನು ಹೆಚ್ಚಿಸಿ ಕೊಡಬೇಕು. ಧಾರಣೆ ವಾಸಿಗಳನ್ನು ಹೆಚ್ಚಿಗೆ ಮಾಡಿದರೆ ರೈತರು ವ್ಯಾಪಾರದ ಬೆಳೆಗಳನ್ನು ಬೆಳೆಯಲಿಕ್ಕೆ ಹೆಚ್ಚಿಗೆ ಗಮನ ಕೊಡದೆ ಆಹಾರ ಪದಾರ್ಥಗಳನ್ನು ಬೆಳೆದು ದೇಶಕ್ಕೆ ಒದಗಿಸುತ್ತಾರೆ. ಇದರಿಂದ ಬಹುಮಟ್ಟಿಗೆ ನಮ್ಮ ಆಹಾರದ ಪರಿಸ್ಥಿತಿ ಉತ್ತಮಗೊಳಿಸಲು ಸಾಧ್ಯವಾಗುತ್ತದೆ.

ಇದರ ಜೊತೆಗೆ ಸರ್ಕಾರದವರು ಇನ್ನೊಂದು ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಧಾನ್ಯಗಳಿಗೆ ಪರಮಾವಧಿ ಬೆಲೆಗಳನ್ನು ನಿಗದಿ ಮಾಡಿ, ವರ್ತಕರೇ ಆಗಲಿ, ಬೆಳೆಯುವವರೇ ಆಗಲಿ ಯಾರೂ ಆ ನಿಗದಿಯಾದ ದರಗಳಿಗಿಂತ ಹೆಚ್ಚಾಗಿ ಮಾರಕೂಡದೆಂದು ಆಜ್ಞೆ ಮಾಡಿ, ಅದಕ್ಕೆ ಹೆಚ್ಚಿಗೆ ಮಾರಿದರೆ ಅವರು ಶಿಕ್ಷಾರ್ಹರಾಗುತ್ತಾರೆಂದು ಹೇಳಬೇಕು. ಇದರಿಂದ ದವಸಧಾನ್ಯಗಳನ್ನು ಶೇಖರಿಸಿ ಬಚ್ಚಿಡುವವರಿಗೂ ತಮಗೆ ಎಂದಿಗೂ ಹೆಚ್ಚಿಗೆ ಬೆಲೆಗಳು ಸಿಕ್ಕಲಾರವೆಂದು ಗೊತ್ತಾಗಿ, ಶೇಖರಿಸಿಡುವುದರಿಂದ ಪ್ರಯೋಜನವಿಲ್ಲವೆಂದು ಬುದ್ಧಿಬರುತ್ತದೆ ಆದ್ದರಿಂದ ಒಂದು ನಿಗದಿಯಾದ ಬೆಲೆಯನ್ನು ಕಟ್ಟುನಿಟ್ಟಾಗಿ ರೂಢಿಗೆ ತರಬೇಕು. ಒಂದು ವೇಳೆ ಯಾರಾದರೂ ಹಾಗೆ ಬಚ್ಚಿಟ್ಟರೆ ಅದನ್ನು ತಕ್ಷಣ ಸರ್ಕಾರಕ್ಕೆ ವಶಪಡಿಸಿಕೊಳ್ಳುವ ಅಧಿಕಾರ ಸರ್ಕಾರದವರಿಗಿರಬೇಕು. ಹಾಗೆ ವಶಪಡಿಸಿಕೊಂಡರೂ ಅವರಿಗೆ ಕೊಡತಕ್ಕ ಬೆಲೆಯಾದರೂ ಸರ್ಕಾರದವರು ಗೊತ್ತುಮಾಡಿರುವ ಪರಮಾವಧಿ ದರಕ್ಕಿಂತ ಹೆಚ್ಚಿಗೆ ಅಲ್ಲ. ಹೀಗೆ ಮಾಡಿದರೆ ಹಿಂದೆ ಯಾವ ರೀತಿ ಕಂಟ್ರೋಲ್ ತೆಗೆದುಹಾಕಿದಾಗ ಎಲ್ಲರೂ ಬಚ್ಚಿಟ್ಟು ಪುನಃ ಕಂಟ್ರೋಲ್‌ಗಳು ಬರುವಂತೆ ಮಾಡಿದರೋ ಅಂಥ ಪರಿಸ್ಥಿತಿ ಬರುವುದಕ್ಕೆ ಅವಕಾಶವಿರುವುದಿಲ್ಲ.

ಆದ್ದರಿಂದ ದವಸಗಳು ಶೇಖರಿಸಿ ಬಚ್ಚಿಡುವವರಿಗೆ ಅವಕಾಶವಿಲ್ಲದಂತೆ ಪ್ರತಿಬಂಧಕ ಹಾಕುವುದು, ಸರಿಯಾದ ನಿಗದಿಯಾದ ದರವನ್ನು ಗೊತ್ತುಮಾಡುವುದರಿಂದ ಈ ಹತೋಟಿ ಆಜ್ಞೆಗಳು ಸುಲಭವಾಗಿ ಹೋಗಲಾಡಿಸಬಹುದು. ಆಮೇಲೆ ಪರಿಸ್ಥಿತಿ ಒಂದು ಸ್ಥಿತಿಗೆ ತಕ್ಕೆ ಬಂದು ಉತ್ಪನ್ನ ಮತ್ತು ಖರ್ಚುಗಳನ್ನು ಸರಿತೂಗಿಸಬಹುದಾದ ಕಾಲದಲ್ಲಿ ನಾವೇನೂ ಕಡ್ಡಾಯವಾದ ಬಂಧನಗಳನ್ನು ಹಾಕಿದ್ದೇವೋ ಅದನ್ನು ಕಮ್ಮಿ ಮಾಡಿಕೊಂಡು ಬರಬಹುದು. ಆದ್ದರಿಂದ ಮುಖ್ಯವಾಗಿ ಈಗಿರುವ ಕಂಟ್ರೋಲನ್ನು ತೆಗೆಯಬೇಕಾದರೆ ಹೊಸದಾಗಿ ಕೆಲವು ಬೇರೆ ಕಂಟ್ರೋಲುಗಳನ್ನು ಹಾಕಬೇಕಾಗುತ್ತದೆ. ಇದರಿಂದ ಯಾವ ಭೀತಿ ಅಥವ ಕಳವಳಕ್ಕೆ ಅವಕಾಶವಿಲ್ಲದ ಹಾಗೆ ಬಹು ಜಾಗ್ರತೆ ಕಂಟ್ರೋಲುಗಳನ್ನು ತೆಗೆದುಹಾಕುವುದರಿಂದ ಉಂಟಾಗಬಹುದಾದ ದುಷ್ಪರಿಣಾಮಗಳನ್ನೂ ಹೋಗಲಾಡಿಸಬಹುದೆಂದು ನನಗನ್ನಿಸುತ್ತದೆ.

ನನ್ನ ಅಭಿಪ್ರಾಯದಲ್ಲಿ ಈಗ ಶ್ರೀಮಾನ್ ಮಂಜಪ್ಪನವರು ತಂದಿರುವ ನಿರ್ಣಯದಲ್ಲಿ ಕೆಲವು ಕಡೆಗಳಲ್ಲಿ ಈ ಕಂಟ್ರೋಲ್ ಆಜ್ಞೆಗಳನ್ನೂ ಇಟ್ಟುಕೊಳ್ಳಬೇಕೆಂದು ಅಭಿಪ್ರಾಯಪಟ್ಟಿರುವಂತೆ ತೋರುತ್ತದೆ. ಕೆಲವು ಕಡೆಗಳಲ್ಲಿ ಹತೋಟಿಯಿಟ್ಟುಕೊಂಡು ಬಾಕಿ ಎಲ್ಲಾ ಕಡೆಯಲ್ಲೂ ತೆಗೆಯಬೇಕೆಂದು ಹೇಳಿದರೆ, ಅದು ಯಾವ ಕಾಲದಲ್ಲಿ ಹಾಗೆ ಮಾಡಿದರೆ ಸರಿಹೋಗುತ್ತದೆಂಬುದನ್ನು ಸ್ವಲ್ಪ ಯೋಚನೆಮಾಡಬೇಕು. ಈಗ ಸುಗ್ಗಿ ಕಾಲ ಕಳೆದುಹೋಗಿ ಸರ್ಕಾರದವರು ಎಲ್ಲಾ ದವಸವನ್ನೂ ಶೇಖರಣೆ ಮಾಡಿಕೊಂಡು, ಹಳ್ಳಿನಾಡಿನಲ್ಲಿ ದವಸಧಾನ್ಯಗಳನ್ನೇನನ್ನೂ ಬಿಡದೆ ಇರುವಾಗ ಕಂಟ್ರೋಲ್ ತೆಗೆದುಬಿಟ್ಟರೆ ಏನಾಗುತ್ತದೆಂಬುದನ್ನು ಯೋಚನೆ ಮಾಡಿ. ಹಳ್ಳಿಗಾಡಿನಲ್ಲಿ ದವಸಧಾನ್ಯಗಳೇನೂ ಹೆಚ್ಚಿಗೆ ಇರುವುದಿಲ್ಲ. ಅವರಿಗೆ ನೀವೇನೂ ಡಿಪೋಗಳನ್ನಿಟ್ಟು ಹಂಚುವುದಿಲ್ಲ. ಪಟ್ಟಣವಾಸದಲ್ಲೇನೋ ಪರವಾಗಿಲ್ಲ. ಆದರೆ ಹಳ್ಳಿಗಾಡುಗಳಲ್ಲಾದರೋ ಇಂಥ ಸಂದರ್ಭದಲ್ಲಿ ತೆಗೆದುಬಿಟ್ಟರೆ ಹಳ್ಳಿಗಾಡಿನವರಿಗೆ ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ಇದನ್ನು ಪರಿಹಾರ ಮಾಡಬೇಕಾದರೆ ಕಾಲವರಿತು ಹತೋಟಿ ಆಜ್ಞೆಗಳನ್ನು ತೆಗೆಯಬೇಕು. ನನ್ನ ದೃಷ್ಟಿಯಲ್ಲಿ, ನೀವು ಯಾವಾಗ ಹೊರಗಡೆಯಿಂದಬೇಕಾದಷ್ಟು ದವಸ ತರಿಸಬಹುದೋ ಅಥವಾ ತಾವು ಹೆಚ್ಚಿಗೆ ಕೂಡಿಟ್ಟುಕೊಳ್ಳುವ ದವಸವನ್ನು ನೋಡಿಕೊಂಡು ಸಾಮಾನ್ಯವಾಗಿ ಎಲ್ಲರಲ್ಲೂ ದವಸವಿರುವ ಕಾಲವನ್ನೂ ನೋಡಿಕೊಂಡು, ಅಗಲೂ ಸರಿಯಾದ ರಕ್ಷಣೆಗಳನ್ನಿಟ್ಟುಕೊಂಡು ಈ ಹತೋಟಿ ಆಜ್ಞೆಗಳನ್ನು ತೆಗೆದರೆ ಯಾವ ಅನಾನುಕೂಲವೂ ಆಗುವುದಿಲ್ಲ. ಯಾವ ದುಷ್ಪರಿಣಾಮಗಳೂ ಇರುವುದಿಲ್ಲ. ಯಾರಿಂದಲೂ ಬಾಧಕವೂ ಆಗುವುದಿಲ್ಲ. ಹಾಗಿಲ್ಲದೆ ಈಗಲೆ ತೆಗೆದುಬಿಟ್ಟು ಪಟ್ಟಣವಾಸಿಗಳನ್ನು ಮಾತ್ರ ಸುರಕ್ಷಿತವಾಗಿ ನೋಡಿಕೊಳ್ಳುತ್ತೇವೆ, ಇಲ್ಲದಿದ್ದರೆ ಅವರು ಅಠಾರಾ ಕಚೇರಿಗಳಿಗೆ ಬಂದು ಗಲಾಟೆ ಮಾಡಿಯಾರು ಎಂದು ಹೇಳಿ ಅವರಿಗೆ ಮಾತ್ರ ಏರ್ಪಾಡು ಮಾಡಿ ಕಂಟ್ರೋಲ್ ಆಜ್ಞೆಗಳನ್ನು ತೆಗೆದುಬಿಡುವುದನ್ನು ನಾನು ಒಪ್ಪುವುದಿಲ್ಲ.

ಒಟ್ಟಿನಲ್ಲಿ ಈ ಹತೋಟಿ ಆಜ್ಞೆಗಳು ಅದಷ್ಟು ಜಾಗ್ರತೆ ಹೋಗಬೇಕು. ಎಷ್ಟು ಜಾಗ್ರತೆ ತೆಗೆದರೆ ಅಷ್ಟೂ ಕ್ಷೇಮ. ತೆಗೆಯುವಾಗ ಮಾತ್ರ ಕಾಲವರಿತು ತಕ್ಕ ರಕ್ಷಣೆಗಳನ್ನು ಮಾಡಿಟ್ಟುಕೊಂಡು ತೆಗೆಯುವುದು ಒಳ್ಳೆಯದು. ಆದ್ದರಿಂದ ಏನೇನು ಒಳ್ಳೆಯ ಏರ್ಪಾಡುಗಳನ್ನು ಮಾಡಿಕೊಳ್ಳಬೇಕೋ ಅವೆಲ್ಲವನ್ನೂ ಮಾಡಿಕೊಂಡು ಈ ಹತೋಟಿಯನ್ನು ತೆಗೆಯಬೇಕೆಂದು ನಾನು ಹೃತ್ಪೂರ್ವಕವಾಗಿ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಆಹಾರ ಹತೋಟಿಗಳ ವಿಚಾರವಾಗಿ ನಾವುಗಳು ಒಂದು ಭಾವೋದ್ರೇಕಪೂರಿತವಾಗಿ,

ಅಥವಾ ಉದ್ರೇಕದಿಂದ ಕೂಡಿದವರಾಗಿ ಈ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಲಿಕ್ಕೆ ಹೋದರೆ ಅದರಿಂದ ಅಷ್ಟೇನೂ ಪ್ರಯೋಜನವಾಗಲಾರದು. ಅದಕ್ಕಾಗಿ ನಾವು ಸಮಯಾನುಕೂಲಗಳನ್ನರಿತು ನಡೆಯುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀಮಾನ್ ಬಿ. ಹುಚ್ಚೇಗೌಡರು ಈ ಕಂಟ್ರೋಲುಗಳೆಲ್ಲಕ್ಕೂ ಈ ಕಾಂಗ್ರೆಸ್ ಸರ್ಕಾರವೇ ಕಾರಣವೆಂದು ಹೇಳುತ್ತ ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಈ ಹತೋಟಿ ಆಜ್ಞೆಗಳೆಲ್ಲಾ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಬಂದಂಥವುಗಳೇನೂ ಅಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮೊದಲೇ ಈ ಆಜ್ಞೆಗಳೆಲ್ಲಾ ಜಾರಿಯಲ್ಲಿದ್ದವು. ದೇಶದಲ್ಲಿರತಕ್ಕ ಪ್ರಜೆಗಳಿಗೆಲ್ಲರಿಗೂ, ಮತ್ತು ಎದುರುಪಕ್ಷದ ಮಾನ್ಯ ಸದಸ್ಯರುಗಳಿಗೂ ಈ ಹತೋಟಿ ಆಜ್ಞೆಗಳೆಲ್ಲಾ ಎಷ್ಟು ಬೇಗ ಹೋದರೆ ಅನುಕೂಲವೆಂದು ಹೇಳುತ್ತಿದ್ದಾರೋ ನಮಗೂ ಅಷ್ಟೇ ಬೇಗ ಹೋಗಬೇಕೆಂಬ ಆಸೆಯಿದೆ. ಆದರೆ ಹಾಗೆ ಮಾಡಲು ಇದನ್ನು ಏಕ್‌ದಂ ತೆಗೆದುಹಾಕಿಬಿಡಿ ಎಂದು ಹೇಳತಕ್ಕದ್ದು ಬೇಜವಾಬ್ದಾರಿಯ ಮಾತಾಯಿತು. ಜವಾಬ್ದಾರಿಯುತವಾಗಿ ಇದನ್ನು ಮಾಡಬೇಕೆಂಬ ಅಭಿಪ್ರಾಯ ನಮ್ಮದು. ಹೀಗೆ ಅವರ ಅಭಿಪ್ರಾಯಕ್ಕೂ, ನಮ್ಮ ಅಭಿಪ್ರಾಯಕ್ಕೂ ಇರತಕ್ಕ ವ್ಯತ್ಯಾಸ ಇಷ್ಟೆ. ಹಾಗೊಂದುವೇಳೆ ಈ ಹತೋಟಿ ಆಜ್ಞೆಗಳನ್ನು ಏಕಾಏಕಿ ತೆಗೆದುಹಾಕಿದರೆ, ದೇಶದಮೇಲೆ ಮತ್ತು ಜನರ ಮೇಲೆ ಇದರಿಂದ ಏನು ಪರಿಣಾಮಗಳುಂಟಾಗಬಹುದೆಂಬುದನ್ನು ಕೂಲಂಕಷವಾಗಿ ಆಲೋಚನೆ ಮಾಡಿ ತೆಗೆಯಬೇಕೆಂಬುದೇ ನನ್ನ ಅಭಿಪ್ರಾಯ. ಹೀಗೆ ಮಾಡಿದರೆ ದೇಶಕ್ಕೆ ಪ್ರಯೋಜನಕಾರಿಯಾಗುತ್ತೆ. ಈಗ ಮಾನ್ಯ ಹುಚ್ಚೇಗೌಡರು ತುಂಕೂರು ಜಿಲ್ಲಾ ಬೋರ್ಡಿಗೆ ಅಧ್ಯಕ್ಷರಾಗಿರುತ್ತಾರೆ. ಈ ದಿವಸ ತುಂಕೂರು ಜಿಲ್ಲೆಯಲ್ಲಿರತಕ್ಕ ರಸ್ತೆಗಳೆಂದೂ ಸರಿಯಾದ ಸ್ಥಿತಿಯಲ್ಲಿಲ್ಲವೆಂದು ಹೇಳಿದರೆ—ಅದಕ್ಕೆ ಶ್ರೀಮಾನ್ ಹುಚ್ಚೇಗೌಡರು ಅಧ್ಯಕ್ಷರಾಗಿರತಕ್ಕ ಆ ಜನತಾ ಸಂಘವೇ ಕಾರಣವೆಂದು ಹೇಳುವುದಕ್ಕಾಗುತ್ತದೆಯೋ? ಈ ಸಂದರ್ಭದಲ್ಲಿಯೂ ಸಹ ಅದೇ ರೀತಿಯಾಗಿ ದೇಶದಲ್ಲಿ ಉಂಟಾಗಿರತಕ್ಕ ಎಲ್ಲಾ ಬದಲಾವಣೆಗಳಿಗೂ ಕಾಂಗ್ರೆಸ್ಸೇ ಜವಾಬ್ದಾರಿಯೆಂದು ಹೇಳುವುದಕ್ಕಾಗುವುದಿಲ್ಲ. ಭಾಷಣ ಮಾಡುವಾಗ ಮಾನ್ಯ ಸದಸ್ಯರುಗಳು ಈ ಅಂಶಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿಕೊಂಡು ಮಾತನಾಡಿದರೆ ಚೆನ್ನಾಗಿರುತ್ತದೆ. ದೇಶದಲ್ಲಿ ಆಹಾರವನ್ನು ಸದಾ ಹಂಚಬೇಕೆಂದು ಹೇಳುವುದು ಸರಿಯೆಂದು ಯಾರೂ ಹೇಳುವುದಿಲ್ಲ. ಅಥವಾ ಇದನ್ನು ಸದಾ ಇಡಲೇಕೆಂಬ ಅಭಿಪ್ರಾಯ ಸಹ ಯಾರಿಗೂ ಇಲ್ಲ ಆದರೆ ಹಿಂದೆ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಗುಂಡಪ್ಪಗೌಡರು, ಅವರು ಮಂತ್ರಿಗಳಾಗಿದ್ದಾಗ ಏನು ಹೇಳಿದ್ದರೆಂಬುದನ್ನು ಗಮನದಲ್ಲಿಟ್ಟುಕೊಂಡಿದ್ದರೆ, ನಿನ್ನೆಯದಿವಸ ಅವರು ಹಾಗೆ ಮಾತನಾಡುತ್ತಿರಲಿಲ್ಲ. The menace of after-war effects will be much worse than war menace you must know. 1918ನೆಯ ಇಸವಿಯಲ್ಲಿ ಯುದ್ಧ ಮುಗಿದು ಹೋದಮೇಲೆ ಈ ಹತೋಟಿ ಆಜ್ಞೆಗಳೆಲ್ಲ ಪ್ರಾರಂಭವಾಗಿ, ಅದರಿಂದ ಜನರಮೇಲೆ ಅನೇಕ ದುಷ್ಪರಿಣಾಮಗಳುಂಟಾದುವು. ಯುದ್ಧ ಕಾಲದಲ್ಲಿ ಏನಾದರೂ ಮಾಡಿ ಈ ಆಹಾರ ಧಾನ್ಯಗಳನ್ನು ಸಂಗ್ರಹಮಾಡಿ, ಯುದ್ಧದಲ್ಲಿ ತೊಡಗಿರತಕ್ಕ ಜನರಿಗೆ ಆಹಾರವನ್ನು ಒದಗಿಸುತ್ತಾರೆ. ಆದರೆ ಅದರ ದುಷ್ಪರಿಣಾಮವೇನಿದ್ದರೂ ಯುದ್ಧಾನಂತರ ಜನರಮೇಲೆ ಉಂಟಾಗುತ್ತದೆ. ಯುದ್ಧಕ್ಕೆ ಮುಂಚಿತವಾಗಿ ಎಷ್ಟು ಜಮೀನು ವ್ಯವಸಾಯವಾಗುತ್ತಿತ್ತು, ಈಗ ಎಷ್ಟು ವ್ಯವಸಾಯವಾಗುತ್ತಿದೆ ಎಂಬುದನ್ನು ನೋಡಿದರೆ, ಅನೇಕ ಭೂಮಿಗಳು ಇಂದು ಸಾಗುವಳಿಯಿಲ್ಲದೆ ಬಿದ್ದಿರತಕ್ಕದ್ದು ಕಂಡುಬಂದಿದೆ. ಅದಕ್ಕೋಸ್ಕರವಾಗಿ ಈ ವ್ಯವಸಾಯವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಅಪಾರ ಹಣವನ್ನು ಖರ್ಚುಮಾಡಿ ಅನೇಕ ದೊಡ್ಡದೊಡ್ಡ ನೀರಾವರಿ ಕಾಂಗಾರಿಗಳನ್ನು ಮಾಡಿಸುತ್ತಿದ್ದಾರೆ. ಬಾವಿಗಳನ್ನು ತೆಗೆಸಲು ರೈತರಿಗೆ ಧನಸಹಾಯ ಮಾಡುತ್ತಿದ್ದಾರೆ. ಹೀಗೆ ನಾನಾ ಮುಖದಲ್ಲೂ ಪ್ರಯತ್ನಪಟ್ಟು ಈ ಆಹಾರ ಪರಿಸ್ಥಿತಿಯನ್ನು ಆದಷ್ಟು ಬೇಗ ಹತೋಟಿಗೆ ತರಲು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಆದರೆ ಈ ಬದುಕು ಒಂದೇ ರಾತ್ರಿಯಲ್ಲಿ ಮಾಡಿ ಮುಗಿಸುವಂಥಾದ್ದಲ್ಲ; ಅಥವ ಅಷ್ಟು ಬೇಗ ಬದಲಾವಣೆ ಮಾಡಲು ಮನುಷ್ಯಮಾತ್ರರಿಗೆ ಸಾಧ್ಯವಿಲ್ಲ. ಹೀಗೆ ದೇಶದ ನಾನಾ ಭಾಗಗಳಲ್ಲೂ ಈ ವ್ಯವಸಾಯಕ್ಕೆ ಉತ್ತೇಜನ ಕೊಡಲು ಕೇಂದ್ರ ಸರ್ಕಾರದವರೂ ಕೂಡ ಒಂದು ದೊಡ್ಡದಾದ 'ದಾಮೋದರ್' ಪ್ರಾಜೆಕ್ಟು ಎಂಬುದನ್ನು ರಚಿಸುತ್ತಿದ್ದಾರೆ. ಅದೇರೀತಿ ನಮ್ಮ ಮೈಸೂರಿನಲ್ಲೂ ಕೂಡ ಲಕ್ಕವಳ್ಳಿ ಇತ್ಯಾದಿ ನೀರಾವರಿ ಕಾಂಗಾರಿಗಳನ್ನು ಕೈಗೊಂಡಿದ್ದಾರೆ. ಚಿತ್ರದುರ್ಗ ಜಿಲ್ಲೆಯೊಂದರಲ್ಲೇ ಸಂಗೇನಹಳ್ಳಿ ಪ್ರಾಜೆಕ್ಟು, ಪರಶುರಾಮಪುರ ಪ್ರಾಜೆಕ್ಟು, ತುಪ್ಪದಹಳ್ಳಿ ಪ್ರಾಜೆಕ್ಟು ಮತ್ತು ಮುತ್ತುಗದೂರು, ಗಡಿಮಾಕುಂಟೆ ಪ್ರಾಜೆಕ್ಟು ಎಂಬುವುಗಳನ್ನು ಮಾಡಿ, ಇದೇರೀತಿ ಇನ್ನೂ ಅನೇಕ ಕಡೆ ಮಾಡಲು ಯೋಜನೆಗಳನ್ನು ತಯಾರಿಸಿದ್ದಾರೆ. ಇದರಿಂದ ಸುಮಾರು ಒಂದೆರಡುಸಾವಿರ ಎಕರೆ ಜಮೀನು ಒಂದೊಂದುಕಡೆ ಸಾಗುವಳಿಗೆ ಬರಲು ಅನುಕೂಲವಾಗಿರುತ್ತೆ.

ಶ್ರೀ ಬಿ. ಚನ್ನಬೈರೇಗೌಡರು.—ತಾವೇನು ಈ ನಿರ್ಣಯದ ಪರವಾಗಿ ಮಾತನಾಡುತ್ತಿದ್ದೀರೋ ಅಥವಾ ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದೀರೋ?

ಶ್ರೀ ಎ ಭೀಮಪ್ಪನಾಯಕರು.—ಆಹಾರ ಆಜ್ಞೆಗಳನ್ನು ನಿಧಾನವಾಗಿ ತೆಗೆಯಬೇಕೆಂದೂ, ನಿಮ್ಮ ಅಭಿಪ್ರಾಯವಿರುವ ಹಾಗೆ ಬೇಜವಾಬ್ದಾರಿಯಾಗಿ, ಇದನ್ನು ತಕ್ಷಣ ತೆಗೆಯಬಾರದೆಂದೂ, ಹಾಗೆ ತಕ್ಷಣ ತೆಗೆದುಬಿಟ್ಟರೆ ಜವಾಬ್ದಾರಿಬದ್ಧರತಕ್ಕವರ ಮೇಲೆ ಏನು ಆರೋಪಣೆಗಳಾಗಬಹುದು, ಅಥವಾ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಈ ಪಡಿತರ ವ್ಯವಸ್ಥೆಯನ್ನು ತೆಗೆದುಹಾಕಿ ಕೇವಲ ದೊಡ್ಡದೊಡ್ಡ ಪಟ್ಟಣಗಳಲ್ಲಿ ಮಾತ್ರ ಇಟ್ಟುಕೊಳ್ಳುವುದು ಸೂಕ್ತವಾದುದೇ, ಅಥವಾ ಶ್ರೀಮಾನ್ ಚೆನ್ನಬಸಪ್ಪನವರು ತಿಳಿಸಿದ ಪ್ರಕಾರ ಎಲ್ಲ ಆಹಾರ ಧಾನ್ಯಗಳನ್ನೂ ಹೊರಗಿನಿಂದಲೇ ಸಂಗ್ರಹಿಸಿ, ಪಡಿತರ ವ್ಯವಸ್ಥೆಯಿರತಕ್ಕ ಸ್ಥಳಗಳಿಗೆ ಹಂಚಿ, ದೇಶಾದ್ಯಂತವೂ ಇದನ್ನು ತೆಗೆದುಹಾಕಬೇಕೆಂದು ತಿಳಿಸಿರತಕ್ಕದ್ದು ಸೂಕ್ತವೇ ಎಂಬೀ ಮಹಾಜನರುಗಳ ಅಭಿಪ್ರಾಯಗಳನ್ನು ತಿಳಿದು, ತದನುಗುಣವಾಗಿ ಮಾಡತಕ್ಕದ್ದೇ ಜವಾಬ್ದಾರಿ ಸರ್ಕಾರದ ಲಕ್ಷಣವೆಂಬುದನ್ನು ನಾನೀಗ ತಮಗೆ ತಿಳಿಸಬೇಕಾಗಿದೆ. ಈ ಪಡಿತರ ವ್ಯವಸ್ಥೆಯಿರತಕ್ಕದ್ದು ಕೇವಲ ನಮ್ಮ ದೇಶವೊಂದರಲ್ಲೇ ಅಲ್ಲ; ಇಂಗ್ಲೆಂಡಿನಲ್ಲಿದೆ; ಅಮೇರಿಕಾ ದೇಶದಲ್ಲಿ ಕೂಡ ಜಾರೀಲಿದೆ. ಆದರೆ ನಾವು ಹಾಗೆ ಹೊರದೇಶಗಳಿಂದ ಆಹಾರ ವಸ್ತುಗಳನ್ನು ತರಿಸಿಕೊಳ್ಳಬೇಕಾಗಿದ್ದರೆ, ಹೆಚ್ಚು ಧಾರಣೆಗಳನ್ನು ಕೊಡಬೇಕಾಗಿರುತ್ತೆ. ಇದಕ್ಕಾಗಿ ಹೆಚ್ಚು ಹಣ ಬೇಕಾಗುತ್ತದೆ. ಆದರೆ

ಶ್ರೀ ಎ. ಭೀಮಪ್ಪನಾಯಕರು).

ಸ್ಟ್ಯಾಚುಟರಿ ಏರಿಯಾದಲ್ಲಿರುವ ಪ್ರಜೆಗಳ ಸಂಖ್ಯೆಯನ್ನು ಲೆಕ್ಕಕ್ಕೆ ತಗೆದುಕೊಂಡು ಅವರಿಗೆ ಮಾತ್ರ ಸೌಕರ್ಯ ನೀಡಲು ಈಗ ಎಕರೆಗೆ 2 ಪಲ್ಲಾ ಬೆಳೆಯುವ ಕಡೆ 3 ಪಲ್ಲಾ ಬೆಳೆಯುವಂತೆ ಮಾಡಿದರೆ ಅನುಕೂಲವಾಗುತ್ತದೆಂದು ಹೇಳಿದರೆ ದೇಶದಲ್ಲೆಲ್ಲಾ ಒಂದು ಸಮಾಧಾನ ನೆಲೆಸಲು ಸಾಧ್ಯವೇ ? ಅಥವಾ ಹೊರಗಡೆಯಿಂದ ಆಹಾರ ಧಾನ್ಯಗಳನ್ನು ತರಿಸಿ ಕೇವಲ ಇಂಥಾ ಒಂದು ಸ್ಟ್ಯಾಚುಟರಿ ಏರಿಯಾದಲ್ಲಿರತಕ್ಕವರಿಗೆ ಕೊಡುವುದೆಂದರೆ ಆ ನೀತಿ ಅಷ್ಟು ಸರಿಯಾದ್ದಲ್ಲ. ದೇಶದಲ್ಲಿರತಕ್ಕ ಪ್ರಜೆಗಳೆಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಬೇಕೆಂಬುದೇ ಪ್ರಜಾಸರ್ಕಾರದ ತತ್ವ. ಈ ತತ್ವಕ್ಕೆ ವಿರೋಧವಾಗಿ ಹೋಗತಕ್ಕದ್ದು ಸರಿಯಲ್ಲ. ಶ್ರೀಮಾನ್ ಎಚ್. ಕೆ. ವೀರಣ್ಣಗೌಡರು ಈ ವಿಚಾರವನ್ನು ಚೆನ್ನಾಗಿ ತಿಳಿಸಿದ್ದಾರೆ. ಹೀಗೆ ದೊಡ್ಡದೊಡ್ಡ ಪಟ್ಟಣಗಳಲ್ಲಿ ಮಾತ್ರ ಪಡಿತರ ವ್ಯವಸ್ಥೆಗಳನ್ನಿಟ್ಟು, ಗ್ರಾಮಾಂತರ ಪ್ರದೇಶದಲ್ಲಿ ಇವನ್ನು ತಗೆದುಹಾಕುವುದರಿಂದುಂಟಾಗಬಹುದಾದ ತೊಂದರೆಗಳೇನೆಂಬುದನ್ನೆಲ್ಲಾ ಅವರು ಚೆನ್ನಾಗಿ ವಿವರಿಸಿದ್ದಾರೆ. ಮದ್ರಾಸಿನಲ್ಲಿ ಈ ದಿವಸ ಹಾಗೆ ಮಾಡಿರತಕ್ಕದ್ದರಿಂದ ಅಲ್ಲಿನ ಪರಿಸ್ಥಿತಿಯೇನಾಗಿದೆಯೆಂಬುದನ್ನು ನಾನು ಆ ನೆರೆಹೊರೆಯವರಿಂದ ಚೆನ್ನಾಗಿ ತಿಳಿದುಕೊಂಡಿದ್ದೇನೆ. ಒಂದುವೇಳೆ ತಾವೇನಾದರೂ ಈ ದಿವಸ ಈ ಪಡಿತರ ವ್ಯವಸ್ಥೆಯನ್ನು ದೊಡ್ಡದೊಡ್ಡ ಪಟ್ಟಣಗಳಲ್ಲಿ ಮಾತ್ರ ಇಟ್ಟು ಗ್ರಾಮಾಂತರ ಪ್ರದೇಶದಲ್ಲಿ ತಗೆದುಬಿಟ್ಟದ್ದೇ ಆದರೆ, ಮುಂದಿನ ಚುನಾವಣೆ ಕಾಲದಲ್ಲಿ, ಶ್ರೀಮಾನ್ ಬಿ. ಹುಚ್ಚೇಗೌಡರು ಇದನ್ನೇ ಒಂದು ಅನುಕೂಲ ಮಾಡಿಕೊಂಡು, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆಲ್ಲಾ, ಈಗಿನ ಸರ್ಕಾರದವರಿಗೆ ನಿಮ್ಮ ಹಿತಕಾಯುವ ಪ್ರೇಮವಿಲ್ಲ, ಅವರ ಪ್ರೇಮವೇನಿದ್ದರೂ ಬರಿ ದೊಡ್ಡದೊಡ್ಡ ಪಟ್ಟಣಗಳಲ್ಲಿರತಕ್ಕವರಿಗೆ ಮಾತ್ರ ತೋರಿಸುತ್ತಿದ್ದಾರೆಂದು ತಿಳಿಸಲು ಒಂದು ಅವಕಾಶ ಮಾಡಿಕೊಳ್ಳಬಹುದು. ಹೀಗೆ ಜನರಲ್ಲಿ ಒಂದು ಭಿನ್ನಾಭಿಪ್ರಾಯಹುಟ್ಟಲು ಅವಕಾಶ ಕೊಡಬಾರದು. ಈಗ ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಜನರು ಈ ವ್ಯವಸಾಯದಲ್ಲಿ ನಿರತರಾಗಿದ್ದಾರೆ? ಹಾಗೆ ಅವರು ಬೆಳೆಯತಕ್ಕ ದವಸದಿಂದಲೇ ಎಷ್ಟು ಜನರು ಜೀವನ ಮಾಡುತ್ತಿದ್ದಾರೆ ? ಹಾಗೆ ವ್ಯವಸಾಯವನ್ನೇ ಮಾಡದೆ ಇರತಕ್ಕ ಜನಗೂ ಬಹಳವಾಗಿದ್ದಾರೆ, ಅಂದಮೇಲೆ ಹಾಗೆ ವ್ಯವಸಾಯ ಮಾಡದಿರತಕ್ಕವರೆಲ್ಲರೂ ಹೇಗೆ ಜೀವನ ನಡಸುತ್ತಿದ್ದಾರೆ? ಅವರಿಗೆ ಎಲ್ಲಿಂದ ಆ ಸಾಮಗ್ರಿಗಳು ದೊರೆಯುತ್ತಿವೆ? ಈ informal rationing area ದಲ್ಲಾದರೂ ತಾವು $\frac{3}{4}$ ಭಾಗದಷ್ಟು ಆಹಾರವನ್ನು ತಾವು ಒದಗಿಸುತ್ತಿದ್ದೀರಿ. ಆದರೆ ಹಾಗೆ ಬ್ಲಾಕ್ ಮಾರ್ಕೆಟ್‌ನಲ್ಲಿ ತಾರದೆಹೋದರೆ ಅವರಿಗೆ ಸಾಧ್ಯವೇ ಇಲ್ಲ. ಆದರೆ ಈದಿವಸ ಈ ಬ್ಲಾಕ್ ಮಾರ್ಕೆಟ್' ಒಂದರಿಂದಲೇ ದೇಶದಲ್ಲಿ ಅನ್ಯಾಯ, ಅನೀತಿಗಳು ಹುಟ್ಟಾಡವೆಂದು ಹೇಳುವುದು ಸರಿಯಲ್ಲ. ಈ ಅನೀತಿ–ಅನ್ಯಾಯಗಳೆಲ್ಲ ಎಂದು ಕಾಳಸಂತೆ ವ್ಯಾಪಾರ ಹುಟ್ಟಿತೋ ಅಂದೇ ಇವೆಲ್ಲಾ ಪ್ರಾರಂಭವಾದವು. ''ಅಪುಶಿಲ್ಲ'' ಎಂದು ಹೇಳಲು ಯಾರಿಂದಲೂ ಸಾಧ್ಯವಿಲ್ಲ. 'ಇಲ್ಲಾ' ಎಂದು ಯಾರಾದರೂ ಹೇಳಿದರೆ, ಅವರು ಹಾಗೆ ಹೇಳತಕ್ಕದ್ದೇ ಸುಳ್ಳು. ಅಂಥಾ ಮಹನೀಯರು ಯಾರಾದರೂ ಇದ್ದರೆ ಒಬ್ಬರಾದರೂ ಸಾಕು, ನಾನು ಅವರನ್ನು..........................

ಶ್ರೀ ಪಿ. ಎಸ್. ನಾರಾಯಣರಾಯರು.—'ನಾನು'

(ಸಭೆಯಲ್ಲಿ ಕೋಲಾಹಲ)

ಶ್ರೀ ಎ. ಭೀಮಪ್ಪನಾಯಕರು.—ಅದೆಲ್ಲವೂ ಇರಲಿ. ಆದರೆ ನಾನೀಗ ಹೇಳತಕ್ಕದ್ದು ಇಷ್ಟೆ—ಈಗಾಗಲೇ ಶ್ರೀಮಾನ್ ವೀರಣ್ಣಗೌಡರು ತಿಳಿಸಿರುವಂತೆ ಈ ಪಡಿತರ ವ್ಯವಸ್ಥೆಯನ್ನು ಗ್ರಾಮಾಂತರಗಳಿಗೂ ಮತ್ತು ಪಟ್ಟಣವಾಸಿಗಳೂ, ಯಾರೊಬ್ಬರಿಗೂ ತೊಂದರೆಯಾಗದಿರುವ ರೀತಿಯಲ್ಲಿ, ಅಂವರ ಯಾವ ಕಾರ್ಯಕ್ರಮಗಳನ್ನು ಕೈಗೊಂಡರೆ ಈ ಉಭಯತ್ರರಿಗೂ ತೊಂದರೆಗಳಾಗುವುದಿಲ್ಲವೋ ಅಂಥಾ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಂಡು, ಹಿಂದೂವರೆ ಎಕರೆಗಳಿಗಿಂತ ಜಾಸ್ತಿ ವ್ಯವಸಾಯ ಮಾಡತಕ್ಕವರಿಗೆಲ್ಲ ಒಂದು ರೀತಿ ಮತ್ತು $1\frac{1}{2}$ ಎಕರೆಗಳಿಂದ ಕೆಳಕ್ಕೆ ಅರ್ಧ ಎಕರೆ ಜಮೀನಿರತಕ್ಕವರನ್ನೆಲ್ಲಾ ಬಿಟ್ಟು, ಅರ್ಧ ಎಕರೆಗೆ, ಒಂದು ಮೂಟೆ ದವಸ ಹೆಚ್ಚು ಬೆಳೆಯುವಂತೆ extensive ಮತ್ತು intensive cultivationಗೆ ಹೆಚ್ಚು ಪ್ರೋತ್ಸಾಹ ನೀಡಿ, ಈ potential surplus holders ಗಳಿಂದ ಜಾಸ್ತಿ ದವಸವನ್ನು ಸಂಗ್ರಹಿಸಿಕೊಳ್ಳಲು ಶ್ರೀಮಾನ್ ವೀರಣ್ಣಗೌಡರು ತಿಳಿಸಿದಂತೆ ಮಾಡಿ. ಒಬ್ಬ ಮನುಷ್ಯನು ನೂರು ಎಕರೆ ಜಮೀನಿಟ್ಟುಕೊಂಡು ಪ್ರತಿವರ್ಷವೂ ಹತ್ತುಪಲ್ಲ ಸರ್ಕಾರಕ್ಕೆ ಕೊಡುತ್ತಿರಬಹುದು. ಅವನು ಇಷ್ಟುಮಾತ್ರ ಕೊಡಬೇಕೆಂದು ನಿಗದಿ ಮಾಡಿದರೆ 100 ಪಲ್ಲ ಬೇಕಾದರೂ ಬೆಳೆದುಕೊಂಡು ಹತ್ತುಪಲ್ಲ ಕೊಟ್ಟು ಉಳಿದ 90 ಪಲ್ಲವನ್ನು ತಾನು ಉಪಯೋಗಿಸಿಕೊಳ್ಳಬಹುದು ಎಂಬ ಭರವಸೆ ಬರುತ್ತದೆ. ಅವನು ಕೊಡಬೇಕಾದ್ದು ನಿರ್ಧರವಾದರೆ ಉಳಿದಿರುವುದನ್ನು ಮಾರಾಟಮಾಡಿಕೊಳ್ಳಬಹುದು ಅಥವ ತಾನೇ ಬೇಕಾದರೂ ಉಪಯೋಗಿಸಿಕೊಳ್ಳಬಹುದು ಎಂಬ ಭರವಸೆಯಿಂದ ಹೆಚ್ಚಾಗಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಬೆಳೆಯುವವರಿಗೆ ಉತ್ತೇಜನ ದೊರೆಯುತ್ತದೆ. ಈರೀತಿ ಗೊತ್ತುಮಾಡಬೇಕು. ಇದರ ಜೊತೆಗೆ ಹಳ್ಳಿಗಳಲ್ಲಿ ತೊಂದರೆಯಿದೆಯೆಂದು ಒಂದುಕಡೆ ಹೇಳುತ್ತಾರೆ. ಹಳ್ಳಿಗಳಲ್ಲಿ ದವಸ ಸಿಕ್ಕುತ್ತಿಲ್ಲ, ರೇಷನ್ ತೆಗೆಯಿರಿ ಎಂದು ಹೇಳುತ್ತಾರೆ. 40 ಸೇರು ಅಥವಾ ಎಷ್ಟು ಸೂಕ್ತವೋ ಅಷ್ಟು ದವಸವನ್ನು ಒಂದು ಕಡೆಯಿಂದ ಇನ್ನೊಂದು ಕಡಗೆ ತೆಗೆದುಕೊಂಡು ಹೋಗಲು ಅವಕಾಶ ಕೊಡುವುದಾದರೆ ತೊಂದರೆ ಸ್ವಲ್ಪ ತಪ್ಪಬಹುದು. ಇದರಿಂದ ನಿಧಾನವಾಗಿ ಹತೋಟಿ ತಗೆಯುತ್ತಿದ್ದಾರೆಂಬ ಭಾವನೆ ಬರುತ್ತದೆ. ಈಗ ಎಷ್ಟೋ ಸಾಮಾನುಗಳಿಗೆ ಹತೋಟಿ ತೆಗೆದುಹಾಕಿದೆ. ಅಕ್ಕಿ, ರಾಗಿ, ಜೋಳ, ಗೋಧಿ ಇವುಗಳು ಬಹಳ ಮುಖ್ಯ ಆಹಾರಪದಾರ್ಥಗಳು. ಇವನ್ನೂಕೂಡ ಮುಂದಿನ ವರ್ಷ ಮಳೆಬೆಳೆ ಚೆನ್ನಾಗಿ ನಡೆಸಿದರೆ ಯಾರು ಹತೋಟಿ ಮಾಡುತ್ತಾರೆ? ಇದರಿಂದ ಸರ್ಕಾರದವರು ಇನ್ನೂ ಉಪಯುಕ್ತ ಕಾರ್ಯವನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ಹತೋಟಿ ತೆಗೆಯಬೇಕು. ಆದರೆ ಏಕಾಏಕಿ ತೆಗೆಯುವುದನ್ನು ಒಪ್ಪುವುದಿಲ್ಲ. ಪರಿಶೀಲನೆ ಮಾಡಿನೋಡಿ ಆದಷ್ಟು ಜಾಗ್ರತೆ ತೆಗೆಯುವುದಕ್ಕೆ ಪ್ರಯತ್ನಮಾಡಿ. ಶ್ರೀ ಕಡಿದಾಳ್ ಮಂಜಪ್ಪನವರು ತಂದಿರುವ ಸಲಹೆಯೂ ಕೂಡ ಸರಿಯಾಗಿಲ್ಲ. ಕೆಲವುಕಡೆ ಹತೋಟಿಯಿರಬೇಕೆಂದು ಹೇಳಿದರೆ ಒಂದುಕಡೆ ತೊಂದರೆಯಾಗಿ ಇನ್ನೊಂದುಕಡೆ ಅನುಕೂಲವಾಗುವುದಕ್ಕೆ ಅವಕಾಶವಿದೆ. ಅದರಿಂದ ಜನರಮೇಲೆ ದುಷ್ಪರಿಣಾಮವಾಗುತ್ತದೆ, ಸತ್ಪರಿಣಾಮವಾಗುವುದಿಲ್ಲ. ಹತೋಟಿ ತಗೆಯುವುದಾದರೆ ಸಂಪೂರ್ಣವಾಗಿ ತಗೆಯಬೇಕು, ಸರಿಯಾದ ರೀತಿಯಲ್ಲಿ ತೆಗೆಯಬೇಕು. ಸರ್ಕಾರದವರು ಒಂದು ಹೆಜ್ಜೆ ಮುಂದಿಡಬೇಕು. ಹೀಗೆ ಸಂಪೂರ್ಣವಾಗಿ ಆದಷ್ಟು ಜಾಗ್ರತೆ ಹತೋಟಿ ತೆಗೆಯುವುದಕ್ಕೆ ಪ್ರಯತ್ನಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಶ್ರೀ ಟಿ. ಸ ಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).— ಅಧ್ಯಕ್ಷರೆ, ಈ ಚರ್ಚೆ ನಾನಾ ರೀತಿಯಲ್ಲಿ ಬಹಳ ತೀವ್ರವಾಗಿ ಆಗುತ್ತಿದೆ. ಈಗ ಎರಡುಮೂರು ಅತಿ ಪ್ರಾಮುಖ್ಯವಾದ ವಿಷಯಗಳನ್ನು ಗಮನಕ್ಕೆ ತರಬೇಕೆಂದಿದ್ದೇನೆ. ಆಹಾರದ ವಿಷಯವನ್ನು ರಾಜಕೀಯ ಪಕ್ಷದ ಪ್ರಶ್ನೆಯಾಗಿ ತೆಗೆದುಕೊಳ್ಳಬಾರದೆಂದು ಎಲ್ಲಾ ಸ್ನೇಹಿತರಿಗೂ ವಿನಂತಿ ಮಾಡುತ್ತಿದ್ದೇನೆ. ಇದು ಹೆಚ್ಚಾಗಿ ದೇಶಕ್ಕೆ ಸಂಬಂಧಪಟ್ಟ ವಿಷಯ. ಯಾವ ಹೆಜ್ಜೆಯಿಡಬೇಕಾದರೂ ಬಹಳ ಹುಷಾರಾಗಿಡಬೇಕಾದ್ದು ಆವಶ್ಯಕ. ಈಗ ದೇಶದಲ್ಲಿ ಕಂಟ್ರೋಲಿದೆ. ಇದು ಹೋಗಬೇಕು ಎಂಬುದು ಅನೇಕರ ಅಭಿಪ್ರಾಯವಾಗಿದೆ. ವೆಲ್‌ಫೇರ್ ಸ್ಟೇಟ್ ಆದ್ದರಿಂದ ಒಂದಲ್ಲ ಒಂದು ವಿಧದಲ್ಲಿ ಪಡಿತರ ಪದ್ಧತಿಯಿದ್ದೇಯಿರುತ್ತದೆ. ಆದರೆ ಆಹಾರದ ವಿಷಯದಲ್ಲಿ ನಾವೀಗ ಅನುಸರಿಸುತ್ತಿರುವ ನೀತಿ ಎಷ್ಟು ಮಟ್ಟಿಗೆ ಯಶಸ್ವಿಯಾಗಿದೆಯೆಂಬುದನ್ನು ಯೋಚನೆ ಮಾಡಬೇಕು. ವರ್ಷವರ್ಷವೂ ನಾವು ಹೆಚ್ಚು ಆಹಾರ ಪದಾರ್ಥಗಳನ್ನು ಹೊರದೇಶದಿಂದ ತರಿಸಿ ಸಬ್ಸಿಡೈಸ್ ಮಾಡುತ್ತಿದ್ದೇವೆಯೇ ಹೊರತು ಅದರಿಂದ ವಿಶೇಷ ಪ್ರಯೋಜನವಾಗುತ್ತಿಲ್ಲ ಎಂಬುದು ನನ್ನ ಖಚಿತ ಅಭಿಪ್ರಾಯ. ಇದು ಹೋಗಬೇಕಾದರೆ ಬಹಳ ಕಷ್ಟ. ಇದನ್ನು ತೆಗೆಯುವಾಗ ಕೆಲವು ಅಂಶಗಳನ್ನು ಗಮನದಲ್ಲಿಡಬೇಕು. ಒಟ್ಟಿಗೆ ಹತೋಟಿಯನ್ನು ತೆಗೆದರೆ ಅದರಿಂದ ಬಹುಶಃ ಅನಾಹುತವಾಗಬಹುದು. ಒಟ್ಟಿಗೆ ತೆಗೆಯಕೂಡದು, ಕ್ರಮಕ್ರಮವಾಗಿ ತೆಗೆದು ಸಂಸ್ಥಾನದಲ್ಲೆಲ್ಲಾ ಒಂದು ದಿವಸ ಪೂರ್ತಿಯಾಗಿ ಯಾವ ಪ್ರತಿಬಂಧಕವೂ ಇಲ್ಲದಂತೆ ಮಾಡಿ ಆಹಾರ ಸಾಮಗ್ರಿಗಳು ಒಂದು ಕಡೆಯಿಂದ ಇನ್ನೊಂದುಕಡೆಗೆ ಹೋಗುವುದಕ್ಕೂ, ಎಲ್ಲಿ ಬೇಕಾದರೂ ಕೊಳ್ಳುವುದಕ್ಕೂ ಅವಕಾಶ ಕಲ್ಪಿಸಬೇಕಾಗುತ್ತದೆ. ಅದು ಬಿಟ್ಟು ಒಂದೇದಿವಸ ಎಲ್ಲಾಕಡೆಯೂ ತೆಗೆಯಬೇಕೆಂದು ಪ್ರಯತ್ನಮಾಡಿ ತೆಗೆದರೆ, ದುಡುಕಿದರೆ, ಆಹಾರಧಾನ್ಯ ಮರೆಯಾಗಿ ಅನಾನುಕೂಲವಾಗುತ್ತದೆ. ಆದ್ದರಿಂದ ಈ ದಿವಸ ಯಾವ್ಯಾವ ಕೆಲಸಮಾಡಬಹುದೆಂದು ನಮ್ಮ ಮಾನ್ಯ ಮಿತ್ರರು ಸಲಹೆ ಮಾಡಿದ್ದಾರೋ, ಇದೇ ವಿಷಯವು ಹಿಂದಿನ ಶಾಸನಸಭಾಧಿವೇಶನದಲ್ಲೂ ಕೂಡ ಚರ್ಚೆಯಾಗಿ ಅದರ ಬಗ್ಗೆ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ದಿವಸ ಶ್ರೀ ಕಡಿದಾಳ್ ಮಂಜಪ್ಪನವರು ಹೇಳಿದಹಾಗೆ ದೊಡ್ಡದೊಡ್ಡ ಪಟ್ಟಣಗಳಲ್ಲಿ ಕಂಟ್ರೋಲನ್ನಿಟ್ಟು ಬಾಕಿ ಕಡೆ ರೇಷನಿಂಗ್, ಶೇಖರಣೆ ಮತ್ತು ಹಂಚಿಕೆ ತೆಗೆಯುವುದಾದರೆ ದುಷ್ಪರಿಣಾಮವಾಗುತ್ತದೆ ಎಂದು ಅತಿ ವಿನಯದಿಂದ ನಿರ್ಣಯದ ಸೂಚಕರಿಗೆ ವಿನಂತಿ ಮಾಡುತ್ತೇನೆ. ಇದರಿಂದ ಕೆಡುಕಾಗುತ್ತದೆಯೆಂಬುದನ್ನು ಯೋಚನೆ ಮಾಡಬೇಕು. ಕಂಟ್ರೋಲಿನಿಂದ ದೇಶಕ್ಕೆ ಬಹಳ ಕೆಡಕಾಗುತ್ತದೆ ಎಂಬುದನ್ನು ಒಪ್ಪೋಣ. ಆದರೆ ಇಂದು ಮನುಷ್ಯನ ಜೀವನ ಕಷ್ಟಕರವಾಗಿ ಮಾಡಬಾರದ ಕೆಲಸಗಳಲ್ಲಿ ತೊಡಗುತ್ತಿರುವುದಾಗಿ ಕೇಳಿಬರುತ್ತಿದೆ. ಇದನ್ನು ಜ್ಞಾಪಕದಲ್ಲಿಟ್ಟು ಹೆಚ್ಚು ತೊಂದರೆಯಾಗದಂತೆ ಮುಂದುವರಿಯಬೇಕು. ಹೆಜ್ಜೆಯಿಡುವಾಗ ಪ್ರತಿಯೊಂದು ಹೆಜ್ಜೆಯನ್ನೂ ಭದ್ರವಾಗಿ ಸರಿಯಾಗಿ ಇಡಬೇಕು. ಸರ್ಕಾರದ ಮೇಲೆ ಯಾವ ವಿಧವಾದ ದುರ್ಭಾವನೆ ಬರುವುದಕ್ಕೂ ಅವಕಾಶಕೊಡದೆ ವಿಮರ್ಶೆಮಾಡಿ, ತುಲನಮಾಡಿ ಮುಂದುವರಿಯಬೇಕು. ಈ ದಿವಸ ಮುಕ್ಕಾಲುಭಾಗ ಶೇಖರಣೆಯಾಗಿದೆ. ಇನ್ನು ಕಾಲುಭಾಗ ಆಗಬೇಕು ಇವಾದಮೇಲೆ ಹಳ್ಳಿಗಾಡಿನಲ್ಲಿ ಪಡಿತರ ಪದ್ಧತಿ ಹೋಗಬೇಕೆಂದು ಹೇಳಬಹುದು. ಆದರೆ ಯಾರಿಗೂ ತೊಂದರೆಯಾಗದಂಥ ನೀತಿಯನ್ನನುಸರಿಸಬೇಕು. ಶೇಖರಣೆ ಮಾಡಿ ಶ್ರೀ ವೀರಣ್ಣಗೌಡರು ಮತ್ತು ಶ್ರೀ ಭೀಮಪ್ಪನಾಯಕರು ಹೇಳಿದಹಾಗೆ ಮಾಡಬಹುದು. ಶೇಖರಣೆ ಮಾಡುವಾಗ ಕೆಲವರು ನ್ಯಾಯವಾಗಿ ಕೊಡತಕ್ಕದ್ದನ್ನು ಕೊಡದೆ ಹೆಚ್ಚಾಗಿ ಉಳಿಸಿಕೊಂಡಿರುವುದಕ್ಕೆ ಉದಾಹರಣೆಗಳಿವೆ. ಹೋದ ಸಲ 40 ಸೇರು ಧಾನ್ಯವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗಬಹುದೆಂದು ಒಂದು ಆಜ್ಞೆ ಮಾಡಿದ್ದಾಗ ತುಮಕೂರು ಮತ್ತು ತಿಪಟೂರು ತಾಲ್ಲೂಕುಗಳಿಗೆ ಶಿವಮೊಗ್ಗ ಕಡೆಯಿಂದ ಸಾವಿರಾರು ಪಲ್ಲ ಧಾನ್ಯ ಒಂದು ತಿಂಗಳಲ್ಲಿ ಬಂದಿದೆ. ಆದ್ದರಿಂದ ಅಲ್ಲಿ ಹೆಚ್ಚು ಆಹಾರ-ಧಾನ್ಯವಿದೆಯೆಂಬುದು ಅರ್ಥವಾಗುತ್ತದೆ. ಕೆಲವುಕಡೆ ಇಲ್ಲ. ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿಲ್ಲ. ಅಲ್ಲಿಮಳೆ ಬೆಳೆ ಕಡಿಮೆ. ಅಂಥಕಡೆಗಳಿಗೆ ಶೇಖರಿಸಿ ಈಗ ಕೊಡುವ ರೀತಿ ಪೂರ್ತಿಯಾಗಿ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಅಲ್ಪಸ್ವಲ್ಪ ಕೊಟ್ಟು ಬಾಕಿಯಾದ್ದಕ್ಕೆ ಏನಾದರೂ ಏರ್ಪಾಡು ಮಾಡಬೇಕು. ಬಾಯಲ್ಲಿ ಇಲ್ಲ ಎಂದು ಹೇಳುವುದಕ್ಕೆ ಬದಲಾಗಿ ಕೈಯಲ್ಲಿ ಇಲ್ಲ ಎಂದು ಹೇಳಿ, ಇಷ್ಟು ಸಹಾಯ ಮಾಡಬಲ್ಲೆವು, ಬಾಕಿಯಾದ್ದನ್ನು ತಂದು ಕೊಳ್ಳಬಹುದು ಎಂದು ಶೇಖರಣೆಯಾದ ಮೇಲೆ ಹೇಳಿ ಒಂದಕಡೆಯಿಂದ ಇನ್ನೊಂದು ಕಡೆಗೆ ಧಾನ್ಯವನ್ನು ನಿರ್ಬಂಧವಿಲ್ಲದೆ ಸಾಗಿಸಲು ಅವಕಾಶ ಮಾಡಬಹುದು. ಅದನ್ನು 40 ಸೇರಿನ ಒಂದು ಪಲ್ಲಾದೊಳಗೆ ಇರುವಂತೆ ಮಾಡಬಹುದು. ಇದಕ್ಕಿಂತಲೂ ಹೆಚ್ಚಾಗಿ ಅವಕಾಶ ಕೊಡಬಾರದು. ಧರ್ಮಾಧರ್ಮವನ್ನು ವಿವೇಚನೆಮಾಡಿ ಹೆಚ್ಚಾಗಿ ಕೊಟ್ಟು ಮಾರಿಕೊಳ್ಳುವುದಕ್ಕೆ, ಹಣ ಸಂಪಾದಿಸುವುದಕ್ಕೆ ಅವಕಾಶ ಮಾಡದೆ ಉಪಯೋಗಕ್ಕೆ ಎಷ್ಟು ಬೇಕೋ ಅಷ್ಟನ್ನು ಆಯಾ ಸಂಸಾರದಲ್ಲಿರುವ ಜನರ ಉಪಯೋಗಕ್ಕೆ ಒಂದು ತಿಂಗಳಿಗೆ ಅಥವಾ 15 ದಿವಸಗಳಿಗೆ ಆಗುವಷ್ಟನ್ನು ಮಾತ್ರ ತರುವುದಕ್ಕೆ ಅವಕಾಶ ಕೊಡಬಹುದು. ಕಂಟ್ರೋಲನ್ನು ತೆಗೆಯುವುದಕ್ಕೆ ಮುಂಚೆ ಆಹಾರ ಧಾನ್ಯವನ್ನು ಈರೀತಿ ತೆಗೆದುಕೊಂಡು ಹೋಗಲು ಅವಕಾಶವೀಯಬೇಕು. ಇದನ್ನು ಮಾಡುವಾಗ ಒಂದು ವಿಷಯ ಜ್ಞಾಪಕದಲ್ಲಿಡಬೇಕು. ಚಿಕ್ಕವರಾಗಲಿ, ದೊಡ್ಡವರಾಗಲಿ, ರೈತ, ವ್ಯಾಪಾರಸ್ಥ, ಶಾಸನಸಭೆ ಸದಸ್ಯರು ಅಥವಾ ಸಾರ್ವಜನಿಕರು ಯಾರೇ ಆಗಲಿ ಕಳ್ಳವ್ಯಾಪಾರ ಮಾಡಿದರೆ ಅವರನ್ನು ಸದೆಬಡಿಯಬೇಕು ಎಂದು ಸ್ಥಿರಪ್ರತಿಜ್ಞೆ ಮಾಡಬೇಕು. ಈಗ ವ್ಯಾಪಾರ ಮಾಡಬೇಕೆಂಬ ಆಸೆ ಅನೇಕರಿಗಿದೆ. ಇಂಥ ಕಾಲದಲ್ಲಿ ತೊಂದರೆಯಾಗದಂತೆ ಹತೋಟಿಯನ್ನು ಸಡಿಲಮಾಡಬೇಕು. ಹೆಚ್ಚಾಗಿ ತರುವುದಕ್ಕೆ ಅವಕಾಶ ಕೊಡಬಾರದು. ಸಂಸಾರಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ತರಲು ಅವಕಾಶಕೊಟ್ಟು ಮೊದಲನೆಯ ಹೆಜ್ಜೆಯಿಡಬೇಕು. ಆರೀತಿ ಮಾಡಬೇಕೆಂದು ಸರ್ಕಾರದಲ್ಲಿ ಬಿನ್ನಹ ಮಾಡುತ್ತೇನೆ.

ಇದಾದ ಮೇಲೆ ಮುಂದಿನ ವಿಚಾರ ಶೇಖರಣೆಗೆ ಸಂಬಂಧಪಟ್ಟಿರುವುದು. ಮುಂದಿನ ವರ್ಷವೂ ಕೂಡ ಹೊರಗಿನಿಂದ ತರಿಸದೆ ಇಲ್ಲೇ ಸಾಕಾಗುವಷ್ಟು ಬೆಳೆಯುವಂತೆ ಮಾಡುವುದಕ್ಕೆ ಸಾಧ್ಯವಿಲ್ಲ. ಸಾಕಾದಷ್ಟನ್ನು ಬೆಳೆಯುವವರೆಗೂ ಹಂಚಿಕೆ ಮಾಡುವುದು ಬಹಳ ಕಷ್ಟ. ಬೆಳೆದಿರುವುದೆಲ್ಲಾ ನಮ್ಮ ಕೈಸೇರುವವರೆಗೂ ಸಮನಾಗಿ ಹಂಚಿಕೆ ಮಾಡುವುದಕ್ಕೆ ತೊಂದರೆಯಿದೆ. ಸರ್ಕಾರಿ ಡಿಪೋಗಳಲ್ಲೂ ನ್ಯೂನತೆಗಳಿವೆ. ಅದು ಮನುಷ್ಯಸ್ವಭಾವ. ಯಾವಾಗಲೂ ಸ್ವಾರ್ಥವಿಲ್ಲದೆ ಕೆಲಸ ಮಾಡುವುದಿಲ್ಲ. ಈಗ ಹತೋಟಿಯನ್ನು ಅಭಿಪ್ರಾಯ ಪಟ್ಟಿರುವ ರೀತಿ ಸಡಿಲಿಸಿದರೆ ಹೆಚ್ಚು ಬೆಳೆಯುವುದಕ್ಕೆ ಪ್ರೋತ್ಸಾಹ

(ಶ್ರೀ ಟಿ. ಸುಬ್ರಹ್ಮಣ್ಯರವರು.)

ಸಿಕ್ಕುತ್ತದೆ, ಜನರಿಗೂ ಸಂತೋಷವಾಗುತ್ತದೆ. ಆಹಾರದ ಮೇಲಿರುವಂತೆ ಬಟ್ಟೆ ಮೊದಲಾದ ಪ್ರತಿಯೊಂದು ಪದಾರ್ಥಗಳ ಮೇಲೂ ಸರ್ಕಾರದ ಹಿಡಿತವಿದ್ದರೆ ಜನರಿಗೆ ಸುಖ ದೊರಕುವುದಿಲ್ಲ. ಮುಂದಿನ ಶೇಖರಣೆಯಲ್ಲಿ ಬೇಕಾದರೆ ಒಂದು ಹೆಜ್ಜೆ ಮುಂದಿಟ್ಟು ಸ್ವಲ್ಪ ಸಡಿಲಿಸಬಹುದು. ಈಗಾಗಲೇ ಇಷ್ಟು ಎಕರೆಗೆ ಇಷ್ಟು ತೆಗೆದುಕೊಳ್ಳಬೇಕು, ಇಂಥವರಿಂದ ಇಷ್ಟು ಬರಬೇಕು ಎಂಬುದಕ್ಕೆ ಒಂದು ಪಟ್ಟಿಯಿದೆ. ಅದರಂತೆ ಯಾರ್ಯಾರು ಎಷ್ಟೆಷ್ಟು ದವಸ ಕೊಡಬೇಕೆಂಬುದು ಗೊತ್ತಿದೆ. ಇದೆಲ್ಲಾ ಹೇಳುವುದು ಪುನರುಕ್ತಿಯಾದರೂ ಚಿಂತೆಯಿಲ್ಲ. ಹೇಳಿದ್ದನ್ನೇ ಹೇಳುವುದು ಸ್ವಭಾವವಾದರೂ ಹೇಳಬೇಕಾದ ಅವಶ್ಯಕತೆಯಿದೆ. ಬರಬೇಕಾದ ಧಾನ್ಯವನ್ನು ಲೆಕ್ಕದ ಪ್ರಕಾರ ತೆಗೆದುಕೊಂಡು ಮುಂದಿನ ವರ್ಷ ನಾಲ್ಕು ಸಿಟಿಗಳಿಗೆ ಮಾತ್ರ ಒದಗಿಸುವ ಜವಾಬ್ದಾರಿ ಇಟ್ಟುಕೊಂಡು ಆ ಮೇಲೆ ಪೂರ್ತಿಯಾಗಿ ತೆಗೆಯಬಹುದು. ಸರ್ಕಾರದವರಿಗೆ ಆಹಾರದ ನೀತಿಯ ವಿಚಾರದಲ್ಲಿ ಶ್ರದ್ಧೆಯಿದೆ. ಆದರೆ ಅದರ ಫಲಿತಾಂಶ ಅಷ್ಟು ಜಾಗ್ರತೆ ಕಣ್ಣಿಗೆ ಕಾಣುತ್ತಿಲ್ಲ.

ಇವತ್ತು ಯಾವ ಏರ್ಪಾಡು ಮಾಡಿದರೂ ಅದು ತಕ್ಷಣ ಕಣ್ಣಿದುರಿಗೆ ಫಲ ಕಟ್ಟಿಕೊಂಡು ನಿಂತುಕೊಳ್ಳಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಫಲಹೊಂದಬೇಕಾದರೆ 4-5 ವರ್ಷಗಳಾದರೂ ಬೇಕಾಗುತ್ತದೆ. ಆಕಾಲದೊಳಗೆ ಈ ಪ್ರಯತ್ನಮಾಡಿ, 50 ಎಕರೆ ಜಮೀನಿದ್ದರೆ ಅತನು 10 ವರ್ಷದಿಂದ ಧಾನ್ಯ ಏನು ಕೊಡುತ್ತಾನೋ ಮುಂದಿನ ವರ್ಷವೂ ಅಷ್ಟೇ ಕೊಡಬೇಕೆಂದು ಕಡ್ಡಾಯ ಮಾಡಿ, ಜಮೀನು ಕಂದಾಯ ವಸೂಲುಮಾಡುವ ಹಾಗೆ ಮಾಡಬೇಕು. ಎಷ್ಟೋ ಹಳ್ಳಿಗಳಲ್ಲಿ ಉದಾಹರಣೆಗೆ ತುಮಕೂರು ತಾಲ್ಲೂಕಿನಲ್ಲಿ ಒಬ್ಬ ಪಟೇಲರು ಏನು ಮಾಡಿದರೆಂದರೆ ಕಂದಾಯ ಕೊಡಬೇಡಿ, ಕಂಟ್ರೋಲ್ ರೇಟ್‌ನಲ್ಲಿ ಧಾನ್ಯ ಕೊಟ್ಟುಬಿಡಿ, ಕಂದಾಯಕ್ಕೆ ಜಮ ಕಟ್ಟಿಕೊಳ್ಳುತ್ತೇನೆ ಎಂದು ಹೇಳಿ ಅದನ್ನೆಲ್ಲಾ ವಸೂಲು ಮಾಡಿಕೊಂಡು ಡಿಪೋಗಳಿಗೆ ಹಾಕಿ,ಬಂದ ಹಣವನ್ನೂ ಕಂದಾಯಕ್ಕೆ ಕಟ್ಟಿಬಿಟ್ಟರು. ಈರೀತಿ ಕೆಲಸಮಾಡಿದರೆ ಬಹಳ ಅನುಕೂಲವಾಗುತ್ತದೆ. potential holdersನಿಂದ ತೆಗೆದುಕೊಂಡು ಮುಂದಿನ ವರ್ಷ ಈ ನಾಲ್ಕು ಸಿಟಿಗಳಲ್ಲಿ ಮಾತ್ರ ಅನ್ವಯ ಮಾಡಿ ಬಾಕಿ ಕಡೆ ಪೂರ್ಣವಾಗಿ ಸಡಿಲಮಾಡಿದರೆ ಮುಂದಿನ ವರ್ಷದ ಅಂತ್ಯದೊಳಗೆ ಇದನ್ನು ತೆಗೆದು ಹಾಕಿಬಿಡಬಹುದು. ಆ ರೀತಿ ಮಾಡುವುದು ಸರ್ವಶ್ರೇಷ್ಠವಾದದ್ದು ಮತ್ತು ಸರ್ವರಿಗೂ ಸುಖ ಸಿಕ್ಕುತ್ತದೆ ಯಾರಿಗೂ ಕಷ್ಟ ಇರುವುದಿಲ್ಲ. ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಇನ್ನೊಂದು ವಿಷಯವೇನೆಂದರೆ ಸರ್ಕಾರದವರು ಮುಂದೆ ಹೆಜ್ಜೆಯಿಡುವಾಗ ಕಾನೂನುಗಳನ್ನು ಪೂರ್ಣವಾಗಿ ಜಾರಿ ಮಾಡಬೇಕಾಗುತ್ತದೆ. ಕದ್ದು ವ್ಯಾಪಾರ ಮಾಡುವವರ ಮೇಲೆ ಯಾವುದಾದರೂ ಕೇಸು ಹಾಕಿದ್ದ ಪಕ್ಷದಲ್ಲಿ ಖಂಡಿತ ವಾಪಸು ತೆಗೆದುಕೊಳ್ಳಬಾರದು, ಅಂಥವರಿಗೆ ಶಿಕ್ಷೆ ಆಗಲೇ ಬೇಕು. ಅವರಲ್ಲಿ ಭಯ ಉಂಟಾಗಬೇಕು. ಒಂದು ಪರಿಸ್ಥಿತಿಯಿಂದ ಇನ್ನೊಂದು ಪರಿಸ್ಥಿತಿಗೆ ಬದಲಾವಣೆಯಾಗುವ ಕಾಲದಲ್ಲಿ ಸರ್ಕಾರದವರು ಒಂದು ಹಿಡಿತವನ್ನಿಟ್ಟುಕೊಂಡು ಕಾನೂನು ಜಾರಿ ಮಾಡಿ ಬಹಳ ಭದ್ರವಾಗಿ ನಡೆಯಬೇಕು. ಆ ರೀತಿ ನಡೆದುಕೊಂಡು ಹೋದರೆ ಒಂದು ವರ್ಷದಲ್ಲಿ ನಾವು ಪೂರ್ವದಸ್ಥಿತಿಗೆ ಬರಬಹುದು. ಆಹಾರದ ತೊಂದರೆ ಬರುವುದಿಲ್ಲ. ಇಷ್ಟು ಮಾತ್ರ ಸಲಹೆ ಮಾಡಿ ಶ್ರೀ ಕಡಿದಾಳ್ ಮಂಜಪ್ಪನವರ ಸಲಹೆಯನ್ನು ಒಪ್ಪಿಕೊಳ್ಳುವುದು ಸರ್ವಶ್ರೇಷ್ಠವಾದುದ್ದೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ರೆಟ್ರಾಸಿಡೆಡ್ ಪ್ರದೇಶ).—ಸ್ವಾಮಿ, ನೆನ್ನೆಯಿಂದ ಚರ್ಚೆ ನಡೆಯುತ್ತಾ ಇರುವ ಶ್ರೀ ಕಡಿದಾಳ್ ಮಂಜಪ್ಪನವರು ತಂದಿರತಕ್ಕ ಈ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದು ಅಪೇಕ್ಷಿಸುತ್ತೇನೆ. ಸ್ವಾಮಿ, ಶ್ರೀ ಕಡಿದಾಳ್ ಮಂಜಪ್ಪನವರು ಹಳ್ಳಿಗಳಲ್ಲಿ ಪಡಿತರ ವ್ಯವಸ್ಥೆಯನ್ನು ತೆಗೆದು ಹಾಕಿ, ಸಿಟಿಗಳಲ್ಲಿ ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೆ. ನಾನು ಅದನ್ನು ಅನುಮೋದಿಸುತ್ತೇನೆ. ಕಾರಣ ಇಷ್ಟೆ. ಹೋದ ಸಾರಿ ನಾವು ಅಧಿವೇಶನ ಸೇರಿದಾಗ ಬೆಲ್ಲದ ಮೇಲೆ ಹತೋಟಿ ತೆಗೆದುಹಾಕಿ ದರವನ್ನು ನಿಗದಿ ಮಾಡಿದರು. ಆಗ ಇದೇ ಸಭೆಯಲ್ಲಿ ಹಾಹಾಕಾರ ಎದ್ದು ಹತೋಟಿ ತೆಗೆದುಹಾಕಿದ್ದರಿಂದ ಬಹಳ ತೊಂದರೆಯಾಗಿ ದೀಪಾವಳಿ ಹಬ್ಬಕ್ಕೆ ಬೆಲ್ಲವೇ ಇಲ್ಲದಂತೆ under ground ಆಯಿತು ಎಲ್ಲರಿಗೂ ಗೊತ್ತೇ ಇದೆ, ಆದರೆ ಎಲ್ಲಿ ಈಗ ಬೆಲ್ಲ ಬೇಕಾದರೆ ಅಲ್ಲಿ ಸಿಕ್ಕುತ್ತಾ ಇದೆ. ಅದೇ ರೀತಿ ಈ ಧಾನ್ಯಗಳ ಮೇಲೂ ಸಹ ಹತೋಟಿ ತೆಗೆದುಹಾಕಿದರೆ ಸ್ವಲ್ಪ ದಿನ ಕಷ್ಟವಾದರೂ ಅನಂತರ ಆಹಾರ ಧಾನ್ಯಗಳು ಬೇಕಾದಷ್ಟು ನಮಗೆ ಒದಗಸಿಕೊಳ್ಳಬಹುದೆಂದು ನನಗೆ ಅನ್ನಿಸುತ್ತದೆ. ಆದಕಾರಣ ಹತೋಟಿ ತೆಗೆದುಹಾಕಬೇಕೆಂದು ಸರ್ಕಾರದವರಿಗೆ ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಇನ್ನೊಂದು ಅಂಶ ಏನೆಂದರೆ ನಮಗೆ ಬೆಂಗಳೂರಿನಲ್ಲಿ ಧಾನ್ಯ ಈಗ ಕೊಡುವುದು ಸಾಲದು..............

ಅಧ್ಯಕ್ಷರು.—ಇದರಲ್ಲಿ ಆ ವಿಷಯ ಬರುವುದಿಲ್ಲ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಹಳ್ಳಿಗಳಲ್ಲಿ ತೆಗೆದುಹಾಕುವುದಕ್ಕೆ ಈಗ ಕಾರಣ ಹೇಳುತ್ತಾ ಇದ್ದೇನೆ. ಪಟ್ಟಣದಲ್ಲಿರುವವರು ಹಳ್ಳಿಗಳಿಗೆ ಹೋಗಿ ಹಳ್ಳಿಗಳಿಂದ ದವಸ ಧಾನ್ಯಗಳನ್ನು ಕಾಳಸಂತೆಯಲ್ಲಿ ತೆಗೆದುಕೊಂಡು ಬರುತ್ತಾ ಇದ್ದಾರೆ. ಈ ಕಾರಣದಿಂದ ಹಳ್ಳಿಗಳಲ್ಲಿ ಆಹಾರ ಧಾನ್ಯ ಇಲ್ಲದೆ ತೊಂದರೆಯಾಗಿದೆಯೇ ವಿನಾ ಸಾಲದು ಎಂಬ ಮಾತನ್ನು ನಾನೂ ಒಪ್ಪುವುದಿಲ್ಲ. ಇನ್ನೂ ಒಂದು ವೇಳೆ ಪಟ್ಟಣಗಳಲ್ಲಿ ಹತೋಟಿ ತೆಗೆದು ಹಾಕಿದರೆ ಪಟ್ಟಣವಾಸಿಗಳಿಗೆ ಕಷ್ಟ ಅಂತ ಅನ್ನಬಹುದು, ಉದಾಹರಣೆಗಾಗಿ ಒಂದು ವಿಷಯ ಹೇಳಬಯಸುತ್ತೇನೆ. ಸಿಮೆಂಟಿಗೆ ಮೂರುರೂಪಾಯಿ ಬೆಲೆ ಇತ್ತು, ಈಗ 3 ರೂಪಾಯಿನಿಂದ 5 ರೂಪಾಯಿ ಮಾಡಿ ಹತೋಟಿ ತೆಗೆದುಹಾಕಿದರು, ಈಗ ಬೇಕಾದಷ್ಟು ಸಿಮೆಂಟು, ನಮಗೆ ಮಾರ್ಕೆಟ್ಟಿನಲ್ಲಿ ಸಿಕ್ಕುತ್ತಾ ಇದೆ. ಈ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯಬೇಕೆಂದು ಸರ್ಕಾರದವರು ಪ್ರಯತ್ನ ಪಡುತ್ತಿದ್ದಾರೆ. ಶ್ರೀ ಮರಿಯಪ್ಪನವರು ಕಮರ್ಷಿಯಲ್ ಕ್ರಾಪ್ ಹೆಚ್ಚಾಗಿ ಬೆಳೆಯುವವರ ಮೇಲೆ ಹತೋಟಿಯನ್ನಿಡುವುದಕ್ಕಾಗುವುದಿಲ್ಲ ಬೆಳೆಯುತ್ತಲೇ ಇರುತ್ತಾರೆಂದು ಹೇಳುತ್ತಾ ಇದ್ದಾರೆ. ಅದಕ್ಕೆ ಒಂದು ಸಲಹೆ ಕೊಡುತ್ತೇನೆ. ಸರ್ಕಾರದವರು ಈಗ ಒಂದು ಪಲ್ಲರಾಗಿಗೆ 20 ರೂಪಾಯಿ ಕೊಡುತ್ತಾ ಇದ್ದೀರಿ. ಅದೇ ಪಲ್ಲ ರಾಗಿಗೆ 30 ರೂಪಾಯಿ ಕೊಟ್ಟರೆ ಅವರು ಕಮರ್ಷಿಯಲ್ ಕ್ರಾಪ್ ಬೆಳೆಯುವುದನ್ನು ಬಿಟ್ಟು ಆಹಾರ ಧಾನ್ಯಗಳನ್ನೇ ಬೆಳೆಯುತ್ತಾರೆ. ವ್ಯವಸಾಯಗಾರರಿಗೆ ಹೆಚ್ಚಾಗಿ ಹಣ ಕೊಟ್ಟರೆ ಅವರೇ ಆಹಾರ ಬೆಳೆಯುತ್ತಾರೆ. ಸರ್ಕಾರದವರು ಈಗ ಮೂರು ವರ್ಷದಿಂದ ಮೂರು ಕೋಟಿ ರೂಪಾಯಿಗಳನ್ನು ಪರಸ್ಥಳದಿಂದ ಆಹಾರಧಾನ್ಯ ತರಿಸಲಿಕ್ಕಾಗಿ ಖರ್ಚು ಮಾಡಿದ್ದಾರೆ. ಅದರಲ್ಲಿ ಎಷ್ಟು ನಷ್ಟವಾಗಿದೆ! ಅದನ್ನು ಇಲ್ಲೇ ಉಪಯೋಗಿಸಿದ್ದರೆ ಖಂಡಿ

ತವಾಗಿಯೂ ಇಲ್ಲೇ ಹೆಚ್ಚು ಆಹಾರ ಧಾನ್ಯ ಒದಗಿಸುವುದಕ್ಕೆ ಸಾಧ್ಯವಾಗುತ್ತಿತ್ತು. ರೈತರು ಬೆಳೆದ ಧಾನ್ಯಕ್ಕೆ ಹೆಚ್ಚು ಬೆಲೆ ಕೊಟ್ಟರೆ ಖಂಡಿತವಾಗಿಯೂ ನಮ್ಮ ದೇಶದಲ್ಲಿ ಬೇಕಾದಷ್ಟು ಆಹಾರ ಧಾನ್ಯವನ್ನು ರೈತರೇ ಬೆಳೆಯುತ್ತಾರೆ. ಸರ್ಕಾರದವರು ಹೆಚ್ಚು ಆಹಾರ ಧಾನ್ಯವನ್ನು ಬೆಳೆಯುವುದಕ್ಕೆ ಹಣವನ್ನು ರೈತರಿಗೆ ಕೊಡಬೇಕಾದುದಿಲ್ಲ.

ಇನ್ನೊಂದು ವಿಷಯ. ನಮಗೆ ಸ್ವಾತಂತ್ರ್ಯ ಬಂದು ಜವಾಬ್ದಾರಿ ಸರ್ಕಾರವೇರ್ಪಟ್ಟು ಮೂರು ವರ್ಷವಾಯಿತು. ಮೂರು ವರ್ಷದಿಂದಲೂ ಈ ವಿಷಯ ಒಂದಲ್ಲಾ ಒಂದು ವಿಧದಲ್ಲಿ ಈ ಸಭೆಯಲ್ಲಿ ಚರ್ಚೆಯಾಗಿ, ಹತೋಟಿ ಹೋಗಬೇಕೆಂದು ಹೇಳುತ್ತಾ ಇದ್ದಾಗ್ಯೂ ಸಹ ಹತೋಟಿಯನ್ನು ತೆಗೆದುಹಾಕುವುದಕ್ಕೆ ಸರ್ಕಾರದವರಿಗೆ ಇನ್ನೂ ಸಾಧ್ಯವಾಗಿಲ್ಲ. ಮೂರು ವರ್ಷದಿಂದ ಹೀಗೆ ಪ್ರಯತ್ನಪಟ್ಟರೂ ಹತೋಟಿಯನ್ನು ತೆಗೆದುಹಾಕಿ, ಸರಿಯಾಗಿ ಹೊಟ್ಟೆ ತುಂಬಾ ಊಟ ಕೊಡುವುದಕ್ಕೆ ಯಾವ ಕಾರಣದಿಂದ ಸರ್ಕಾರದವರಿಗೆ ಶಕ್ತಿಬರಲಿಲ್ಲವೋ ನಾನು ಕಾಣೆ. ಈ ಸಭೆಗೆ ನಾವೆಲ್ಲಾ ಸದಸ್ಯರಾಗಿ ಬಂದಾಗ ಎಲ್ಲರೂ ಉತ್ಸಾಹದಿಂದ ಕೇಂದ್ರದೊಡನೆ ವಿಲೀನೀಕರಣ ಆಗಬೇಕು, ಕೇಂದ್ರಕ್ಕೆ ಬಹಳ ಅಧಿಕಾರವಿರಬೇಕು ಎಂದು ಹೇಳುತ್ತಾ ಬಂದೆವು. ಈಗ ಪ್ರತಿಯೊಂದಕ್ಕೂ ಕೇಂದ್ರದವರಿಂದ ಆರ್ಡರ್ ತೆಗೆದುಕೊಂಡು ಅವರು ಹೇಳಿದ ಹಾಗೆ ಸರ್ಕಾರದವರು ನಡೆಯಬೇಕು. ಹಾಗೆ ಮಾಡದಿದ್ದರೆ......

ಅಧ್ಯಕ್ಷರು.—ಅದಕ್ಕೂ, ಇದಕ್ಕೂ ಏನು ಸಂಬಂಧ ?

ಶ್ರೀ ಬಿ. ಎಂ. ಶಾಮಣ್ಣಗೌಡರು.—ಹೇಳುತ್ತೇನೆ. ನಮ್ಮ ಜನಗಳು ಹತೋಟಿ ಬೇಡ ಎಂದು ಹೇಳುತ್ತಾರೆ. ಆದ್ದರಿಂದ ನಾವು ಹತೋಟಿ ತೆಗೆದುಹಾಕಿಬಿಡುತ್ತೇವೆ ಎಂದು ಹೇಳಿದರೆ ಅವರು ಬೇಡವೆಂದು ಹೇಳಬಾರದು ಎಂದು ನನ್ನ ಅಭಿಪ್ರಾಯ. ಅವರೇ ಸರ್ವಾಧಿಕಾರ ತೆಗೆದುಕೊಂಡು ಆರ್ಡರ್‌ಮಾಡುತ್ತಾ ಇದ್ದಾರೆ ಎಂಬ ಪ್ರಶ್ನೆ ಬರುತ್ತದೆ. "ಇಲ್ಲ" ಅಂತ ಹೇಳುವಾಗ್ಯೂ ನಾವೇಕೆ ಇಲ್ಲಿ ನಮಗೆ ಬೇಕಾದಹಾಗೆ ಏರ್ಪಾಡು ಮಾಡಿಕೊಳ್ಳಕೂಡದು ? ಈಗಾಗಲೇ ನಾಲ್ಕೈದು ಜಿಲ್ಲೆಯಲ್ಲಿ ಪಾನನಿರೋಧವನ್ನು ಜಾರಿಗೆ ತಂದಿದ್ದೀರಿ.

ಅಧ್ಯಕ್ಷರು.—ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಪ್ರತಿಯೊಂದು ಜಿಲ್ಲೆಯಲ್ಲೂ ಪಾನನಿರೋಧಮಾಡಿ ನೋಡಿದ್ದರೆ ಚೆನ್ನಾಗಿತ್ತು. ಈ ರೀತಿ ಉದಾಹರಣೆ ಕೊಟ್ಟೆ ಅಷ್ಟೆ. ಆದ್ದರಿಂದ ನನಗೆ ಅನ್ನಿಸುತ್ತದೆ ಪಟ್ಟಣಗಳಲ್ಲಿ ಹತೋಟಿಗಳನ್ನಿಟ್ಟುಕೊಂಡು ಹಳ್ಳಿಗಳಲ್ಲಿ ತೆಗೆದುಹಾಕುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಇಷ್ಟು ಹೇಳಿ ಇದನ್ನು ಪೂರ್ಣವಾಗಿ ಅನುಮೋದಿಸುತ್ತೇನೆ. ಇನ್ನೊಂದು ವಿಚಾರ ಇಂಗ್ಲೀಷ್‌ನಲ್ಲಿ ಒಂದು ಗಾದೆ ಹೇಳುತ್ತಾರೆ. "Lambs cause is prejudged by the wolf" ತೋಳನ ಕೈಗೆ ಕುರಿಮರಿ ಸಿಕ್ಕಿದರೆ ಅದನ್ನು ತಿನ್ನುವುದೊಂದೇ ತೀರ್ಮಾನಮಾಡಿರುತ್ತದೆಯಂತೆ. ಹಾಗೆ ಹಳ್ಳಿಗಳಿಂದ ಸದಸ್ಯರಾಗಿ ಈ ಸಭೆಗೆ ಬಂದಿರುವವರು ಪಟ್ಟಣಗಳಮೇಲೆ ಕಣ್ಣಿಟ್ಟು ಅವರಿಗಿರತಕ್ಕ ಅನುಕೂಲಗಳನ್ನೂ ಸಂತೋಷಗಳನ್ನೂ ತೆಗೆದುಕೊಂಡುಬಿಡಬೇಕೆಂಬ ಉದ್ದೇಶವಿರುತ್ತದೆಯೋ ಏನೋ ಎನ್ನುವಹಾಗೆ ಎನಿಸುತ್ತದೆ. ಇದಕ್ಕೆ ಕಾರಣವೇನೋ ಗೊತ್ತಿಲ್ಲ. ಅವರು ಮಾತನಾಡುವುದನ್ನು ನೋಡಿದರೆ, ಯಾವಾಗಲೂ ನಮಗೆ ಅದು ಸಾಲದು, ಇದು ಸಾಲದು ಎಂದು ಹೇಳುತ್ತಿರುತ್ತಾರೆ. ಒಂದುಮಾತು ಹೇಳುತ್ತೇನೆ, ಮಾನ್ಯ ಸದಸ್ಯರು ಕೆಲವರು ಕಂಟ್ರೋಲನ್ನು ನಿಧಾನವಾಗಿ ಕ್ರಮೇಣ ತೆಗೆದುಬಿಡಬೇಕೆಂದು ಹೇಳಿದರು. ಪಟ್ಟಣಗಳಲ್ಲಿಟ್ಟುಕೊಂಡು ಹಳ್ಳಿಗಳಲ್ಲಿ ತೆಗೆಯಬೇಕೆಂದು ಹೇಳಿದರೆ ಸಂತೋಷ, ಹಾಗಿಲ್ಲದೆ ಶ್ರೀ ಸುಬ್ರಹ್ಮಣ್ಯರವರು ಹೇಳಿದಹಾಗೆ ಪಟ್ಟಣಗಳಲ್ಲಿರುವವರು ಇಪ್ಪತ್ತು ಅಥವ ಐವತ್ತುಸೇರು ಧಾನ್ಯವನ್ನು ಹೊರಗಿನಿಂದ ತಂದುಕೊಳ್ಳಲು ಅವಕಾಶ ಕೊಡಬೇಕೆಂದು ಹೇಳಿ ಮುಗಿಸುತ್ತೇನೆ.

Mr. SPEAKER.—The House will now rise for lunch for half-an-hour.

The Assembly adjourned for Lunch at Two Minutes past Ten of the Clock and reassembled at Thirtyfour Minutes past Ten of the Clock, Mr. Speaker (The Hon'ble Sri V. Venkatappa) in the Chair.

Sri M. GOVINDA REDDY (Chitaldrug District-General).—Sir, I am of opinion that rationing even in the cities of Bangalore, Mysore, K. G. F. and Davangere, is not necessary. I believe that controls are not necessary, particularly in matters of food and particularly in a country like India. I have no objection to controls as such, but the controls which are now existing are not effective as everyone knows. They cannot be enforced to the letter of the law and when the controls are not effective, why should we maintain these controls? That is one question. Controls, Sir, can be very effective only if the sources of production of the articles of control are in the hands of Government. Now, in matters of factory production like cement, iron materials, etc., the Government can easily lay their hands on the factory and they can take up distribution. But in matters of food production, the Government cannot get at the sources of production; they cannot control and therefore the food controls can never be effective. So, what is the use of having the food controls? Even now, the people in the cities are not depending on rationing. This rationing is not even one fifth of the ordinary daily requirements of ours. And to say that controls are still necessary is not according to truth. Even in regard to matters of food, Government must trust to the resourcefulness of the people. As long as we are going to keep them at this artificial

(SRI M. GOVINDA REDDY.)

level, they cannot develop an independent economy. I am sure, I do not want to strike a discordant note. I am convinced that India cannot, at this rate, be self-sufficient even for half a century. Big projects like the Damodar Valley and other irrigation projects must come up and vast acres of lands must be brought under cultivation and food must be produced, then only we can hope to be self-sufficient. Government cannot control the growth of commercial crop products as things are now, because commercial crop products are the most important in the country's economy and particularly in foreign trade when they are earning dollars. Government cannot restrict commercial crop production. Under these circumstances, food grains cannot be grown to the extent we need. We cannot also hope to import from other countries because they are also in the same position. Everywhere there is this difficulty except in America and Australia. Under these circumstances we have no hope to import food to the extent we need, as those countries cannot give food to every couutry. We have no hope of producing to the extent we need. Therefore, Sir, it means that for a long time to come we have to maintain this control. In the beginning we thought that these controls were a matter of a few years and they would go. But instead have found a permanent place. So, we have to seriously consider, the India Government will have to seriously consider as to how long they are keeping these controls. After all what is the benefit? None will be the better for these controls.

I just want to give one instance of a country which faced this matter boldly. I was in Ceylon in 1943, when Ceylon had the strictest control over food matters. Ceylon, as we all know, is an island. Although she was an agricultural country, she was not a food producing country, She depended much more than India for rice on Burma and other Eastern countries. On account of the war she could not import rice. India had nothing to spare when India herself was in need. Even in her direst needs she was supplying something. Then, the Government of Ceylon said, "we are not going to get rice." Ceylonese are as much rice eaters as we are. They said "no rice shall be supplied". They supplied only 2 ounces per week per head. They said, "we shall now abjure rice." People were living upon bread and plantains. I myself lived for a week on bread and plantains alone and people took to it cheerfully. They appreciated the difficulty of the Goverment. The Government prescribed heavy punishment and said that they should not cook rice in hotels. In fact I saw in no hotels they cooked rice and no rice was served. They even prescribed imprisonment if they served rice in hotels. But in the Government and the people enforced these rules and it was successful because it was a small country and an island. But here the same thing can be pleaded with more vehemence for the same reason. In a vast country like India controls can never be effective. So Sir, the Goverment of India must also seriously consider this matter and take measures to remedy the situation. It is not a permanent evil and it is neither a temporary evil. So unless you adopt a policy for a long time and with a lang-range view you can never mend the situation. In a country like India it is not necessary even to maintain these controls in cities also because even these cities can live upon the country's resources. The country has sufficient food but now there is no initiative for the agriculturists in the country to produce more. That initiative will be supplied only when we are thrown on our own resources.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ನನ್ನ ಮಾನ್ಯ ಸ್ನೇಹಿತರಾದ ಶ್ರೀ ಮಂಜಪ್ಪನವರು ತಂದಿರತಕ್ಕ ನಿರ್ಣಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಅನುಮೋದಿಸುತ್ತೇನೆ. ಈಗ ನಮ್ಮ ಮುಂದಿರುವುದು ಕಂಟ್ರೋಲ್ ಆಜ್ಞೆಗಳು ಬೇಡ, ಬೇಕಾದರೆ ಬೆಂಗಳೂರು ಸಿಟಿ, ಮೈಸೂರು ಸಿಟಿ ಮುಂತಾದ ನಾಲ್ಕಾರು ಸಿಟಿಗಳಲ್ಲಿ ಇಟ್ಟುಕೊಳ್ಳಲ ಎಂಬ ವಿಚಾರ. ಅವರ ಖಚಿತವಾದ ಅಭಿಪ್ರಾಯವೇನೋ ಎಲ್ಲಾ ಕಡೆಯಲ್ಲೂ ಕಂಟ್ರೋಲ್‌ಗಳನ್ನು ತೆಗೆಯಬೇಕೆಂದೇ ಇದೆ. ಒಂದು ವೇಳೆ ಹಾಗೆ ತೆಗೆಯು

ವುದಕ್ಕಾಗದೆ ಹೋದರೆ ಕೆಲವು ಪ್ರದೇಶಗಳಲ್ಲಿ ಇಟ್ಟುಕೊಳ್ಳಿ ಎಂದು ಅವರು ಹೇಳಿರುವಂತಿದೆ. ಈಚೆಗೆ ಮಾನ್ಯ ಶ್ರೀ ಸುಬ್ರಹ್ಮಣ್ಯರವರೂ ಕೂಡ ಮಾತನಾಡುತ್ತಾ ಮೊನ್ನೆ ದಿವಸದ ಬಜೆಟ್ ಭಾಷಣದ ಸಮಯದಲ್ಲಿ ಕಂಟ್ರೋಲ್ ಆಜ್ಞೆಗಳನ್ನು ಈ ತಕ್ಷಣ ತೆಗೆದುಬಿಡಿ ಎಂದು ಹೇಳಿದ್ದಾರೆ......

ಶ್ರೀ ಟಿ. ಸುಬ್ರಹ್ಮಣ್ಯರವರು.—I beg to interfere, Sir, ಶ್ರೀ ಚೆನ್ನಬೈರೇಗೌಡರು ನಾನು ಹೇಳಿದ್ದನ್ನು ಕೇಳಿದಹಾಗೆ ಕಾಣಲಿಲ್ಲ. ಕೇಳಲಿಲ್ಲವೆಂಬುದನ್ನು ತಿಳಿದುಕೊಂಡು ನನ್ನ ಭಾಷಣದ ಪ್ರತಿಯನ್ನು ತರಿಸಿಕೊಂಡು ಓದಿಲ್ಲ. ನಾನು ಆ ರೀತಿ ಹೇಳಲಿಲ್ಲ. ಮಾನ್ಯ ಸದಸ್ಯರು ಆ ರೀತಿ ನನ್ನ ವಿಷಯದಲ್ಲಿ ಹೇಳಕೂಡದು.

ಶ್ರೀ ಬಿ. ಚೆನ್ನಬೈರೇಗೌಡರು.—ಇರಬಹುದು. ಈಸಾರಿ ಬಜೆಟ್ಟಿನ ಮೇಲೆ ಸುಮಾರು 37 ಜನರು ಮಾತನಾಡಿರುತ್ತಾರೆ. ಆ 37 ಮಂದಿಯೂ ಕೂಡ ಈ ಹತೋಟಿ ಆಜ್ಞೆಗಳನ್ನು ಟೀಕಿಸಿ ಮಾತನಾಡಿದ್ದಾರೆ. ಒಬ್ಬಿಬ್ಬರು ಬಿಟ್ಟು ಮಿಕ್ಕವರೆಲ್ಲರೂ ಈ ಕಂಟ್ರೋಲ್ ಆಜ್ಞೆಗಳಿರುವುದು ಸರಿಯಲ್ಲವೆಂದು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಮೊನ್ನೆ ಇಲ್ಲಿ ನಡೆದ ಒಂದು ಪ್ರಸಂಗವನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಪ್ರಶ್ನೆ ಈ ಸಭೆಯ ಮುಂದೆ ಚರ್ಚೆಗೆ ಬಂದಿತ್ತು. ಈ ಚರ್ಚೆಯನ್ನು ನೋಡಿ ಅವರು ಯಾವ ರೀತಿ ರಾಜಿನಾಮೆಕೊಟ್ಟರೆಂಬುದನ್ನು ಗಮನಿಸಬೇಕು.

ಅಧ್ಯಕ್ಷರು.—ಇಲ್ಲಿ ಆ ವಿಷಯ ಚರ್ಚೆಯಾಗಿದ್ದಕ್ಕೆ ಅವರು ರಾಜಿನಾಮೆ ಕೊಟ್ಟರೆಂದೇ !!

ಶ್ರೀ ಬಿ. ಚೆನ್ನಬೈರೇಗೌಡರು.—ಆ ಅಧಿಕಾರಿಗಳು ತಮ್ಮ ವಿಷಯದಲ್ಲಿ ದೇಶದ ಜನರ ಅಭಿಮಾನವಿಲ್ಲವೆಂಬುದನ್ನು ತಿಳಿದ ಮೇಲೆ ತಾವು ಆ ಸ್ಥಾನದಲ್ಲಿರುವುದು ಸರಿಯಲ್ಲವೆಂದು ಹೇಳಿ ಅವರು ರಾಜಿನಾಮೆ ಕೊಟ್ಟಿರುವುದು ನಿಜವಾಗಿಯೂ ಅವರ ಯೋಗ್ಯತೆ ಎಂಥಾದೆಂಬುದನ್ನು ವ್ಯಕ್ತಪಡಿಸುತ್ತದೆ. ಆದರೆ ಅದೇ ಈ ಸಭೆಯಲ್ಲಿ ಎಷ್ಟೋ ದಿವಸಗಳಿಂದ ಈ ಆಹಾರದ ಹತೋಟಿ ಆಜ್ಞೆಗಳು ಹೋಗಬೇಕೆಂದು ಇಷ್ಟೆಲ್ಲಾ ಸದಸ್ಯರೂ ಮಾನ್ಯ ಮಂತ್ರಿಗಳ ವರ್ತನೆ ಸರಿಯಲ್ಲವೆಂತ ಚರ್ಚೆಮಾಡುತ್ತಿದ್ದರೂ ಮಾನ್ಯ ಮಂತ್ರಿಗಳು ರಾಜೀನಾಮೆ ಕೊಡದೇಯಿರುವುದು ಆಶ್ಚರ್ಯಕರವಾಗಿದೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಚರ್ಚೆಯಾಗಿರಬಹುದು; ಆದರೆ ಆ ರೀತಿ ತೀರ್ಮಾನಕ್ಕೆ ಬರದೆ ಹೋದರೆ !!

ಶ್ರೀ ಬಿ. ಚೆನ್ನಬೈರೇಗೌಡರು.—ಈ ಸಭೆಯ ಸದಸ್ಯರುಗಳು ಹೇಳಿದಂತೆ ಮಾಡದೆ ಇದನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇವರುಗಳೇ ಅಧಿಕಾರಕ್ಕೆ ಬಂದು ಮೂರು ವರ್ಷವಾಯಿತು. ಮಾತಿಗೆ ಮುಂಚೆ ಗಾಂಧಿಜೀಯವರ ಆದರ್ಶಜೀವನವನ್ನೂ ಅವರ ತತ್ವಗಳನ್ನು ಹೇಳಿಕೊಂಡು ತಿರುಗುತ್ತಿದ್ದವರು ಇಂದು ಅದಕ್ಕನುಸಾರವಾಗಿ ನಡೆಯುತ್ತಿದ್ದಾರೆಯೇ ? ಪ್ರಜಾ ಸರ್ಕಾರವೆಂದರೆ ಪ್ರಜಾಭಿಪ್ರಾಯಕ್ಕೆ ಮನ್ನಣೆಕೊಡುವ ಸರ್ಕಾರವೆಂದು ಎಲ್ಲೆಲ್ಲಿಯೂ ಹೇಳುತ್ತಿದ್ದಾರೆ. ಆದರೆ ಮೊನ್ನೆ ದಿವಸ ಮಾನ್ಯ ರೆವಿನ್ಯೂ ಮಂತ್ರಿಗಳು ಒಂದು ಕಡೆ ಅಧ್ಯಕ್ಷತೆವಹಿಸಿ ಭಾಷಣಮಾಡುತ್ತಾ ಈಗಿರುವುದು ಮಹಾತ್ಮಾಗಾಂಧಿಯವರು ಹೇಳಿದಂಥ ಜನಪ್ರಿಯ ಸರ್ಕಾರ ಎಂದು ಹೇಳಿದರು.

Sri K. R. MADHAVA RAO (Shimoga District-General).—Is he debating upon the resolution or delivering some speech on other matters ?

ಶ್ರೀ ಬಿ. ಚೆನ್ನಬೈರೇಗೌಡರು.—ಜನಸಮುದಾಯ ಸೇರಿರುವಾಗ ಅವರನ್ನು ಒಲಿಸಿಕೊಳ್ಳುವುದಕ್ಕಾಗಿ ಯಾವ ರೀತಿ ಮಹಾತ್ಮಾ ಗಾಂಧಿಯವರ ಜನಾಭಿಪ್ರಾಯ ಸರ್ಕಾರ ಇದು ಎಂದು ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಿ ಭಾಷಣಗಳನ್ನು ಮಾಡುತ್ತಾರೋ ಅದೇ ರೀತಿ ಕಾರ್ಯತಃ ಆಡಳಿತದಲ್ಲೇಕೆ ಮಾಡಿತೋರಿಸಕೂಡದೆಂದು ನಾನು ಕೇಳುತ್ತಿದ್ದೇನೆ ಅಷ್ಟೆ.

ಅಧ್ಯಕ್ಷರು.—ಆಡಳಿತದ ವಿಚಾರವಿರಲಿ, ಕಂಟ್ರೋಲ್ ವಿಚಾರ ಹೇಳಿ.

ಶ್ರೀ ಬಿ. ಚೆನ್ನಬೈರೇಗೌಡರು.—ಕಂಟ್ರೋಲ್ ಇರುವುದೇ ಇಷ್ಟೊಂದು ಅಸತ್ಯ, ಅನೀತಿಗೆ ಕಾರಣವಾಗಿದೆ.

ಒಬ್ಬ ಸದಸ್ಯರು.—ಅವರು ಯಾರನ್ನು ಒಲಿಸಿಕೊಳ್ಳುವುದಕ್ಕೆ ಗಾಂಧಿಯವರ ಹೆಸರನ್ನು ಉಪಯೋಗಿಸಿದರೆಂದು ಹೇಳುತ್ತಾರೆ ?

ಶ್ರೀ ಬಿ. ಚೆನ್ನಬೈರೇಗೌಡರು.—ನೀವುಗಳು. ಗಾಂಧಿಯವರ ತತ್ವ, ಆದರ್ಶ ಆದಿತ್ತು, ಇದಿತ್ತು ಎಂದು ಅಂಥ ಪೂಜ್ಯ ಗಾಂಧೀಜಿಯವರ ಆದರ್ಶತತ್ವಗಳನ್ನು ಕಾರ್ಯರೂಪಕ್ಕೆ ತರದೆ ಬರಿ ಭಾಷಣಗಳಲ್ಲೇ ಪರ್ಯವಸಾನವಾದರೆ ನೀವು ಎಂಥ ವಚನಭ್ರಷ್ಟರೆಂಬುದು ಎದ್ದು ಕಾಣುತ್ತದೆ.

ಆ ಮೇಲೆ ಕಂಟ್ರೋಲ್ ಹೋಗಬೇಕೆಂಬ ವಿಚಾರದಲ್ಲಿ ಶ್ರೀ ಮಂಜಪ್ಪನವರು ತಮ್ಮ ಮನೋಭಿಪ್ರಾಯವನ್ನು ಮುಚ್ಚುಮರೆಯಿಲ್ಲದೆ ಇದ್ದದ್ದು ಇದ್ದಹಾಗೆ ನಿರೂಪಿಸಿ ಈ ನಿರ್ಣಯವನ್ನು ಸೂಚಿಸಿದ್ದಾರೆ. ಅವರ ಮನೋವೃತ್ತಿ ನನಗೆ ಚೆನ್ನಾಗಿ ಗೊತ್ತು. ನಾವಿಬ್ಬರೂ ಒಂದೇ ಕೊಠಡಿಯಲ್ಲಿ ಕೆಲವುಕಾಲ ಇದ್ದವರಾಗಿ ಅವರ ಸ್ವಭಾವ ನಮಗೆ ಗೊತ್ತು. ಮನಸ್ಸಿನಲ್ಲಿರುವುದನ್ನೇ ಅವರು ಬಾಯಲ್ಲಿ ಹೇಳಿಯಾರು ! ಅಷ್ಟೇ ಹೊರತು ಆತ್ಮವಂಚನೆಮಾಡುವವರಲ್ಲ. ಅಂಥವರಿಗೆ ಈ ಅಭಿಪ್ರಾಯ......

ಶ್ರೀ ಟಿ. ಹನುಮಯ್ಯನವರು.—(ಚಿತ್ರದುರ್ಗ ಜಿಲ್ಲೆ ನಿಮ್ನ ಪಂಗಡ).—I raise a point of order Sir. ಅವರು ಹೇಳಿದ "ವಚನಭ್ರಷ್ಟರು" ಎಂಬ ಪದ unparliamentary. ಅದನ್ನು ಅವರು ವಾಪಸು ತೆಗೆದುಕೊಳ್ಳಬೇಕು. ಯಾರು ಮಾತುಕೊಟ್ಟರು ಮತ್ತು ಮಾತಿಗೆ ತಪ್ಪಿ ಯಾರು ವಚನಭ್ರಷ್ಟರಾದರೆಂಬುದನ್ನು ತಿಳಿಸಲಿ.

ಅಧ್ಯಕ್ಷರು.—ಹೀಗೆಲ್ಲಾ ಅನಾವಶ್ಯಕವಾಗಿ ಇತರರನ್ನು ಉದ್ರೇಕಗೊಳಿಸುವಂಥ ಮಾತುಗಳನ್ನು ಉಪಯೋಗಿಸುವುದು ಒಳ್ಳೆಯದು.

ಶ್ರೀ ಬಿ. ಚೆನ್ನಬೈರೇಗೌಡರು.—ಆದ್ದರಿಂದ ಶ್ರೀ ಮಂಜಪ್ಪನವರು ಯಾವ ಒಂದು ಘನ ಉದ್ದೇಶದಿಂದ ಈ ನಿರ್ಣಯವನ್ನು ತಂದು ಮಂಡಿಸಿದ್ದಾರೋ ಅದನ್ನವರು ವಾಪಸು ತೆಗೆದುಕೊಳ್ಳದೆ ಒತ್ತಾಯಮಾಡಿ ದೇಶಕ್ಕೆ ಕಲ್ಯಾಣವನ್ನುಂಟುಮಾಡುತ್ತಾರೆಂದು ನಂಬಿದ್ದೇನೆ.

ಈ ನಿರ್ಣಯದ ಕೊನೆಯ ಭಾಗದಲ್ಲಿ ಸಿಟಿಗಳಲ್ಲಿ ಮಾತ್ರ ಕಂಟ್ರೋಲ್ ಇಟ್ಟುಕೊಳ್ಳಬಹುದೆಂದು ಸೂಚಿಸಿದ್ದಾರೆ ಇದೂ ಸರಿಯಲ್ಲ. ನಾನು ಇದಕ್ಕೆ ಒಂದು ತಿದ್ದುಪಡಿಯನ್ನೇ ಕಳುಹಿಸಬೇಕೆಂದಿದ್ದೆ. ಕಾರಣಾಂತರದಿಂದ ಕಳುಹಿಸಲಿಲ್ಲ. ಅಂತೂ ಸಿಟಿಗಳಲ್ಲಿ ಮಾತ್ರ ಉಳಿಸದೆ ದೇಶಾದ್ಯಂತವೂ ಕಂಟ್ರೋಲ್ ತೆಗೆಯುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

Sri H. C. LINGA REDDY (Kolar District-General).—I move for closure, Sir. There has been enough discussion yesterday and today also on this subject.

ಶ್ರೀ ಎ. ಜಿ. ಬಂಡೀಗೌಡರು (ಮಂಡ್ಯ ಜಿಲ್ಲೆ).—ಅಧ್ಯಕ್ಷರೇ, ಈಗ ತಂದಿರತಕ್ಕ ನಿರ್ಣಯದ ವಿಚಾರದಲ್ಲಿ ಈಗಾಗಲೇ ಅನೇಕ ಮಾನ್ಯ ಮಿತ್ರರು ಮಾತನಾಡಿದ್ದಾರೆ. ಅವರ ಭಾಷಣಗಳನ್ನು ವಿಂಗಡಿಸಿ ನೋಡಿದರೆ, ಕೆಲವರು ಕಂಟ್ರೋಲನ್ನು ಪೂರ್ತಿಯಾಗಿ ತೆಗೆದು ಹಾಕಬೇಕೆಂದೂ, ಇನ್ನು ಕೆಲವರು ಕ್ರಮೇಣ ಹೋಗಬೇಕೆಂದೂ ಮತ್ತೆ ಕೆಲವರು ಸಂಸ್ಥಾನದ ಕೆಲವು ಪ್ರದೇಶಗಳಲ್ಲಿ ಮಾತ್ರ ಕಂಟ್ರೋಲ್ ಇರಬೇಕೆಂದು ಸೂಚಿಸಿದ್ದಾರೆ. ಮತ್ತೆ ಕೆಲವರು ಒಂದು ಕಾಲವನ್ನು ಗೊತ್ತುಮಾಡಿ ಆ ಕಾಲದಲ್ಲಿ ಕಂಟ್ರೋಲ್ ಹೋಗಬೇಕೆಂದು ಕೆಲವರು ಸೂಚಿಸಿದ್ದಾರೆ. ಈ ಪ್ರಕಾರ ಮಾತನಾಡಿದವರೆಲ್ಲರ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿ ನೋಡಿದರೆ ಕಂಟ್ರೋಲ್ ಇರಬೇಕೆಂದು ಯಾರೂ ಹೇಳಿರುವುದಿಲ್ಲ. ಮಾನ್ಯ ಮಿತ್ರರಾದ ಶ್ರೀಮಾನ್ ವೀರಣ್ಣಗೌಡರು, ಭೀಮಪ್ಪನಾಯಕರು ಮತ್ತು ಟಿ. ಸುಬ್ರಹ್ಮಣ್ಯರವರು ಈ ಕಂಟ್ರೋಲ್ ಹೋಗಬೇಕೆಂಬುದನ್ನು ಒಪ್ಪಿ ಅದನ್ನು ಕ್ರಮೇಣ ತೆಗೆಯಬೇಕೆಂದು ಸೂಚಿಸಿದ್ದಾರೆ. ಒಟ್ಟಿನಲ್ಲಿ ಈ ಸಭೆ ಇದೇ ಕಂಟ್ರೋಲ್ ವಿಷಯದಲ್ಲಿ ಹಿಂದೆ ಯಾವ ರೀತಿ ಅಭಿಪ್ರಾಯವನ್ನು ಸೂಚಿಸಿತ್ತೋ ಅದರಂತೆಯೇ ಈಗಲೂ ಬಹಳ ಖಚಿತವಾಗಿ ತನ್ನ ಅಭಿಪ್ರಾಯಗಳನ್ನು ಸೂಚಿಸಿದೆಯೆಂದು ನಾನು ಭಾವಿಸುತ್ತೇನೆ.

ಈ ರೀತಿಯಾಗಿ ಈ ಸಭೆಯು ತನ್ನ ಒಂದು ಅಭಿಪ್ರಾಯವನ್ನು ಸೂಚಿಸಿದ ಮೇಲೆ, ಅದರ ಮರ್ಯಾದೆ ಮತ್ತೆ ಸಭೆಯ ಗೌರವಗಳನ್ನು ಕಾಪಾಡತಕ್ಕದ್ದು ಪ್ರಜಾಸರ್ಕಾರದ ಕರ್ತವ್ಯವೆಂದು ನಾನು ಹೇಳಬೇಕಾದ್ದೇ ಇಲ್ಲ. ಹೀಗೆ ಹೇಳುವಾಗ ಒಂದು ಪ್ರಶ್ನೆ ಉದ್ಭವಿಸಬಹುದು. ಆ ಪ್ರಶ್ನೆ ಏನೆಂದರೆ ನಾವು ಈ ಸಭೆಯಲ್ಲಿ ಈಗ ಮಾತನಾಡುತ್ತಿರುವ ವಿಚಾರ ಕೇಂದ್ರ ಪಾರ್ಲಿಮೆಂಟಿಗೆ ಸಂಬಂಧಪಟ್ಟಿದ್ದು, ಅಲ್ಲಿ ಇತ್ಯರ್ಥವಾಗತಕ್ಕದ್ದಾಗಿದೆಯೆಂದು ಹೇಳಬಹುದು. ಆದರೆ ಇಂಥಾ ವಿಚಾರಗಳ ಬಗ್ಗೆ ಈ ಮಾನ್ಯ ಸಭೆಯಲ್ಲಿ ವ್ಯಕ್ತಪಡತಕ್ಕ ಅಭಿಪ್ರಾಯಗಳಿಗೆ ಪ್ರಾಯಶಃ ಇಲ್ಲಿಯವರೆಗೆ, ಅಂಥಾ ಪ್ರಜಾಭಿಪ್ರಾಯಕ್ಕೆ ಯಾವ ಮನ್ನಣೆಯೂ ದೊರೆತಿರುವಂತೆ ಕಾಣುವುದಿಲ್ಲ. ಈ ಬಗ್ಗೆ ಈ ಮಾನ್ಯ ಸಭೆಯ ಅಭಿಪ್ರಾಯಗಳನ್ನು ಕಾಪಾಡತಕ್ಕ ವಿಚಾರದಲ್ಲಿ ಸಂಸ್ಥಾನದ ಸರ್ಕಾರದವರು ಸ್ವಲ್ಪಮಟ್ಟಿಗೆ ಶ್ರಮಿಸಿದ್ದರೆ ಅದಕ್ಕೆ ನಾವು ತುಂಬಾ ಸಂತೋಷಪಡುತ್ತಿದ್ದೆವು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಈ ಸಭೆಯ ಅಭಿಪ್ರಾಯಕ್ಕೆ ಅಷ್ಟು ಮನ್ನಣೆ ಬರುತ್ತಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರಿಗಾದರೂ, ಈ ರೀತಿ ಸಭೆಯು ಅಭಿಪ್ರಾಯಪಟ್ಟಿದೆ ಎಂಬುದಾಗಿ ತಿಳಿಸಿ, ಅದರಬಗ್ಗೆ ಏನು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಜಾಗ್ರತೆ ಕೈಗೊಳ್ಳುವಂತೆ ಮಾಡುವುದರ ಮೂಲಕ ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆಕೊಡಿಸತಕ್ಕದ್ದು ಪ್ರಜಾಸರ್ಕಾರದ ಕರ್ತವ್ಯವಾಗಿದೆಯೆಂದು ನಾನು ಹೇಳಬಯಸುತ್ತೇನೆ.

ಮಾನ್ಯ ಸದಸ್ಯರನೇಕರು ಮಾತನಾಡುತ್ತಿರುವಾಗ ಕಂಟ್ರೋಲ್ ತೆಗೆಯುವ ವಿಚಾರದಲ್ಲಿ ತಾವು ಧೈರ್ಯ ಮಾಡಬೇಕೆಂದು ಕೇಳಿದಾಗಲೆಲ್ಲಾ ನಮ್ಮ ಮಾನ್ಯ ಮಂತ್ರಿಗಳು "ನಾವು ಇಷ್ಟೆಲ್ಲಾ ಮಾಡುತ್ತಾ ಇದ್ದಾಗ್ಯೂ, ತಾವು ನಮ್ಮಲ್ಲಿ ಇನ್ನೂ ಧೈರ್ಯವಿಲ್ಲ ಎಂದು ಹೇಳುವುದು ಆಶ್ಚರ್ಯವಲ್ಲವೆ ? " ಎಂದು ಅವರು ಉತ್ತರ ಕೊಡುತ್ತಿದ್ದಾರೆ. ಆದರೆ ಅವರು ಯಾವ ವಿಚಾರದಲ್ಲಿ ಧೈರ್ಯ ಮಾಡಬೇಕೋ ಅದರ ಬಗ್ಗೆ ಮಾಡದೆ, ಪ್ರಜಾಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಧೈರ್ಯ ಮಾಡುತ್ತಿದ್ದಾರೆಂದು ನಾನು ಹೇಳಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು ಈ ಸಭೆಯಲ್ಲಿ ಮಾತನಾಡುವಾಗ ಈ ಕಂಟ್ರೋಲುಗಳನ್ನು ಕೂಡಲೆ ತೆಗೆಯಬೇಕೆಂದರೆ ಅದು ಬೇಜವಾಬ್ದಾರಿಯ ಮಾತಾಗುತ್ತದೆಂದು ಹೇಳಿದರು. ಆದರೆ ಹಾಗೆ ಹೇಳತಕ್ಕದ್ದು ಸರಿಯಲ್ಲ, ಹಾಗೆ ಹೇಳುವುದು ಬೇಜವಾಬ್ದಾರಿಯ ಮಾತಲ್ಲವೆಂಬುದನ್ನು ಮಾನ್ಯ ಸದಸ್ಯರಿಗೆ ನಾನು ಈಗ ವಿವರಿಸಬೇಕಾಗಿರುತ್ತೆ. ಮಹಾತ್ಮಾ ಗಾಂಧೀಜಿಯವರೇ ಈ ಹಿಂದೆ ಹತೋಟಿ ಆಜ್ಞೆಗಳೆಲ್ಲಾ ಹೋಗಬೇಕೆಂದು ತಿಳಿಸಿರತಕ್ಕದ್ದು ಮಾನ್ಯ ಸದಸ್ಯರೆಲ್ಲರ ಗಮನದಲ್ಲೂ ಇರಬಹುದು. ಹಾಗೆ ಒಂದು ಹೇಳಿಕೆಯನ್ನು ಅವರು ಕೊಡುವಾಗ, ಈ ಹತೋಟಿ ಆಜ್ಞೆಗಳು ದೇಶದಲ್ಲಿ ಎಲ್ಲಿಯತನಕ ಇರುತ್ತವೆಯೋ ಅಲ್ಲಿಯತನಕ ದೇಶಕ್ಕೆ ಕ್ಷೇಮವಿಲ್ಲವೆಂದೂ, ಅದಕ್ಕಾಗಿ ಕೂಡಲೇ ಈ ಆಜ್ಞೆಗಳನ್ನೆಲ್ಲಾ ತೆಗೆಯಬೇಕೆಂದು ತಿಳಿಸಿದ್ದರು. ಇದೇ ರೀತಿಯಾಗಿ ಅಖಿಲಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಡಾ॥ ಪಟ್ಟಾಭಿ ಸೀತಾರಾಮಯ್ಯನವರೂ ಸಹ ಒಂದು ಹೇಳಿಕೆಯನ್ನು ಕೊಟ್ಟು ಈ ಹತೋಟಿಗಳೆಲ್ಲಾ ತಕ್ಷಣವೇ ಆದಷ್ಟು ಬೇಗ ಹೋಗಬೇಕೆಂದು ತಿಳಿಸಿದ್ದಾರೆ. ಅದೇ ರೀತಿ ಈಗಿನ ನಮ್ಮ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿರತಕ್ಕ ಶ್ರೀಯುತ ಕೆ. ಹನುಮಂತಯ್ಯನವರೂ ಕೂಡ ಸಂಸ್ಥಾನದಲ್ಲಿ ಒಂದು ಪ್ರವಾಸವನ್ನು ಕೈಗೊಂಡಿದ್ದಾಗ್ಯೆ ಈ ಕಂಟ್ರೋಲುಗಳೆಲ್ಲಾ ಆದಷ್ಟು ಬೇಗ ಹೋಗಬೇಕು, ನನ್ನ ಕೈಲಿ ಅಧಿಕಾರವಿದ್ದಿದ್ದರೆ ನಾನು ಮೊದಲು ಇವುಗಳನ್ನೆಲ್ಲಾ ತೆಗೆದುಹಾಕಿಬಿಡುತ್ತಿದ್ದೆ ಎಂದು ತಿಳಿಸಿದ್ದಾರೆ. ಹೀಗೆ ಈ ಹತೋಟಿ ಆಜ್ಞೆಗಳು ಆದಷ್ಟುಬೇಗ ಹೋಗಬೇಕೆಂದರೆ ಅದೊಂದು ಬೇಜವಾಬ್ದಾರಿಯ ಮಾತಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆ ಹೇಳತಕ್ಕದ್ದು ಬೇಜವಾಬ್ದಾರಿಯ ಮಾತಾಗುವುದಾದರೆ, ಮಹಾತ್ಮ ಗಾಂಧೀಜಿಯವರ ಮಾತೂ ಬೇಜವಾಬ್ದಾರಿಯದೆಂದೇ ಹೇಳಿದ ಹಾಗಾಗುತ್ತದೆ. ಆದುದರಿಂದ ಹಾಗೆ ಕಂಟ್ರೋಲುಗಳು ಹೋಗಬೇಕೆಂದು ಹೇಳಿದ್ದನ್ನು ಬೇಜವಾಬ್ದಾರಿಯ ಮಾತೆಂದು ಹೇಳತಕ್ಕದ್ದು ಸರಿಯಲ್ಲವೆಂದು ನಾನು ಸೂಚಿಸಲಿಚ್ಛಿಸುತ್ತೇನೆ. ಹೀಗೆ ಕಂಟ್ರೋಲುಗಳು ಬೇಗ ಹೋಗಬೇಕೆಂದು ಹೇಳಿದರೆ ಅದು ಒಂದು ಬೇಜವಾಬ್ದಾರಿಯ ಮಾತಾಗುತ್ತದೆಯೇ ಎಂದು ನಾನು ಪರ್ಯಾಲೋಚನೆ ಮಾಡಿ ನೋಡಿದ್ದೇನೆ. ಹಾಗೆ ನೋಡಿದ್ದರಲ್ಲಿ ಅದು ಬೇಜವಾಬ್ದಾರಿಯಾಗುವುದಿಲ್ಲ. ನಾವು ಇಲ್ಲಿ ಒಂದು ಚರ್ಚಾಕೂಟದಲ್ಲಿ ಮಾತನಾಡಿದಂತೆ ಮಾಡುತ್ತಿಲ್ಲ. 1943ನೆಯ ಇಸವಿಯಿಂದಲೂ ಈ ಹತೋಟಿ ಆಜ್ಞೆಗಳು ಜಾರಿಯಲ್ಲಿದ್ದುಕೊಂಡು ಬಂದಿರುತ್ತವೆ. ಹೀಗೆ 7–8 ವರ್ಷಗಳ ಲಾಗಾಯ್ತಿನಿಂದ ಇದರ ಬಗ್ಗೆ ಏನು ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿತ್ತೋ ಅದನ್ನು ಕೈಗೊಳ್ಳಲು, ಖಚಿತವಾದ ತೀರ್ಮಾನಕ್ಕೆ ಇನ್ನೂ ಬಂದಿಲ್ಲ. ಇದು ಒಂದು ದೊಡ್ಡ ಸಮಸ್ಯೆ. ಇದರ ಬಗ್ಗೆ ಯಾರಾದರೂ ಮಾತನಾಡಿ ತಮ್ಮ ಅಭಿಪ್ರಾಯ ತಿಳಿಸಿದರೆ ಅದನ್ನು ಬೇಜವಾಬ್ದಾರಿಯೆಂದು ಹೇಳಿದ್ದು ತಪ್ಪಾಗಿದೆ. ಅದನ್ನು ಮಾನ್ಯ ಸದಸ್ಯರು ವಾಪಸ್ಸು ತೆಗೆದುಕೊಂಡರೆ ಉತ್ತಮವೆಂದು ಭಾವಿಸುತ್ತೇನೆ.

ಈ ನಿರ್ಣಯದ ಬಗ್ಗೆ ಕೆಲವರು ಈ ಹತೋಟಿ ಆಜ್ಞೆಗಳು ಹಾಗೆ ಇನ್ನೂ ಕೆಲವುಕಾಲ ಇರಬೇಕೆಂದೂ, ಇನ್ನು ಕೆಲವರು, ಇವು ತಕ್ಷಣ ಹೋಗಬೇಕೆಂದು ತಿಳಿಸಲು ಅನುಕೂಲವಾಗಿರುವಂತೆ, ಅಂದರೆ ಯಾವ ಪಾರ್ಟಿಗಳಿಗೂ ಬೇಜಾರಾಗಲು ಅವಕಾಶವಿಲ್ಲದಂತೆ, ಬಹಳ ಯೋಚನೆಮಾಡಿ ಈ ನಿರ್ಣಯದ ಸೂಚಕರು ಇದನ್ನು ಜಾಣ್ಮೆಯಿಂದ ತಂದಿದ್ದಾರೆ. ಆದರೆ ಅವರು ಹಾಗೆ ತಂದಿರತಕ್ಕ ನಿರ್ಣಯದಲ್ಲಿ ಅವರು ' This Assembly is of opinion " ಎಂದು ಹೇಳುವುದಕ್ಕೆ ಬದಲಾಗಿ "This Assembly resolves" ಎಂದು ತಿಳಿಸಿದ್ದರೆ ಆಗ ಅದಕ್ಕೂ, ಇದಕ್ಕೂ ಬಹಳ ವ್ಯತ್ಯಾಸವಿರುತ್ತಿತ್ತು. ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಇದಕ್ಕೆ ಒಂದು ಕಾಲಪರಿಮಿತಿ ಮಾಡತಕ್ಕ ಅವಶ್ಯಕತೆಯೇ ಇಲ್ಲ, ಇದನ್ನು ಯಾವಾಗ ಬೇಕಾದರೆ ಆಗ ತೆಗೆದುಬಿಡಬಹುದು ಎಂದು ತಿಳಿಸಿದರು. ಆದರೆ ಹಾಗೆ, ಸರ್ಕಾರದವರ ಕೈ ಕಟ್ಟಿಹಾಕುವಂಥ ರೀತಿಯಲ್ಲಿ ಸೂಚಕರು ಇದನ್ನು ತಂದಿಲ್ಲ. ಸರ್ಕಾರದವರಿಗೆ, 'This Assembly resolves' ಎಂದು ನಿರ್ಣಯವನ್ನು ಹೇಳಿ ತಂದಿದ್ದರೆ, ಒಂದು ಕಟ್ಟಾಜ್ಞೆಯಂತೆ ಇರುತ್ತಿತ್ತು. ಆಗ ಸರ್ಕಾರದವರು ಇದನ್ನು ಅನುಮೋದಿಸಲೇ ಬೇಕಾಗುತ್ತಿತ್ತು. ಹೀಗೆ ಯಾವುದೊಂದು ಹಿಡಿತಕ್ಕೂ ಸಿಕ್ಕದಂತೆ ಬಹಳ ಆಲೋಚನೆ ಮಾಡಿ ಈ ನಿರ್ಣಯವನ್ನು ತಂದಿದ್ದಾರೆ. ಆದರೆ ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರ ಸಲಹೆಯನ್ನು ತೆಗೆದುಕೊಂಡು ಅದರ ಪ್ರಕಾರ ಈ ಹತೋಟಿ ಆಜ್ಞೆಗಳನ್ನು ತೆಗೆದುಹಾಕತಕ್ಕದ್ದು ಒಳ್ಳೆಯದು. ಶ್ರೀಮಾನ್ ಸುಬ್ರಹ್ಮಣ್ಯರವರೂ ಕೂಡ ದೇಶದ ಎಲ್ಲಾ ಕಡೆಗಳಲ್ಲಿಯೂ ಒಂದೇಸಾರಿಗೆ ಜಾರಿಗೆ ತನ್ನಿ ಎಂದೇನೂ ಹೇಳಲಿಲ್ಲ. ಇದು ಬಹಳ ದೊಡ್ಡ ಸಮಸ್ಯೆ. ಇದು ಬಹಳ ವರ್ಷಗಳಿಂದಲೂ ಬೇರೂರಿಕೊಂಡು ಸರ್ಕಾರದ ಧೋರಣೆಯನ್ನು ಒಂದು ರೀತಿಗೆ ತಂದಿದೆ. ಆದರೆ ಇದೆಲ್ಲವನ್ನು ಯಾವ ರೀತಿ ತೆಗೆದರೆ ಎಲ್ಲವೂ ಸುಗಮವಾಗಿ ನಡೆಯುತ್ತದೋ ಆ ರೀತಿ ಮಾಡಿ, ಅನುಕೂಲಪಡಿಸಬೇಕೆಂದು ನಾನು ಹೇಳುವವನಾಗಿದ್ದೇನೆ. ಈಗ ನಮಗೆ ಯಾರಿಗಾದರೂ 40 ಸೇರು ದವಸ ಬೇಕೆಂದರೆ ನಾವು potential surplus holders ಗಳಿಂದಲೇ ತರಬೇಕಾಗಿರುತ್ತೆ. ಈಗ ಈ ಸಕ್ಕರೆ ಕಂಟ್ರೋಲಿನ ಬಗ್ಗೆ ಯಾವ ಒಂದು ನೀತಿಯನ್ನು ಅನುಸರಿಸಲಾಗಿವೆಯೋ, ಆ ರೀತಿ ನೀತಿಗಳೇ ಅನುಕೂಲವಾಗಿದೆಯೆಂದು ಕಂಡುಬಂದರೆ ಆ ರೀತಿಯಿಂದಲಾದರೂ ಈ ಹತೋಟಿಗಳನ್ನು ತೆಗೆದುಹಾಕಲು ತಾವು ಧೈರ್ಯಮಾಡಬೇಕೆಂದು ನಾನು ಹೇಳುತ್ತೇನೆ. ಕಂಟ್ರೋಲ್‌ಗಳು ದೇಶದಲ್ಲಿ ಇರುವುದರಿಂದ ಅಧರ್ಮ, ಅನೀತಿ, ಅಸತ್ಯಗಳು ತಲೆದೋರಲು ಕಾರಣವಾಯಿತು. ಈ ಅಧರ್ಮ, ಅನೀತಿಗಳಿಗೆ ಇನ್ನೂ ಅನೇಕ ಬೇರೆ ಕಾರಣಗಳೂ ಇರಬಹುದು. ಮೈಸೂರು ದೇಶದಲ್ಲಿ ಮಾನ್ಯ ಮಂತ್ರಿಗಳಿಗೂ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ಈ ಮದುವೆ ಕಾಲಗಳಲ್ಲಿ, ಸಮಾರಂಭಕ್ಕೆ ಜನರನ್ನು ಒಟ್ಟುಗೂಡಿಸಿಕೊಳ್ಳುವ ಸಂದರ್ಭದಲ್ಲಿ ಅವರಿಗೆ ಲಗ್ನಪತ್ರಿಕೆಗಳನ್ನು ಕಳುಹಿಸುವಾಗ ಅದರಲ್ಲಿ 'please bring your ration' ಎಂದು ಬರೆದಿರುತ್ತೆ. ಆದರೆ ಹಾಗೆ ಯಾರಾದರೂ ಅವರ ರೇಷನ್ ಪದಾರ್ಥಗಳನ್ನು ತೆಗೆದುಕೊಂಡು ಹೋಗಿದ್ದಾರೆಯೇ ಎಂದರೆ ಎಲ್ಲಿಯೂ ಅಂಥಾದ್ದು ಕಂಡುಬರುವುದಿಲ್ಲ. ಇದರಿಂದ ಮೋಸ, ಅನೀತಿ ಎಂಬುವು ಹೇಗೆ ನಡೆಯುತ್ತಾ ಇವೆ ಎಂಬುದು ಗೊತ್ತಾಗುತ್ತದೆ. ಈ ಕೆಲವು ಮಾತುಗಳನ್ನು ಹೇಳಿ ಈ ನಿರ್ಣಯದಲ್ಲಿ ಸೂಚಕರು ತಿಳಿಸಿರುವುದು ಸರಿಯಾಗಿದೆ. ಇದನ್ನು ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ಪುಷ್ಟೀಕರಿಸುತ್ತೇನೆ.

Mr. SPEAKER.—There is a closure motion already moved. The question is:

"That the question be now put."

The motion was adopted.

ಶ್ರೀ ಕಡಿದಾಳ್ ಮಂಜಪ್ಪನವರು.—ಸ್ವಾಮಿ, ನಿರ್ಣಯದ ಉದ್ದೇಶವೇನೆಂಬುದರ ಬಗ್ಗೆ ಎಲ್ಲರೂ ಸಂಕ್ಷೇಪವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಈ ಹತೋಟಿ ಆಜ್ಞೆಗಳು ಎಷ್ಟು ಜಾಗ್ರತೆ ಹೋದರೆ ಅಷ್ಟೂ ಉತ್ತಮವಾಗುತ್ತದೆಂದು ಒತ್ತಿ ಹೇಳಿದ್ದಾರೆ. ವಿವರಣೆಯಲ್ಲಿ ನನಗೂ, ನನ್ನ ಮಿತ್ರರಿಗೂ ಸ್ವಲ್ಪ ವ್ಯತ್ಯಾಸವಿದೆ. ಶ್ರೀಮಾನ್ ಟಿ. ಸುಬ್ರಹ್ಮಣ್ಯರವರೂ, ವೀರಣ್ಣಗೌಡರೂ, ಭೀಮಪ್ಪನಾಯಕರೂ ಈ ನಿರ್ಣಯದಲ್ಲಿ ಆಹಾರ ಹತೋಟಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತೆಗೆದುಹಾಕಿಬಿಟ್ಟು, ದೊಡ್ಡದೊಡ್ಡ ಪಟ್ಟಣಗಳಿಗೆ ಮಾತ್ರ ಆಹಾರ ಒದಗಿಸುವಂತೆ ಅರ್ಥ ಬರುವ ರೀತಿಯಲ್ಲಿ ನಿರ್ಣಯವು ಬಂದಿರುತ್ತೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಹಾಗೆ ನಾನು ನನ್ನ ನಿರ್ಣಯದಲ್ಲಿ ದವಸವನ್ನು ಪಟ್ಟಣವಾಸಿಗಳಿಗೆ ಮಾತ್ರವೇ ಒದಗಿಸಬೇಕೆಂದು ತಿಳಿಸಿಲ್ಲ.

ಎರಡನೆಯದು ಒಂದುವೇಳೆ ನನ್ನ ನಿರ್ಣಯವನ್ನು ಕಾರ್ಯರೂಪಕ್ಕೆ ತಂದರೆ ಹಳ್ಳಿಗಳಿಂದ ದವಸ ಜಾಗ್ರತೆಯಾಗಿ ಪಟ್ಟಣಗಳಿಗೆ ಹೋಗಬಹುದು, ಹಳ್ಳಿಗಳಿಗೆ ಆಹಾರದ ಅಭಾವ ಬರಬಹುದು ಎಂಬ ವಾದವಿದೆ. ಅದು ವಿವಾದ ಪ್ರಶ್ನೆ. ಉತ್ಪತ್ತಿ ಹೇಗೆ ಮಾಡಬಹುದು, ಏನು ಕಾರ್ಯಕ್ರಮ ಕೈಕೊಳ್ಳಬಹುದು, ಒಂದು ಕಡೆಯಿಂದ ಇನ್ನೊಂದು ಕಡೆಗೆ ಇಷ್ಟು ಅಪ್ಪಣೆಯಿಲ್ಲದೆ ಒಯ್ಯಬಹುದು ಎಂದು ಯೋಚನೆಮಾಡಿ ಕಟ್ಟುನಿಟ್ಟಾದ ಏರ್ಪಾಡು ಮಾಡಬಹುದು. ಹಾಗೆ ಮಾಡಿದರೆ ಸುಲಭವಾಗಿ ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಿದೆ. ಪಟ್ಟಣಗಳಲ್ಲಿ ಮಾತ್ರ ಹತೋಟಿಯಿಟ್ಟುಕೊಳ್ಳಬಹುದು. ಒಂದೇಸಾರಿ ಹಳ್ಳಿಗಳಿಂದ ಪಟ್ಟಣಕ್ಕೆ ಆಹಾರದ ದವಸವೆಲ್ಲಾ ನುಗ್ಗಿ ಹಳ್ಳಿಗಳಲ್ಲಿ ಕ್ಷಾಮ ತಲೆದೋರಬಹುದು ಎಂಬ ವಾದವಿದ್ದರೂ ಆ ರೀತಿ ಆಗದಹಾಗೆ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಿದೆ. ಹಳ್ಳಿಗಳಲ್ಲಿ ಕ್ಷೋಭೆಯುಂಟಾಗುತ್ತದೆ, ಅನಾಹುತವಾಗುತ್ತದೆ, ಕಿರುಕುಳವಾಗುತ್ತದೆ ಎಂದು ಹೇಳಿದರು. ಆದರೆ ಈಗಿರುವ ಕಿರುಕುಳಕ್ಕಿಂತ ಅದು ಹೆಚ್ಚಾಗುವುದಿಲ್ಲವೆಂಬ ಅಭಿಪ್ರಾಯವಿದೆ. ಈಗ ಕಿರುಕುಳ ಕಡಮೆಯಿಲ್ಲ. ಹಳ್ಳಿಗಳಲ್ಲಿ ಯಾವ ಡಿಪೋದಲ್ಲೂ ಆಹಾರ ದವಸ ತೃಪ್ತಿಕರವಾಗಿ ಸಿಕ್ಕುತ್ತಿಲ್ಲ. ಆದಕ್ಕೇ ನನ್ನ ನಿರ್ಣಯವನ್ನು ಬಹಳ ಎಚ್ಚರಿಕೆಯಿಂದ ತಂದಿದ್ದೇನೆ. ಕಂಟ್ರೋಲನ್ನು ಜಾಗ್ರತೆಯಾಗಿ ಒಂದೇ ಒಂದು ಏಟಿನಿಂದ ತೆಗೆಯುವುದಕ್ಕೆ ಕಷ್ಟವಾಗುತ್ತದೆ, ಕ್ರಮೇಣ ತೆಗೆಯಬೇಕು ಎಂಬ ಅಂಶ ಗಮನದಲ್ಲಿದೆ. ಆದ್ದರಿಂದ ಪಟ್ಟಣಗಳ ವಿಚಾರದಲ್ಲಿ ಎಚ್ಚರಿಕೆ ಕಾರ್ಯಕ್ರಮವನ್ನು ತೆಗೆದುಕೊಂಡು ನಂತರ ಒಂದು ವರ್ಷದಲ್ಲಿ ಸಂಪೂರ್ಣನಾಗಿ ಕಂಟ್ರೋಲನ್ನು ತೆಗೆಯುವುದು ನನ್ನ ದೃಷ್ಟಿಯಲ್ಲಿ ಅತ್ಯಾವಶ್ಯಕ. ಇದನ್ನು ನನ್ನ ಮಿತ್ರರನೇಕರು ಒತ್ತಿಒತ್ತಿ ಹೇಳಿದ್ದಾರೆ. ಹಳ್ಳಿಯವರಿಗಿಲ್ಲದೇಯಿದ್ದರೂ ಪಟ್ಟಣದವರಿಗೆ ಮಾತ್ರ ಆಹಾರ ಕೊಡಿ ಎಂದು ನಾನು ಹೇಳಿಲ್ಲ. ಒಂದು

(ಶ್ರೀ ಕಡಿದಾಳ್ ಮಂಜಪ್ಪನವರು).

ಅಂಶವನ್ನು ನಾವು ನಿರ್ಧಾರ ಮಾಡಿಕೊಳ್ಳಬೇಕು. ಈ ದಿವಸದಿಂದ ಕಂಟ್ರೋಲನ್ನು ತೆಗೆಯಬೇಕೆಂಬ ನೀತಿಯನ್ನನುಸರಿಸಬೇಕು. ಆ ನೀತಿಯನ್ನು ನಮ್ಮ ಗಮನದಲ್ಲಿಟ್ಟುಕೊಂಡು ಎಲ್ಲಾ ಕಾರ್ಯಕ್ರಮವನ್ನೂ ಆ ನೀತಿಗನುಸಾರವಾಗಿ ಮಾರ್ಪಡಿಸಬೇಕಾದ್ದು ಅತ್ಯಗತ್ಯ. ನಾನಾದರೂ ಕೂಡ ಈ ದಿವಸವೇ ಹತೋಟಿಯನ್ನು ತೆಗೆಯಬೇಕೆಂದು ಹೇಳಿಲ್ಲ. ಪಟ್ಟಣಗಳಲ್ಲಿ ತೊಂದರೆಯಿದೆ. ತಕ್ಷಣ ಹತೋಟಿ ತೆಗೆಯುವುದರಿಂದ ಸ್ವಲ್ಪ ಮಟ್ಟಿಗೆ ಅಲ್ಲಕಲ್ಲೋಲ ಪರಿಸ್ಥಿತಿಯುಂಟಾಗಬಹುದು. ಆದ್ದರಿಂದ ಪಟ್ಟಣಗಳಿಗಾಗಿ ಈಗ ಸಬ್ಸಿಡಿ ಕೊಡುತ್ತಿರುವುದನ್ನು ಉಪಯೋಗಿಸಿ ಹೊರಗಿನಿಂದ ಆಹಾರ ದವಸವನ್ನು ತರಿಸಬೇಕು. ಹೊರಗೆ ಮಾರ್ಕೆಟ್ಟಿನಲ್ಲಿ ಕೊಂಡುಕೊಂಡರೂ ಚಿಂತೆಯಿಲ್ಲ, ಕಂಟ್ರೋಲಿನಿಂದ ಕಿರುಕುಳ ಆಗುವುದನ್ನು ನಿಲ್ಲಿಸಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು:—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಈ ಸಭೆಯಲ್ಲಿ ಬಂದಿರುವುದು ಇದೇ ಮೊದಲನೆಯ ಸಾರಿ ಅಲ್ಲ. ಕಳೆದ ಅಧಿವೇಶನದಲ್ಲಿ ಈ ವಿಷಯವನ್ನು ಸಂಪೂರ್ಣವಾಗಿ ಈ ಸಭೆಯವರು ಪರಿಶೀಲಿಸಿದ್ದಾರೆ. ಈ ಪ್ರಶ್ನೆಯನ್ನು ಮೈಸೂರಿನ ಒಂದು ದೃಷ್ಟಿಯಿಂದ ಮಾತ್ರ ಪರಿಶೀಲಿಸಬಾರದೆಂದು ಮನವಿ ಮಾಡುತ್ತೇನೆ. ಇಡೀ ಭಾರತದ ದೃಷ್ಟಿಯಿಂದ ಪರಿಶೀಲಿಸಬೇಕು. ನಾವು ಮೈಸೂರಿನಲ್ಲಿ ಪದಾರ್ಥಗಳನ್ನು ತರಿಸಿಕೊಳ್ಳಬೇಕಾಗಿರುವ ನೀತಿಯು ಕೇಂದ್ರವನ್ನು ಅವಲಂಬಿಸಿದೆ. ಸ್ವಶಕ್ತಿಯಿಂದ ತರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತು. ಕೇಂದ್ರ ಸರ್ಕಾರದವರು ಇಡೀ ಭಾರತದಲ್ಲಿ ಅನುಸರಿಸುವ ನೀತಿಗೆ ನಾವು ಹೊಂದಿಕೊಂಡು ಹೋಗಬೇಕೆಂದು ಹೇಳುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಶ್ರೀ ಬಂದೀಗೌಡರು ಹೇಳಿದ ಹಾಗೆ ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಕೇಂದ್ರ ಸರ್ಕಾರಕ್ಕೆ ಮುಟ್ಟಿಸುವುದಕ್ಕೆ ಅಭ್ಯಂತರವಿಲ್ಲ ಎಂದು ಮಾತ್ರ ತಿಳಿಸುತ್ತೇನೆ. 'ಹತೋಟಿ ಆಜ್ಞೆಗಳನ್ನು ಮೈಸೂರು ಸರ್ಕಾರದವರು ಮಾತ್ರ ಒಪ್ಪಿಕೊಂಡಿದ್ದಾರೆಂದು ಭಾವಿಸಿದ್ದರೆ ಅದು ತಪ್ಪು ಭಾವನೆ. ವಿಧಿಯಿಲ್ಲದೆ ಹೊತ್ತಿರುವ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ನಿರ್ವಹಿಸುತ್ತಿದ್ದೇವೆ. ಭಾರತದಲ್ಲೆಲ್ಲಾ ಆಹಾರದ ಅಭಾವವಿದೆಯೆಂಬುದನ್ನು ಎಲ್ಲರೂ ಮನಗಾಣಬೇಕು. ಆಹಾರದ ಅಭಾವವೇ ಅಲ್ಲದೆ ಸೆಣಬಿನ ಅಭಾವ, ಹತ್ತಿ ಅಭಾವ ಕೂಡ ಇದೆ. ಈ ಆಹಾರದ ಅಭಾವವಿರುವಾಗ ಏನಾದರೂ ಒಂದು ರೀತಿ ಹತೋಟಿಯಾಜ್ಞೆಯಿಲ್ಲದಿದ್ದರೆ ಕಷ್ಟವಾಗುತ್ತದೆಯೆಂದು ಪ್ರಾಜ್ಞರು ಹೇಳುತ್ತಾರೆ. ಆ ಉದ್ದೇಶದಿಂದಲೇ ಇದು ಜಾರಿಯಲ್ಲಿದೆ. ಇದಕ್ಕೆ ಮನ್ನಣೆ ಕೊಡಬೇಕಾಗಿದೆ. ಶ್ರೀ ಟಿ. ಸುಬ್ರಹ್ಮಣ್ಯರವರು, ಶ್ರೀ ಭೀಮಪ್ಪನಾಯಕರು ಮತ್ತು ಶ್ರೀ ವೀರಣ್ಣಗೌಡರು ಹೇಳುವ ಅಭಿಪ್ರಾಯವು ಜಾಣತನದಿಂದ ಕೂಡಿಯೂ ಲೌಕಿಕವಾಗಿಯೂ ಇದೆ. ಏಕೆಂದರೆ ಒಂದೇಸಾರಿ ಹತೋಟಿ ಆಜ್ಞೆಯನ್ನು ತೆಗೆಯಬಾರದು, ಕ್ರಮಕ್ರಮವಾಗಿ ತೆಗೆಯಬೇಕು ಎಂದು ಹೇಳಿರುವುದು ಅವರ ಜಾಣ್ಮೆಯನ್ನು ತೋರಿಸುತ್ತದೆ. ಶ್ರೀ ಕಡಿದಾಳ್ ಮಂಜಪ್ಪನವರೂ ಕೂಡ ಕೊನೆಯಲ್ಲಿ ಇದನ್ನೇ ಹೇಳಿದರು. ಯಾರು ಬೆಳೆಯುವುದಿಲ್ಲವೋ ಅವರಿಗೆ ಸಾಧ್ಯವಾದಷ್ಟು ಕೊಡಬೇಕು ಎಂಬುದಕ್ಕೆ ಸಭೆಯಲ್ಲಿ ಬಹುಮತವಿದೆ. ಬರೀ ಉಪವಾಸ ಮಾಡುವುದಕ್ಕೆ ಅವಕಾಶ ಕೊಡದೆ ಸ್ವಲ್ಪವಾದರೂ ಕೊಡುವುದಕ್ಕೆ ಏರ್ಪಾಡು ಮಾಡಬೇಕು, ಎಷ್ಟು ಸಾಧ್ಯವೋ ಅಷ್ಟಾದರೂ ಕೊಡಬೇಕು ಎಂದು ನಾನಾ ಕಡೆಯಿಂದ ವಾದ ಬಂದಿದೆ. ಮೈಸೂರು ದೇಶದಲ್ಲಿ ಅನೇಕರು ಬೆಳೆಯುವುದಿಲ್ಲ ಎಂಬುದು ನಿರ್ವಿವಾದವಾದ ಸಂಗತಿ. ಪಟ್ಟಣಗಳಲ್ಲಿ ಇಂಥವರನೇಕರಿದ್ದಾರೆ. ಅವರಿಗೆ ಆಹಾರ ಒದಗಿಸುವ ಜವಾಬ್ದಾರಿ ಈ ಸರ್ಕಾರ ಅಥವಾ ಯಾವ ಸರ್ಕಾರವಾಗಲಿ ಹೊರಲೇಬೇಕು. ಯಾರು ಕೈಗಾರಿಕೆಗಳಲ್ಲಿದ್ದಾರೋ, ಯಾರು ಇತರ ವೃತ್ತಿಗಳಲ್ಲಿದ್ದಾರೋ ಮತ್ತು ಯಾರು ಬೆಳೆಯುವುದಿಲ್ಲವೋ ಅವರು ಒಂದಲ್ಲ ಒಂದು ವಿಧದಲ್ಲಿ ಅಲ್ಪಸ್ವಲ್ಪ ಸಹಾಯ ಮಾಡುತ್ತಾರೆ. ಅವರು ಬಟ್ಟೆ ತಯಾರಿಸುವುದು, ಕಟ್ಟಣದ ಕೆಲಸ, ಮರಗೆಲಸ ಮತ್ತು ಇತರ ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಅವರು ಬೆಳೆಯುವವರನ್ನು ಅವಲಂಬಿಸಿದ್ದಾರೆ. ಯಾವುದಾದರೂ ಒಂದು ದೇಶದಲ್ಲಿ ಜವಾಬ್ದಾರಿ ಬಂದಾಗ ಒಂದು ದೃಷ್ಟಿಯಿಂದ ತರ್ಕ ಮಾಡುವುದು ಬಹಳ ಕಷ್ಟ. ಎಲ್ಲಾ ದೃಷ್ಟಿಯಿಂದ ನೋಡಿದರೂ ಆಹಾರ ಸಮಸ್ಯೆಯು ಬಹಳ ಕಠಿಣ ಪ್ರಶ್ನೆ, ನಾವು ಈ ಕಠಿಣ ಪ್ರಶ್ನೆಯನ್ನು ಎದುರಿಸಬೇಕಾಗಿದೆ. ಅದರಲ್ಲೂ ಬೆಳೆದವರಿಂದ ಧಾನ್ಯ ತರಬೇಕಾದರೆ ಅವರ ಮನಸ್ಸು ಅಹಿತವಾಗುತ್ತದೆ. ಅಲ್ಪಸ್ವಲ್ಪ ಬೆಳೆದಿರುವುದನ್ನು ತೆಗೆದುಕೊಂಡು ಹೋಗಿ ಎಂದು ಯಾರೂ ಹೇಳುವುದಿಲ್ಲ. ಶ್ರೀ ವೀರಣ್ಣಗೌಡರು ಒಂದು ಸ್ಪಷ್ಟವಾದ ಉದಾಹರಣೆ ಹೇಳಿದರು. ಒಬ್ಬರು ಬತ್ತ ತೆಗೆದುಕೊಂಡು ಹೋಗಿದ್ದಾರೆಂದು ಹೇಳಿ ಕರೆದುಕೊಂಡು ಹೋಗಿದ್ದರು. ಅಲ್ಲಿಗೆ ಹೋದಮೇಲೆ ಹುಲ್ಲಿನ ಮೇಲೆ ಕುಳಿತುಕೊಳ್ಳುವುದಕ್ಕೆ ಹೋದರೆ ಹುಲ್ಲಿನ ಕೆಳಗೇ ಮೂಟೆಯಿತ್ತು ಎಂದು ಹೇಳಿದರು. ಹೀಗೆ ಮಾಡುವುದು ಮನುಷ್ಯನ ಸ್ವಭಾವ. ಆದ್ದರಿಂದ ಹೇಗೆ ಎಲ್ಲಿ ನಡೆಯುತ್ತಿದೆಯೆಂಬುದನ್ನು ಹೇಳುವುದು ಕಷ್ಟ. ಅದರಲ್ಲೂ ಕಂಟ್ರೋಲಿನಿಂದ ಅನೀತಿ ಬಂದಿದೆ, ಆದ್ದರಿಂದ ಕಂಟ್ರೋಲಿರುವುದು ಸರಿಯಿಲ್ಲ ಎಂದು ಹೇಳುವುದು ಕಷ್ಟ. ಕಂಟ್ರೋಲಿದ್ದರೂ, ಇಲ್ಲದಿದ್ದರೂ pinpricks ಇರುವುದು ಸರಿಹೋಗುತ್ತದೆಯೇ? ಸೀಲಿಂಗ್ ಪ್ರೈಸ್ ಹಾಕಿದರೆ ಸರಿಹೋಗುತ್ತದೆಂದು ಕೆಲವರು ಹೇಳಿದರು. ಆದರೆ ಬೆಲ್ಲಕ್ಕೆ ಆ ರೀತಿ ಬೆಲೆ ನಿಗದಿಮಾಡಿದಾಗ ಅದನ್ನು ಭೂಮಿಯೊಳಗೆ ಹೂತಿಟ್ಟಿದ್ದರಿಂದ ಹಿಡಿಯುವುದು ಕಷ್ಟವಾಯಿತು. ಅದರಿಂದ ಹಬ್ಬಕ್ಕೆ ಬೆಲ್ಲವಿಲ್ಲದೆ ತೊಂದರೆಯಾಯಿತು. ಎಷ್ಟೋ ಜನರ ಮನೆಯಲ್ಲಿ 20 ಮಣದವರೆಗೂ ಇದೆಯೆಂದು ಗೊತ್ತಾಯಿತು. ಪ್ರಾಯಶಃ ಕೋಲಾರ ಜಿಲ್ಲೆಯ ಶ್ರೀ ರಾಮಾಚಾರ್‌ರವರು ಈ ವಿಚಾರದಲ್ಲಿ ಒತ್ತಾಯ ಮಾಡಿದ್ದಾರೆ. ಆಮೇಲೆ ಅಷ್ಟದಿಗ್ಬಂಧನ ಮಾಡಿದರೆ ಎಲ್ಲಾ ಸರಿಹೋಗುತ್ತದೆಂದು ಹೇಳಿದರು, ಅದು ವಿವಾದಾಸ್ಪದವಾದದ್ದು. ಎಷ್ಟು ಬಂಧನಮಾಡಿದರೂ, ಕಂಟ್ರೋಲ್ ಮಾಡಿದರೂ ಒಂದಲ್ಲ ಒಂದು ಕಷ್ಟವಿದ್ದೇ ಇರುತ್ತದೆ. ಕಾವಲು ಹಾಕಬೇಕಾದರೆ ಯಾರನ್ನು ಹಾಕಬೇಕೆಂಬ ಪ್ರಶ್ನೆ ಬರುತ್ತದೆ.

ಆಮೇಲೆ ಲಾಭಗಳಿಸಬೇಕೆಂದು ಆಸೆಪಡುವವರನ್ನು ಹಿಡಿದು ಬಲಿಹಾಕಬೇಕೆಂದು ಹೇಳಿದರು. ಕೆಲವರನ್ನು ಪತ್ತೆಮಾಡಬಹುದು. ಇನ್ನು ಕೆಲವರು ಚಾಣಾಕ್ಷರು ಬಹಳ ಜನರಿದ್ದಾರೆ. ಕೆಲವರು ನಾಲ್ಕು ಮೂಟೆಗಳವರೆಗೆ ಧಾನ್ಯವನ್ನಿಟ್ಟಿರುತ್ತಾರೆ. ಕೂಲಿ ಮಾಡಿ ತಂದಿರುವುದಾಗಿ ಹೇಳುತ್ತಾರೆ. ಆದರೆ 8–10 ಊರಿನಲ್ಲಿ ತಂದಿರುವುದಾಗಿ ಹೇಳುವಾಗ ಒಂದೇ ತರಹ ಧಾನ್ಯವಿರುತ್ತದೆ. ಬೇರೆ ಬೇರೆ ತರಹ ಇರುವುದಿಲ್ಲ. ಹತೋಟಿ

ಅರ್ಜಿಗಳನ್ನು ಮೀರದಂತೆ ನೋಡಿಕೊಳ್ಳುವ ಸಣ್ಣ ಸಂಬಳದ ನೌಕರರ ಮೇಲೆ ಭಾರ ಹಾಕುವಾಗ ಎಲ್ಲರೂ ಒಂದೇ ತರಹ ಇರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ.

ಅಲ್ಲಿ ಪರಸ್ಪರ ಒಬ್ಬರಿಗೊಬ್ಬರಿಗೆ ವಿಚಾರ ವಿನಿಮಯವಾಗುತ್ತದೆ. ಭಾವನಾ ವಿನಿಮಯವಾಗುತ್ತದೆ. ಸ್ನೇಹ, ಸಹಾನುಭೂತಿ ಇರತಕ್ಕ ವಾತಾವರಣದಲ್ಲಿ ನಡೆದು ಹೋಗುವ ಕೆಲಸ ಕಾರ್ಯ. ಆದ್ದರಿಂದ ಬಹಳ ಕ್ಲಿಷ್ಟವಾದ ಸಮಸ್ಯೆ. ಇದನ್ನು ಬಹಳ ಜಾಗರೂಕತೆಯಿಂದ ಪರಿಹರಿಸಬೇಕೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಈಗಿರತಕ್ಕಂಥ ಅನುಭವದಿಂದ ಮುಂದೆ ಯಾವ ತರಹ ಹೆಜ್ಜೆ ಇಟ್ಟರೆ ತೊಂದರೆಗಳು, pin pricks ಕಡಿಮೆಯಾಗಬೇಕು, ಬೆಳೆಯತಕ್ಕವನು ಎದೆಗುಂದಬಾರದು, ಉತ್ಸಾಹ ಕುಂದಬಾರದು ಮತ್ತು ಇಂತಿಂಥವರು ಇಷ್ಟಿಷ್ಟು ಸರ್‌ಪ್ಲಸ್ ಕೊಡಬೇಕೆಂದು ತೀರ್ಮಾನವಾದ ಮೇಲೆ ಅದಕ್ಕಿಂತ ಹೆಚ್ಚಾಗಿ ಇದ್ದರೆ ಅತನಿಂದ ತೆಗೆದುಕೊಳ್ಳಕೂಡದು ಮುಂತಾಗಿ ಸಲಹೆಗಳನ್ನು ಕೊಟ್ಟಿದ್ದಾರೆ. ಅವು ಖಂಡಿತವಾಗಿಯೂ ಪರಿಶೀಲನಾರ್ಹವಾಗಿವೆ. ಅವುಗಳನ್ನು ಪರಿಶೀಲನೆಮಾಡಿ, ಸಾಧಕಬಾಧಕಗಳನ್ನು ಆಲೋಚಿಸಿ, ಈ ಸಲಹೆಗಳನ್ನು ಈ ಸಭೆಯವರು, ಬಹಳ ಅನುಭವಸ್ಥರಾದ ಸದಸ್ಯರು ಕೊಟ್ಟಿದ್ದಾರೆಂಬ ಅಂಶವನ್ನು ಕೇಂದ್ರ ಸರ್ಕಾರದವರಿಗೂ ತಿಳಿಸುತ್ತೇವೆ. ಅದರಿಂದ ದೇಶಕ್ಕೆ ಸ್ವಲ್ಪ ಪ್ರಯೋಜನವಾಗಬಹುದು, ಮತ್ತು ಅನಾವಶ್ಯಕವಾದ ತೊಂದರೆಗಳು ತಪ್ಪಬಹುದು. ದೇಶದ ಜನತೆಗೆ ಆಹಾರವನ್ನು ಒದಗಿಸುವುದಕ್ಕೆ ನಾವು ಪ್ರಯತ್ನ ಮಾಡದೇ ಇನ್ನೊಬ್ಬರು ಖಂಡಿತ ಪ್ರಯತ್ನ ಮಾಡುವುದಿಲ್ಲ. ಈ ದೇಶದಲ್ಲಿ ಸ್ವಾತಂತ್ರ್ಯ ಬಂದಿದೆ. ಆಹಾರವನ್ನೊದಗಿಸಿಕೊಳ್ಳುವುದು ದೇಶದಲ್ಲಿರತಕ್ಕವರೆಲ್ಲರ ಕರ್ತವ್ಯವಾಗಿದೆ. ಕೇಂದ್ರ ಸರ್ಕಾರದವರು ನಮಗೆ ಸಹಾಯ ಮಾಡಬೇಕಾದರೆ ಅವರು ಹಾಕತಕ್ಕ ನೀತಿಗನುಸಾರವಾಗಿ, ಅದನ್ನು ಹೊಂದಿಕೊಂಡು ಹೋದರೆ ಮಾತ್ರ ಸಹಾಯ ಮಾಡುತ್ತಾರೆಯೇ ಹೊರತು ಇಲ್ಲದೇ ಇದ್ದರೆ ಸಹಾಯ ಮಾಡುವುದಿಲ್ಲ. ಈಗ ನಮಗೆ ಕೇಂದ್ರದವರ ಸಹಾಯ ಬೇಕೇ ಬೇಕು. ಇಲ್ಲಿ ನಾವು ಹತೋಟಿಯನ್ನು ತೆಗೆದು ಹಾಕಿ ಒಂದು ಗೊಡ್ಡ ಅವ್ಯವಸ್ಥೆಯಾದರೆ ಕೇಂದ್ರ ಸರ್ಕಾರದವರು ಆ ಜವಾಬ್ದಾರಿಯನ್ನು ಹೊರುವುದಕ್ಕೆ ತಯಾರಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗೆ ಹೇಳಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೇಳಿದ್ದಾರೆ. ಇಡೀ ದೇಶಕ್ಕೆಲ್ಲಾ ಅನ್ವಯವಾಗುವ ಒಂದೇ ಒಂದು ಆಹಾರದ ನೀತಿ ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಸಂಯುಕ್ತ ಸಂಸ್ಥಾನ, ಆಸ್ಸಾಂ, ಮಧ್ಯಪ್ರಾಂತ, ಈಸ್ಟ್ ಪಂಜಾಬ್ ಈ ಪ್ರದೇಶಗಳೆಲ್ಲಾ ಡೀಕಂಟ್ರೋಲ್ ಮಾಡಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡುತ್ತಾ ಇದ್ದಾರೆ. ಅವೆಲ್ಲಾ ಸರ್‌ಪ್ಲಸ್ ಪ್ರದೇಶ. ಅವರು ಕೇಂದ್ರ ಸರ್ಕಾರದವರಿಗೆ ನಿಮ್ಮ ಸಹಾಯ ನಮಗೆ ಬೇಕಾಗಿಲ್ಲ ಎಂದು ಹೇಳಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯಪಡಿಸಿ free market ನಲ್ಲಿ ಮಾರಾಟಮಾಡಿಕೊಂಡರೆ, ಸಂಯುಕ್ತ ಪ್ರಾಂತದವರು ಕೊಡುತ್ತಿರುವ 5 ಸಾವಿರ ಟನ್ ಕೊಡದಿದ್ದರೆ ನಮ್ಮ ಗತಿ ಏನು ? ಮಧ್ಯಪ್ರಾಂತದಲ್ಲಿ ಬೇಕಾದಷ್ಟು ಅಕ್ಕಿ ಮುಂತಾದುವನ್ನು ಬೆಳೆಯುತ್ತಾರೆ, ಅವರು ಅಕ್ಕಿ ಹೆಚ್ಚಾಗಿ ಉಪಯೋಗಿಸುವುದಿಲ್ಲ. ಒಂದಕ್ಕೆ 10ರಷ್ಟು ಮಾರಿಕೊಳ್ಳತಕ್ಕ ಶಕ್ತಿ ಇದೆ. ಆದ್ದರಿಂದ unrestricted economy ಇದ್ದರೆ ದುಡ್ಡು ಮಾಡುವವರು ಮಾಡಬಹುದು, ಅನ್ನ ಇಲ್ಲದೇ ಸಾಯುವವರು ಸಾಯಬಹುದು. ಆ ಪರಿಸ್ಥಿತಿ ಉಂಟಾಗುವುದರಲ್ಲಿ ಏನೂ ಸಂಶಯವಿಲ್ಲ. ಒಂದು ಅಂಶ ತಮಗೆ ಹೇಳುತ್ತೇನೆ. ಒಂದು ವೇಳೆ ನಾವು ಇದನ್ನು ಬಿಟ್ಟುಬಿಟ್ಟು ಇಂತಿಂಥಾ ವಸ್ತುಗಳನ್ನು ಯಾವ ರೀತಿ ಬೇಕಾದರೂ ವ್ಯಾಪಾರ ಮಾಡಿ ಎಂದರೆ ಅದಕ್ಕೂ ಕೇಂದ್ರ ಸರ್ಕಾರದವರ ಅನುಮತಿ ಬೇಕು. ಮೆಣಸಿನಕಾಯಿ ತೆಗೆದುಕೊಂಡರೆ ಅದನ್ನು ಮುಟ್ಟಕೂಡದು ಎಂದು ಹೇಳುತ್ತಾರೆ. Oil-cakes ತೆಗೆದುಕೊಂಡರೆ ಅದೂ ಕೂಡದು ಎಂದು ಹೇಳುತ್ತಾರೆ. Oil-cakes ನ್ನು 8,000 ಟನ್ ಬತ್ತ ಬೆಳೆಯುತಕ್ಕವರಿಗೆ ಕೊಡಿ, ಬಾಕಿಯದು ಏನಾದರೂ ಮಾಡಿಕೊಳ್ಳಿ ಎಂದು ಹೇಳಿದೆವು. ಈ ರೀತಿ ಒಂದೊಂದು ಅಂಶವನ್ನು ಯೋಚನೆ ಮಾಡುವುದಕ್ಕೆ ಕಷ್ಟವಾಗಿದೆ. ವ್ಯವಸಾಯದ ಉಪಕರಣಗಳ ಮೇಲೆ ಹತೋಟಿ ತೆಗೆದುಹಾಕಿದರೆ, ಗಾಡಿ ಪಟ್ಟಿ, ಗುಳ ಇತ್ಯಾದಿ ಸಿಕ್ಕುವುದಿಲ್ಲ. ಪುನಃ ಅದಕ್ಕೆ ಕೇಂದ್ರ ಸರ್ಕಾರದವರು ಸಹಾಯಮಾಡಬೇಕು. ಆದ್ದರಿಂದ ಇರುವುದನ್ನು ಹಂಚಿಕೊಳ್ಳುವುದರಲ್ಲಿ ಜಾಣತನ ತೋರಿಸಬೇಕೇ ಹೊರತು ಮತ್ತೇನೂ ಅಲ್ಲ. ಹಂಚುವುದರಲ್ಲಿ ತಪ್ಪುಮಾಡಿದರೆ, ಅದು ನಮ್ಮ ಲೋಪದೋಷಗಳಿಂದ ಆಗುತ್ತಿದೆಯೇ ವಿನಃ ಹತೋಟಿಗಳಿಂದಾಗಿ ಆದುದಲ್ಲ. ಗ್ರೇಟ್‌ಬ್ರಿಟನ್ ತಗೆದುಕೊಳ್ಳಿ. ಯುದ್ಧವಾದ ಮೇಲೆ ಎಷ್ಟೋ ಕಷ್ಟಕ್ಕೆ ಸಿಕ್ಕಿರುತ್ತಾರೆ. ಆದರೂ ಎಷ್ಟೋ ಚೆನ್ನಾಗಿ ಆಡಳಿತ ನಡೆಸುತ್ತಾ ಇದ್ದಾರೆ. ಇದನ್ನು ಎಷ್ಟೋ ಸಾರಿ ನೋಡಿದ್ದಾರೆ. ಉದಾಹರಣೆಗೆ ತೆಗೆದುಕೊಳ್ಳಿ. ನಾವೇನೋ ಇಲ್ಲಿ ಕಾಲಕ್ರಮದಲ್ಲಿ ತೆಗೆದುಹಾಕಿ ಬಿಡೋಣ. ಈ ಹನ್ನೆಲೆ ಏಕೆ ಎಂದರೆ ಇದರ ಸಾಧಕಬಾಧಕಗಳನ್ನು ಯೋಚನೆ ಮಾಡಬೇಕು. ನಮ್ಮ ಮೇಲೆ ಬಿದ್ದಿರತಕ್ಕ ಜವಾಬ್ದಾರಿಯನ್ನು ಆಲೋಚನೆ ಮಾಡಬೇಕು. ಒಂದು ವೇಳೆ ತಕ್ಷಣ ಹತೋಟಿಯನ್ನು ತೆಗೆದರೆ ಕಷ್ಟವಾಗುತ್ತದೆ ಎಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಶ್ರೀಮಾನ್ ರಂಗರಾಮಯ್ಯನವರೇ ಹೇಳಿದ್ದಾರೆ. ಹಿಂದೆ ಬಟ್ಟೆ ಮೇಲೆ ಹತೋಟಿ ಇದ್ದಾಗ ಒಂದು ಸಭೆ ಮಾಡಿ, ಶ್ರೀ ರಂಗರಾಮಯ್ಯನವರೇ ಅಧ್ಯಕ್ಷರಾಗಿ ಹತೋಟಿ ತೆಗೆಯಿರಿ ಎಂದು ಹೇಳಿದರು. ಹತೋಟಿ ತೆಗೆದು ಒಂದು ತಿಂಗಳಾದ ಮೇಲೆ ಅವರೇ ಅಧ್ಯಕ್ಷರಾಗಿದ್ದು ಹತೋಟಿ ವಿಧಿಸಿ ಎಂದು ಹೇಳಿದರು!

Sri M. GOVINDA REDDY.—It was done under an inauspicious occasion.

Sri H. M. CHANNABASAPPA.—Inauspicious and half-hearted measure and yield to pressure groups.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆದ್ದರಿಂದ ಈಗಿನ ಪರಿಸ್ಥಿತಿಗೆ ತಕ್ಕಂತೆ, ಸಾಧಕಬಾಧಕಗಳನ್ನು ನಮ್ಮ ಅನುಭವದಿಂದ ನೋಡಿಕೊಂಡು, ಹೆಚ್ಚುತ್ತಿರುವ ಜನಸಂಖ್ಯೆಯನ್ನು ಗಮನಿಸಿ. ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ, ಟೌನ್‌ಗಳಲ್ಲಿ, ತಾಲ್ಲೂಕುಗಳಲ್ಲಿ ಸರ್ಕಾರಿ ನೌಕರರು, ಆಹಾರ ಧಾನ್ಯ ಬೆಳೆಯದೇ ಇರತಕ್ಕವರು ಅನೇಕ ಜನ ಇದ್ದಾರೆ, ಇವರೆಲ್ಲರಿಗೂ ಸಹಾಯ ನೀಡಬೇಕು. ಇವರಿಗೆ ಆಹಾರ ಧಾನ್ಯ ಒದಗದೇ ಇದ್ದ ಕಾಲದಲ್ಲಿ fair price depot ಗಳನ್ನು ಏರ್ಪಡಿಸಿ ಆಹಾರ ಧಾನ್ಯ ಹಂಚಲು ಪ್ರಯತ್ನ ಮಾಡಲೇಬೇಕಾಗಿದೆ.

ಶ್ರೀ ಎಂ. ಎಲ್. ನಂಜರಾಜ ಅರಸಿನವರು.—ಒದಗಿಸಿ, ಯಾರೂ ಬೇಡವೆಂದು ಹೇಳುವುದಿಲ್ಲ. ಈಗ ಆಹಾರದ ಇಲಾಖೆಗೆ ಖರ್ಚು ಮಾಡುವುದಕ್ಕಾಗಿ ಬದಲಾಗಿ open marketನಲ್ಲಿ ಏಕೆ ಕೊಡಬಾರದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವಾಗ ನಿಗದಿ ಮಾಡುತ್ತೇವೆಯೋ ಆಗ open marketಗೆ ದವಸ ಧಾನ್ಯ ಬರುವುದಿಲ್ಲ. ಬ್ಲಾಕ್ ಮಾರ್ಕೆಟ್ ಆಗುತ್ತದೆ. ಹತೋಟಿ ಇದ್ದರೆ ಬ್ಲಾಕ್ ಮಾರ್ಕೆಟ್‌ಗೆ ಅವಕಾಶವಿರುವುದಿಲ್ಲ. ದರ ವಿಪರೀತ ಹೆಚ್ಚುವುದಿಲ್ಲ. ಲಾಭಕೋರತನಕ್ಕೆ ಅಸ್ಪದವಿರುವುದಿಲ್ಲ. ಆ ರೀತಿ ಲಾಭಕೋರತನ ಮಾಡುವವರನ್ನು ಬಲಿ ಹಾಕುತ್ತೇವೆ. ಈ ಕೆಲಸ ಬಹಳ ಕಠಿಣವಾದದ್ದು. ಹತೋಟಿ ತೆಗೆಯುವುದು ಈಗಿನ ಪರಿಸ್ಥಿತಿಯಲ್ಲಿ ಅಷ್ಟು ಸೂಕ್ತವಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಹೆಚ್ಚು ಆಹಾರ ಬೆಳೆ ಬೆಳೆಯುವುದಕ್ಕೆ ಖರ್ಚು ಮಾಡುವುದನ್ನೆಲ್ಲಾ ನಮಗೆ ಕೊಟ್ಟರೆ we undertake to do that work.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಬಹಳ ಸಾಹಸದ ಕೆಲಸ. ಇಂಡಿಯಾ ಸರ್ಕಾರದಲ್ಲಿ ಬಹಳ ಜನ ಪ್ರವೀಣರಿದ್ದಾರೆ. ಇದು ಇಂಡಿಯಾ ದೇಶದ ಪ್ರಶ್ನೆಯಾದ್ದರಿಂದ ನಾವು ಒಂದೇ ಒಂದು ನೀತಿಯನ್ನು ಅನುಸರಿಸಿಕೊಂಡು ಹೋಗಬೇಕು. ಮಾನ್ಯ ಸದಸ್ಯರ ಸಲಹೆಗಳನ್ನು ಒತ್ತಾಯ ಪೂರ್ವಕವಾಗಿ ಕೇಂದ್ರ ಸರ್ಕಾರದವರ ಮುಂದೆ ಇಡುತ್ತೇನೆ ಎಂಬ ಭರವಸೆ ಕೊಡುತ್ತೇನೆ. ಎರಡನೆಯದಾಗಿ ನಮ್ಮ ದೇಶದಲ್ಲಿ ಪ್ರೊಕ್ಯೂರ್‌ಮೆಂಟ್ ಮಾಡುವುದನ್ನು ನಾವು ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂಬ ಪ್ರಶ್ನೆಯನ್ನು ಇಟ್ಟಿದ್ದಾರೆ.

Sri H. SIDDAVEERAPPA.—Will the Hon'ble Minister please answer one question? You were pleased to say that you were bound to feed them. Can you give me a statutory provision where an obligation is cast on the State to feed these people?

The Hon'ble Sri T. MARIAPPA.—Sir, this question is a surprise to me. My friend is as much responsible as I am because he is in the Treasury Benches. If we do not feed the people what happens, it is better to imagine.

ಶ್ರೀಮಾನ್ ಚನ್ನಬಸಪ್ಪನವರು ಹೇಳುವುದರಲ್ಲಿ ವಿರೋಧಾಭಾಸ ಇದೆ. ಒಂದು ಕಡೆ ಹಳ್ಳಿಗಳಲ್ಲಿ ಎಷ್ಟು ಜನ ಬೆಳೆಯುದವರು ಇದ್ದಾರೋ ಅಷ್ಟಕ್ಕೆ ತಕ್ಕಂತೆ ಡಿಪೋಗಳನ್ನಿಡಿ ಎಂದು ಹೇಳಿದರು. ಈಗ ಈ ರೀತಿ ಹೇಳುತ್ತಾ ಇದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ಪರಿಶೀಲನೆ ಮಾಡುತ್ತಾ ಹೋದಹಾಗೆಲ್ಲಾ ಇದರ ಕಷ್ಟ ನಿಷ್ಠೂರ ಎಷ್ಟಿವೆ ಎಂಬುದು ಗೊತ್ತಾಗುತ್ತದೆ. ಶ್ರೀಮಾನ್ ಭೀಮಪ್ಪನಾಯಕರು ವೀರಣ್ಣಗೌಡರು ಮತ್ತು ಸುಬ್ರಮಣ್ಯರವರು ಹೇಳಿದ ಹಾಗೆ ಕ್ರಮೇಣ ಹತೋಟಿಯನ್ನು ತೆಗೆದು ಇದರಿಂದುಂಟಾಗ ತಕ್ಕ ತೊಂದರೆಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ತೊಂದರೆಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವಾಗ ಹಿಂದೆ ಏನು ಅನುಭವ ಆಯಿತೋ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ನಮಗೆ ಪ್ರೊಕ್ಯೂರ್ ಮಾಡುವುದಕ್ಕೆ ಎಷ್ಟು ಸಾಧ್ಯ, ಜನರಿಗೆ ತೊಂದರೆಯಾಗದ ರೀತಿಯಲ್ಲಿ ಒಂದು ನಿಖರವಾದ ಪ್ರಮಾಣದಲ್ಲಿ ಎಷ್ಟು ವಸೂಲು ಮಾಡಿಕೊಳ್ಳಬಹುದು ಎಂಬುದನ್ನೆಲ್ಲಾ ಯೋಚಿಸಿ, ಹೊರಗಡೆಯಿಂದ ತರಿಸಿಕೊಳ್ಳುವುದನ್ನು ತರಿಸಿಕೊಂಡು ಹಂಚಿಕೆ ಮಾಡತಕ್ಕದ್ದು ಒಂದು ವಿಧಾನ. ಈ ವಿಧಾನ ನಾನು ಮೊದಲೇ ಹೇಳಿದ ಹಾಗೆ ಪರಿಶೀಲನಾರ್ಹವಾಗಿದೆ. ಹಾಗಲ್ಲದೆ ಕೆಲವು ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಹೊತ್ತೇ ಹತೋಟಿಯನ್ನು ತೆಗೆಯುವುದೆಂದರೆ ಕಷ್ಟ. ಇದನ್ನು ಶ್ರೀಮಾನ್ ಕಡಿದಾಳ್ ಮಂಜಪ್ಪನವರೂ ಒಪ್ಪಲಿಲ್ಲ. ಶ್ರೀಮಾನ್ ಚನ್ನಬೈರೇಗೌಡರು ಹೇಳಿದ ಕೆಲವು ವಿಷಯಗಳಿಗೆ ನಾನು ಉತ್ತರ ಕೊಡಲು ಇಷ್ಟವಿಲ್ಲ. ಅವರನ್ನು ಅವರೇ ಪರೀಕ್ಷೆ ಮಾಡಿಕೊಂಡರೆ ಉತ್ತರ ಬರುತ್ತದೆ. ಹತೋಟಿಯನ್ನು ತೆಗೆದು ಹಾಕಿ ಹೋರ್ಡಿಂಗ್ ಅಂಡ್ ಪ್ರಾಫಿಟಿಯರಿಂಗ್ ಕಾನೂನು ಮುಂತಾದ ಇತರ ಕಾನೂನುಗಳನ್ನು ಬಿಗಿ ಮಾಡಿ ಅಷ್ಟದಿಗ್ಬಂಧನಗಳನ್ನು ಹಾಕಿ ಎಂದರೆ, ಅದರಿಂದ ಇನ್ನೂ ಹೆಚ್ಚು pin-pricks ಆಗುತ್ತದೆ. ಆ ಮೇಲೆ ಯಾರಾದರೂ ಸಿಕ್ಕಿಕೊಂಡರೆ ಅವರು ಇದೊಂದೂ ಬೇಕಾಗಿಲ್ಲವೆಂಬ ಅಭಿಪ್ರಾಯಕ್ಕೆ ಬರಬಹುದು. ಆಗ ಸನ್ನಿವೇಶವೇ ಬೇರೆಯಾಗುತ್ತದೆ. ಇಂಡಿಯಾ ದೇಶದಲ್ಲಿ ಈ ವರ್ಷ ಎಲ್ಲರೂ ಕಷ್ಟದಲ್ಲಿದ್ದೇವೆ. ಅಸ್ಸಾಂ, ಬೀಹಾರ್ ಮುಂತಾದ ಪ್ರದೇಶಗಳಲ್ಲಿ ಭೂಕಂಪವಾದುದರಿಂದ ತೊಂದರೆ ಇನ್ನೂ ಹೆಚ್ಚಾಗಿದೆ.

ಇನ್ನೊಂದು ವಿಷಯ ಹೇಳಿದರು. ನಮ್ಮಲ್ಲಿ ಬೇಕಾದಷ್ಟು ದವಸ ಸಿಕ್ಕುತ್ತದೆ, ಸಾಕಷ್ಟು ಪ್ರೊಕ್ಯೂರ್ ಮಾಡುತ್ತಿಲ್ಲವೆಂದು ಹೇಳಿದರು. ಅವರಲ್ಲೇ ಉಳಿದು ಹೋಗುತ್ತದೆಂದು ಹೇಳಿದರು. ಸಂಪೂರ್ಣವಾಗಿ ಬಿಟ್ಟುಬಿಡುತ್ತೀರಿ, ದಾಕ್ಷಿಣ್ಯಕ್ಕೆ ವಸೂಲು ಮಾಡುವುದೇ ಇಲ್ಲ ಎಂದು ಹೇಳುವವರೂ ಇದ್ದಾರೆ. ಪ್ರೊಕ್ಯೂರ್‌ಮೆಂಟ್ ಕಡಿಮೆ ಮಾಡಿದರೂ ಜನರಿಗೆ ಅಷ್ಟು ತೊಂದರೆಯಾಗುವುದಿಲ್ಲ. ಆದರೂ ಹೀಗೆ ಎಲ್ಲೋ ಒಬ್ಬಿಬ್ಬರು ಮಾಡಿರಬಹುದು! ಎಲ್ಲರೂ ಹೀಗೆ ಮಾಡಿದ್ದಾರೆಂದು ಹೇಳಿದರೆ ಒಪ್ಪುವುದಕ್ಕಾಗುವುದಿಲ್ಲ. ಹೇಳದ್ದೆಕೇಳದೆ ಸರ್ಕಾರಿ ಡಿಪೋಗಳಿಗೆ ತಂದುಹಾಕುವವರೂ ಲಕ್ಷಾಂತರ ಜನರಿದ್ದಾರೆ. ಅದರಲ್ಲಿಯೂ ಬತ್ತ ಬೆಳೆಯುವವರು ಎರಡು ಮೂರು ದಿನಗಳಲ್ಲಿ ತಂದು ಡಿಪೋಗಳಿಗೆ ಕೊಡುತ್ತಾರೆಂಬುದಕ್ಕೆ ಎಷ್ಟೋ ನಿದರ್ಶನಗಳಿವೆ.

ಅಂಥವರನ್ನು ವಂದಿಸಬೇಕು. ಕಷ್ಟಕಾಲದಲ್ಲಿ ದೇಶಕ್ಕೆ ಸಹಾಯಮಾಡುತ್ತಾರೆಂದು ಅಂಥವರನ್ನು ಸ್ಮರಿಸಬೇಕು. ಹತೋಟಿಯಿಲ್ಲದಿದ್ದರೆ ಹಾಗೇ ತಾವಾಗಿಯೇ ಯಾರೂ ತಂದುಕೊಡಲು ಸಾಧ್ಯವಿಲ್ಲ. ಆಹಾರಧಾನ್ಯಗಳು 15 ದಿನ ಇಲ್ಲದಿದ್ದರೂ ಜನತೆಗೆ ಕಷ್ಟವಾಗುತ್ತದೆ. ಈಗ ನಮ್ಮಲ್ಲಿ ಪಟ್ಟಣ ಹಳ್ಳಿಗಳ ಘರ್ಷಣೆ ಬೇಕಾಗಿಲ್ಲ, ನಾವು ಪರಸ್ಪರ ಹೊಂದಿಕೊಂಡು ಹೋಗಬೇಕು. ದೇಶದ ಯಾವ ಭಾಗದಲ್ಲಿ ತೊಂದರೆಯಾದರೂ ಎಲ್ಲರಿಗೂ ಕಷ್ಟವಾಗುತ್ತದೆ . . .

ಶ್ರೀ ಎಸ್. ರಂಗರಾಮಯ್ಯನವರು.—ಇನ್ನು ಪ್ರೊಕ್ಯೂರ್‌ಮೆಂಟ್ ಆಗಬೇಕಾದುದು ಎಷ್ಟು ಬಾಕಿ ಇದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದುವರೆಗಾಗಲೇ $14\frac{1}{2}$ ಲಕ್ಷ ಪಲ್ಲ ಬತ್ತವನ್ನು ವಸೂಲುಮಾಡಿದ್ದೇವೆ, ಇನ್ನೂ 4 ಲಕ್ಷ ಪಲ್ಲದವರೆಗೆ ವಸೂಲುಮಾಡಬೇಕಾಗಿದೆ. ರಾಗಿ $1\frac{1}{2}$ ಲಕ್ಷ ಪಲ್ಲ ವಸೂಲಾಗಿದೆ, ಇನ್ನೂ $3\frac{1}{2}$ ಲಕ್ಷ ಪಲ್ಲ ವಸೂಲಾಗಬೇಕಾಗಿದೆ. ರಾಗಿ ವಸೂಲಾಗುವುದು ಸ್ವಲ್ಪ ನಿಧಾನ, ಇದನ್ನು 20 ಸೇರು, 50 ಸೇರು, ಒಂದು ಪಲ್ಲ ಹೀಗೆ ಬಹಳ ಜನರಿಂದ ವಸೂಲುಮಾಡಬೇಕು. ಬತ್ತದ ವಸೂಲಿ, ಪ್ರಾಯಶಃ ಶ್ರೀಮಾನ್ ವೀರಣ್ಣಗೌಡರು ಹೇಳಿದಹಾಗೆ, ಇನ್ನು

ಒಂದು ತಿಂಗಳಲ್ಲಿ ಮುಗಿಯಬಹುದು. ಒಟ್ಟಿನಲ್ಲಿ ಈಗ ಸಭೆಯವರು ಏನೇನು ಸೂಚನೆಗಳನ್ನು ಕೊಟ್ಟಿದ್ದಾರೋ ಅವೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಕೆಲಸಮಾಡುತ್ತೇವೆ. ಇದಕ್ಕೆ ವ್ಯತಿರಿಕ್ತವಾಗಿ ಹೋಗಲಾರೆಂಬ ಭರವಸೆಯನ್ನಿಟ್ಟುಕೊಳ್ಳಬಹುದು. ಶ್ರೀಮಾನ್ ಕಡಿದಾಳ್ ಮಂಜಪ್ಪನವರಿಗೆ ಈ ವಿಚಾರದಲ್ಲಿ ಏನೂ ಅನುಮಾನವಿಲ್ಲವೆಂದು ಕಾಣುತ್ತದೆ. ಈ ನಿರ್ಣಯದಲ್ಲಿ ನಾಲ್ಕೈದು ಪಟ್ಟಣಗಳನ್ನು ಮಾತ್ರ ಸೇರಿಸಿದ್ದಾರೆ, ಬಾಕಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಈಗ ಜಿಲ್ಲಾ ಹೆಡ್‌ಕ್ವಾರ್ಟರುಗಳು ಮುನಿಸಿಪಾಲಿಟಿಗಳ ಪ್ರದೇಶಗಳಿಗೆ ರೇಷನ್ ಕೊಡುತ್ತಿದ್ದಾರೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. Vulnerable population ಇವರ ಕ್ಷೇಮವನ್ನು ನೋಡಿಕೊಳ್ಳಬೇಕು. ಯಾರ್ಯಾರು ದವಸವನ್ನು ಕೊಡಬೇಕೋ ಅವರಿಂದ ಸಂಪೂರ್ಣವಾಗಿ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ. ಬಾಕಿಯವರಿಗ ಕಿರುಕುಳವಿಲ್ಲದಹಾಗೆಮಾಡುವುದು ಪರಿಶೀಲನಾರ್ಹವಾದ ವಿಚಾರ. ಇದೆಲ್ಲವನ್ನೂ ಮಾಡಿಸುತ್ತೇವೆಂದು ಭರವಸೆಕೊಡುತ್ತೇನೆ. ಈ ನಿರ್ಣಯವನ್ನು ಸೂಚಕರು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಎಂ. ಎನ್. ಜೋಯಿಸರು.—ಈ ಅಹಾರ ಇಲಾಖೆಯನ್ನೂ, ಇನ್‌ಕಮ್‌ಟ್ಯಾಕ್ಸ್ ಇಲಾಖೆಯನ್ನು ಮಾಡಿದಂತೆ, ಕೇಂದ್ರ ಸರ್ಕಾರಕ್ಕೇ ಕೊಡುವುದಕ್ಕಾಗುವುದಿಲ್ಲವೆ? (ನಗು!)

Sri Kadidal MANJAPPA.—Relying on the assurance of the Hon'ble Minister, I beg leave to withdraw the resolution.

(**Sri B. CHENNABYRE GOWDA.**—I oppose permission being granted to withdraw the resolution.

Mr. SPEAKER.—I will put the resolution to the House. The question is:—

"This Assembly is of the opinion that Food Control and Rationing be abolished in all the areas of the State, excepting the Cities of Mysore, Bangalore, Davangere and K. G. F."

The Motion was negatived.

Sri B. HUTCHE GOWDA.—I demand a poll.

Mr. SPEAKER.—The question is:—

"This Assembly is of the opinion that Food Control and Rationing be abolished in all the areas of the State, excepting the Cities of Mysore, Bangalore, Davangere and K. G. F."

The Motion was negatived, 44 being against and 4 being for.

RESOLUTION NO. 7.

Appointment of a Committee of the Legislature to investigate into future policy in regard to subsidies and loans.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಸ್ವಾಮಿ, ನಾನು ಮಂಡಿಸತಕ್ಕ ನಿರ್ಣಯ ಈ ರೀತಿ ಇದೆ:—

"ಸರ್ಕಾರದವರಿಂದ ಕೊಡಲ್ಪಟ್ಟಿರುವ ನಾನಾ ಸಹಾಯದ್ರವ್ಯಗಳೂ (ಸಬ್‌ಸಿಡಿಗಳೂ), ಸಾಲಗಳೂ ಮತ್ತು ಗ್ರ್ಯಾಂಟುಗಳೂ ಸರಿಯಾಗಿ ಉಪಯೋಗಿಸಲ್ಪಟ್ಟಿವೆಯೆ ಅಥವಾ ಇಲ್ಲವೆ ಎಂಬುದನ್ನೂ ಮತ್ತು ಆ ಸಾಲಗಳಿಗೆ ಸರಿಯಾದ ಆಧಾರವನ್ನು ತೆಗೆದುಕೊಂಡು ಅವುಗಳನ್ನು ಕೊಡಲಾಗಿದೆಯೆ ಎಂಬುದನ್ನು ಪರಿಶೀಲಿಸುವುದಕ್ಕಾಗಿಯೂ ಮತ್ತು ಅಂಥ ಸಹಾಯ ದ್ರವ್ಯಗಳ ('ಸಬ್‌ಸಿಡಿ' ಗಳ) ಮತ್ತು ಸಾಲಗಳ ವಿಷಯದಲ್ಲಿ ಸರ್ಕಾರದವರು ಮುಂದೆ ಅನುಸರಿಸಬೇಕಾದ ಕಾರ್ಯನೀತಿಯ ವಿಷಯದಲ್ಲಿ ಅವರಿಗೆ ಸಲಹೆ ಹೇಳುವುದಕ್ಕಾಗಿಯೂ. ಈ ಶಾಸನ ವಿಧಾಯಕ ಸಭೆಯ ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಕಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಮೈಸೂರು ಸರ್ಕಾರದವರು ಬಹುಕಾಲದಿಂದಲೂ ತಕಾವಿ ಸಾಲಗಳನ್ನು ಕೊಡುತ್ತಿದ್ದಾರೆ. ಈಚೆಗೆ ಯುದ್ಧ ಪ್ರಾರಂಭವಾಗಿ ಆಹಾರಾಭಾವ ತಲೆದೋರಿದ ಕಾಲದಿಂದೀಚೆಗೆ, ಮಳೆಬೆಳೆಗಳು ಸರಿಯಾಗಿ ಆಗದೇ ಇದ್ದ ಸಮಯದಲ್ಲಿ ಹೆಚ್ಚು ಬಾವಿಗಳನ್ನು ತೋಡುವುದಕ್ಕೂ ನೀರಾವರಿ ಪಂಪುಗಳನ್ನು ಹಾಕುವುದಕ್ಕೂ ವಿಶೇಷ ಸಾಲಗಳನ್ನು ಕೊಡುತ್ತಾ ಬಂದರು. ಅದರಲ್ಲಿಯೂ ಪ್ರಜಾ ಸರ್ಕಾರ ಸ್ಥಾಪನೆಯಾದಮೇಲೆ ಈ ವಿಧವಾದ ಸಾಲವನ್ನು ಕೈಗಾರಿಕೆಗಳಿಗೂ ಇತರ ಬಾಬುಗಳಿಗೂ ಕೊಡುತ್ತಿದ್ದಾರೆ. ಇದು ದಿನೇ ದಿನೇ ಬೆಳೆದುಕೊಂಡು ಬಂದಿದೆ. ಸರ್ಕಾರದಿಂದ ಲಕ್ಷಾಂತರ ರೂಪಾಯಿ ಈ ಸಾಲದ ರೂಪದಿಂದ ಹೋಗುತ್ತಿದೆ. ಹೀಗೆ ಸಾಲ ಪಡೆಯುವವರಲ್ಲಿ ಕೈಗಾರಿಕೆಗಳವರಿದ್ದಾರೆ, ವ್ಯವಸಾಯಗಾರರಿದ್ದಾರೆ, ಹಳ್ಳಿಯವರಿದ್ದಾರೆ, ಪಟ್ಟಣಗಳವರಿದ್ದಾರೆ, ರೈತರಿದ್ದಾರೆ, ಶಾಸನ ಸಭಾ ಸದಸ್ಯರೂ ಇದ್ದಾರೆ. ಯಾರೇ ಇರಲಿ, ಕೊಡತಕ್ಕ ಸಾಲಗಳು ಸರಿಯಾಗಿ ವಿನಿಯೋಗವಾಗುತ್ತವೆಯೇ ಇಲ್ಲವೇ ಎಂಬ ವಿಚಾರದಲ್ಲಿ ದೇಶದಲ್ಲಿ ಈಗ ನಾನಾ ಬಗೆಯ ಕೂಗು ಹುಟ್ಟಿದೆ. ಬಾವಿಗಳನ್ನು ತೋಡಿಸುತ್ತೇವೆಂದು ಸಾಲ ತೆಗೆದುಕೊಳ್ಳುತ್ತಾರೆ. ಅಲ್ಲಿ ನೋಡಿದರೆ ಬಾವಿಗಳೇ ಇರುವುದಿಲ್ಲ, ಇನ್ನು ಕೆಲವರು ಹಳೆಯ ಬಾವಿಗಳನ್ನು ಹೊಸ ಬಾವಿಗಳೆಂದು ತೋರಿಸಿದ್ದಾರೆ; ಇನ್ನು ಕೆಲವು ಸಂದರ್ಭಗಳಲ್ಲಿ ಸಾಲ ತೆಗೆದುಕೊಂಡು ಹೋಗಿ ಮದುವೆ ಮುಂಜಿಮಾಡಿಕೊಂಡಿದ್ದಾರೆ. ಯಾವ ಉದ್ದೇಶದಿಂದ ಸಾಲ ತೆಗೆದುಕೊಂಡುಹೋಗುತ್ತಾರೋ ಅದನ್ನು ನೆರವೇರಿಸದಿದ್ದಮೇಲೆ ಅದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಮದುವೆಮಾಡಿಕೊಂಡರೆ ಮನೆ ಉದ್ಧಾರವಾಯಿತೆಂದು ಶ್ರೀಮಾನ್ ಪುಟ್ಟಸ್ವಾಮಿಯವರು ಒಪ್ಪಿಕೊಂಡರೆ ನಾನು ಒಪ್ಪುವುದಿಲ್ಲ. ಮನೆ ಉದ್ಧಾರವಾಗಬೇಕು, ನಿಜ, ಆದರೆ ಈ ರೀತಿ ಉದ್ಧಾರವಾಗ

(ಶ್ರೀ ಕೆ. ಸಂಪಂಗಿರಾಮಯ್ಯನವರು.)
ಬಾರದು. ಒಂದು ಉದಾಹರಣೆಯನ್ನು ಹೇಳುತ್ತೇನೆ: ನಮ್ಮ ಬಂಧುವರ್ಗದವರೊಬ್ಬರು ನನ್ನಲ್ಲಿ ಬಂದು ತಮ್ಮ ಮನೆಯಲ್ಲಿ ಒಂದು ಮುಂಜಿ ಆಗಬೇಕೆಂದು ಸಹಾಯ ಕೇಳಿದರು. ಅದಕ್ಕೆ ನಾನೇನು ಸಹಾಯ ಮಾಡಲೂ ನನ್ನಿಂದ ಆಗದು ಎಂದು ಹೇಳಿದೆ. ಅದಕ್ಕವರು 'ಆ ಸಹಾಯವಲ್ಲ ನಾನು ಕೇಳುವುದು, ನಾನು ಅಮುಲ್ದಾರರಿಗೊಂದು ಅರ್ಜಿ ಹಾಕಿದ್ದೇನೆ ಸಾಲಕ್ಕೆ, ಅವರಿಗೆ ಹೇಳಿ ಕೊಡಿಸಬೇಕು, ಕಾನೂನಿನಲ್ಲಿ ಮದುವೆ ಮುಂಜಿಗೆ ಸಾಲ ಕೊಡಲು ಅವಕಾಶವಿಲ್ಲವಾದ್ದರಿಂದ ಬಾವಿ ತೋಡಿಸುವುದಕ್ಕೆಂದು ಅರ್ಜಿ ಹಾಕಿದ್ದೇನೆ, ಅದನ್ನು ಕೊಡುವಂತೆಮಾಡಿ' ಎಂದು ಹೇಳಿದರು. ನನಗೆ ಬಹಳ ಅಸಮಾಧಾನವಾಗಿ . .

ಶ್ರೀ ಕೆ. ಪುಟ್ಟಸ್ವಾಮಿಯವರು.—ಬಂಧುಗಳೇ ಹಾಗೆಮಾಡಿದರೆ ?

ಶ್ರೀ ಕೆ. ಸಂಪಂಗಿರಾಮಯ್ಯನವರು.—ಹೌದು, ಆದರೂ ಧೈರ್ಯವಾಗಿ ಹೇಳುತ್ತಿದ್ದೇನೆ. ಹೀಗೆ ಅನೇಕ ಬಾಬುಗಳಿಗೆ ಹಣವನ್ನು ಸಾಲವಾಗಿ ಕೊಡುತ್ತಿದ್ದಾರೆ. ವ್ಯಾಪಾರೋದ್ಯಮಗಳಿಗೆ ಕೂಡ ಕೊಟ್ಟಿರುವ ನಿದರ್ಶನಗಳಿವೆ. ಹಿಂದೊಂದುಸಾರಿ ತಾವೇ ಉತ್ತರಕೊಟ್ಟಿರುವಂತೆ ಒಬ್ಬಾನೊಬ್ಬ ಪಟ್ಟಣದ ಪ್ರೆಸಿಡೆಂಟರಿಗೆ Soluble coffee ಯನ್ನು ಕೂಡ ಮಾಡುವುದಕ್ಕೆ ಸಾಲ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಬೆಳ್ಳಿ ವಿಗ್ರಹ ತಯಾರುಮಾಡುವುದಕ್ಕೆ ಕೊಟ್ಟಿದ್ದಾರೆ. ಈ ರೀತಿ ಜನ ಸರ್ಕಾರವು ಅತಿ ಉತ್ಸಾಹದಿಂದ ಅತಿಯಾಗಿ ಪ್ರೋತ್ಸಾಹಕೊಡಲು ಹೊರಟು ಅನೇಕ ಸಾಲಗಳೇ ಕೈಬಿಟ್ಟು ಹೋಗಿವೆ ; ಎಷ್ಟೋಕಡೆ ಹಣ ದುರುಪಯೋಗವಾಗಿದೆ. ಒಂದುಕಡೆ ಡೈರಿಫಾರಮ್ ಮಾಡುತ್ತೇವೆಂದು ಸಾಲ ಪಡೆದುಕೊಂಡಿದ್ದಾರೆ. ಆದರೆ ಚೆಕ್‌ಮಾಡಿದ್ದರಲ್ಲಿ ಹುಲ್ಲೂ ಇಲ್ಲ, ಹಸುಗಳೂ ಇಲ್ಲ ! ಅಲ್ಲದೆ ಎಷ್ಟೋವೇಳೆ ಸರಿಯಾಗಿ ಆಧಾರಗಳನ್ನಿಟ್ಟುಕೊಂಡು ಕೊಟ್ಟಿರುವುದರಲ್ಲೂ ಹಣ ಸರಿಯಾಗಿ ಉಪಯೋಗವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಏನಿದ್ದರೂ ಲ್ಯಾಂಡ್ ಇಂಪ್ರೂಮೆಂಟ್ ಲೋನ್‌ಗಳ ವಿಷಯದಲ್ಲಿ ಮಾತ್ರ ಹಣ ಸರಿಯಾದ ಆಧಾರದಮೇಲೆ ಕೊಟ್ಟಿದೆಯೆನ್ನಬಹುದು. ಅದರಮಟ್ಟಿಗೆ ವಸೂಲಿಯ ಜವಾಬ್ದಾರಿ ಅಮುಲ್ದಾರರಮೇಲೆ ಬಿದ್ದಿರುವುದರಿಂದ ಅಷ್ಟು ಲೋಪದೋಷಗಳಿಗೆ ಆಸ್ಪದವಿರುವುದಿಲ್ಲ. ಈ ಸಬ್ಸಿಡಿ ಲೋನ್‌ಗಳ ವಿಚಾರದಲ್ಲೇನೂ ಅಂಥ ಕಡ್ಡಾಯವೇನೂ ಇಲ್ಲದಿರುವುದರಿಂದ ಎಲ್ಲಾ ಕೈತೊಳಕ ಬಾಯಿ ಬಣ್ಣ ಎಂಬಂತೆ ನೋಡಿಕೊಡುತ್ತಿದ್ದಾರೆ. ಕೊನೆಗೆ ಗಂಟೇ ಮುಳುಗಿಹೋಗಿರುತ್ತದೆ. ಅಲ್ಲದೆ ಈ ಸಬ್ಸಿಡಿ ಸಾಲಗಳನ್ನು ಬಡವರಿಗೇ ಕೊಡಬೇಕೆಂದು ಹೇಳಿಲ್ಲ. ನಮ್ಮೂರಲ್ಲಿ ಲಕ್ಷಾಂತರ ರೂಪಾಯಿಗಳ ಲೇವಾದೇವಿಮಾಡುವ ಶ್ರೀಮಂತರೊಬ್ಬರೂ ಕೂಡ ಸರ್ಕಾರದಿಂದ ಈ ಸಾಲ ತೆಗೆದುಕೊಂಡಿದ್ದಾರೆ. ಇತರರಿಗೆ ಸಾಲ ಕೊಡುವವರಾಗಿರುವ ನೀವು ಸರ್ಕಾರದಿಂದ ಸಾಲ ಏಕೆ ತೆಗೆದುಕೊಂಡಿರಿ ಎಂದು ಕೇಳಿದ್ದಕ್ಕೆ ಅವರು 'ನಿಮ್ಮ ಕಾನೂನಿನಲ್ಲಿ ಬಡವರು ಮಾತ್ರ ತೆಗೆದುಕೊಳ್ಳಬೇಕೆಂದು ಹೇಳಿಲ್ಲ. ಬಡ್ಡಿಯಿಲ್ಲದೆ ಹಣ ಸಿಕ್ಕುವುದರಿಂದ ನಾನೂ ಏಕೆ ತೆಗೆದುಕೊಳ್ಳಕೂಡದೆಂದು' ಹೇಳಿದರು. ಈ ಪ್ರಕಾರ ಜನ ಈ ಸಾಲ ತೆಗೆದುಕೊಳ್ಳುವುದೂ ತಮ್ಮ ಒಂದು ಹಕ್ಕುದಾರಿ ಎಂದು ಭಾವಿಸಿರುವಂತೆ ಕಾಣುತ್ತೆ.

ಒಬ್ಬ ಸದಸ್ಯರು.—ಇದೇನು ಸಾಲವೋ ಅಥವಾ ಸಬ್ಸಿಡಿಯೋ !

ಶ್ರೀ ಕೆ. ಸಂಪಂಗಿರಾಮಯ್ಯನವರು.—ಅದು ಸಾಲವಲ್ಲ, ಸಬ್ಸಿಡಿ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎರಡೂ ಇದೆ ; 500 ರೂಪಾಯಿ ಸಾಲ, ಇನ್ನು 500 ರೂಪಾಯಿ ಸಬ್ಸಿಡಿ

ಶ್ರೀ ಕೆ. ಸಂಪಂಗಿರಾಮಯ್ಯನವರು.—ಹೀಗೆ ನೀವು ಕೊಟ್ಟಿರತಕ್ಕ ಸಾಲಗಳು ಒಂದಕ್ಕೊಂದಕ್ಕೆ ಸೇರಿಹೋಗಿದೆ, ಪ್ರತ್ಯೇಕ ಮಾಡುವುದು ಕಷ್ಟ. ಮಾನ್ಯ ಸದಸ್ಯರೂ ಕೆಲವರು ಈ ಸಾಲ ತೆಗೆದುಕೊಂಡು ಅವರಿಗೆ ನೋಟೀಸ್ ಕೂಡ ಹೋಗಿದೆಯೆಂದು ಗೊತ್ತಾಗಿದೆ. ಇವೆಲ್ಲಾ ನೋಡಿದರೆ ನಿಜವಾಗಿ ಸರ್ಕಾರದವರು ಯಾವ ಸಹಾಯಕ್ಕಾಗಿ ಸಬ್ಸಿಡಿಯನ್ನು ಏರ್ಪಾಡಿಸಲಾಯಿತೋ ಅವರಿಗೆ ಸರಿಯಾಗಿ ಸಲ್ಲುತ್ತಿಲ್ಲ. ಯಾರು ಪ್ರಭಾವಶಾಲಿಗಳಾಗಿದ್ದು ಅಧಿಕಾರಿಗಳ ಮೇಲೆ ಒತ್ತಾಯ ತರಬಲ್ಲರೋ ಅಂಥವರಿಗೆ ಬಹುಮಟ್ಟಿಗೆ ಹೋಗಿರುವ ಸಂದರ್ಭವಿದೆ. ಆದ್ದರಿಂದ ಇವುಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ ಯಾವ್ಯಾವ ರೀತಿ ಕೊಟ್ಟಿದೆ, ಅವುಗಳನ್ನು ಯಾವ ರೀತಿ ವಸೂಲುಮಾಡಬೇಕು, ಇನ್ನು ಮುಂದೆ ಯಾವ ರೀತಿನೀತಿಗಳನ್ನು ಅನುಸರಿಸಬೇಕೆಂಬ ವಿಚಾರದಲ್ಲಿ ನಿರ್ದಿಷ್ಟ ತೀರ್ಮಾನಗಳನ್ನು ಮಾಡಿಕೊಳ್ಳಬೇಕಾಗಿದೆ. ಈ ರೀತಿಯಾಗಿ ಅತ್ಯುತ್ಸಾಹದಿಂದ ಎಲ್ಲರಿಗೂ ಈ ಸಬ್ಸಿಡಿಗಳನ್ನು ಕೊಡುವುದಕ್ಕೆ ಹೋಗಬಾರದೆಂದು ನಾನು ಖಚಿತವಾಗಿ ಅಭಿಪ್ರಾಯ ಪಡುತ್ತೇನೆ, ಏಕೆಂದರೆ, ನೀವು ಸಾಲ ಕೊಡುವುದರಲ್ಲಿಯೂ ಒಂದು ತತ್ವವನ್ನು ಅನುಸರಿಸುವಂತೆ ಕಾಣುತ್ತೆ. ಯಾವನಾದರೂ ಹಣವಂತನು ಸಾಲ ಕೇಳಿದರೆ ಅವನಿಗೆ ಸುಲಭವಾಗಿ ಸಿಕ್ಕುತ್ತಿದೆ. ಒಬ್ಬಾನೊಬ್ಬ ಧನಿಕ ಹೀಗೆ ಸಾಲ ತೆಗೆದುಕೊಂಡಿದ್ದುವನನ್ನು ಕೇಳಿದ್ದಕ್ಕೆ ಅವನು ಹೇಳಿದ : ನನ್ನಂಥವನಿಗೆ ದುಡ್ಡುಕೊಟ್ಟರೆ ಎಲ್ಲೂ ಹೋಗುವುದಿಲ್ಲ. ಅದೇ ಬಡವನಿಗೆ ಕೊಟ್ಟರೆ ಹಣ ವಾಪಸಾಗುವುದೇ ಕಷ್ಟ ಎಂದು. ಈ ಪ್ರಕಾರ ಆಗಿ ಸಾಮಾನ್ಯವಾಗಿ ಈ ಸಾಲಗಳೆಲ್ಲಾ ಹಣವಂತರಿಗೇ ಹೋಗುವ ಸಂದರ್ಭಗಳಿವೆ. ಆದ್ದರಿಂದ ಸರ್ಕಾರದವರು ಹೀಗೆ ಸಾಲಕೊಡುವ ಪದ್ಧತಿಯನ್ನು ತಪ್ಪಿಸಿ, ಅವರೇ ಒಂದು ಏಜೆನ್ಸಿ ಇಟ್ಟುಕೊಂಡು ಬಾವಿಗಳನ್ನು ತೆಗೆಸಿಕೊಟ್ಟು ಸಹಾಯಮಾಡಿದರೆ ಅನುಕೂಲವೋ ಏನೋ ಎಂದು ಕಾಣುತ್ತದೆ.

ಒಬ್ಬ ಸದಸ್ಯರು.—ಕಷ್ಟ ಅದು !

ಶ್ರೀ ಕೆ. ಸಂಪಂಗಿರಾಮಯ್ಯನವರು.—ಕಷ್ಟವಾದರೂ ಮಾಡಬೇಕು. ಏಕೆಂದರೆ ದೇಶದಲ್ಲಿ ಇದರ ವಿಚಾರದಲ್ಲಿ ಕೂಗು ಬಹಳವಾಗಿದೆ. ಕೆಲವರೇನೋ ಉತ್ಪ್ರೇಕ್ಷೆಯೆಂದು ಹೇಳಬಹುದು. ಅದೂ ನಿಜವಿರಬಹುದು. ಅಂತೂ ಈ ವಿಚಾರದಲ್ಲಿ ಜನರಿಗಿರುವ ಸಂಶಯವನ್ನು ಹೋಗಲಾಡಿಸುವುದಕ್ಕಾದರೂ ಒಂದು ಸಮಿತಿಯನ್ನು ಏರ್ಪಾಡುಮಾಡಿ ಅವರು ಅಂಕಿ ಅಂಶಗಳನ್ನು ಶೇಖರಿಸಿ ಸತ್ಯಾಂಶವನ್ನು ಹೊರಪಡಿಸಬೇಕು. ಈ ಸಾಲಗಳು ಮುಂಗಡಗಳು ಬಹಳಮಟ್ಟಿಗೆ ದುರುಪಯೋಗವಾಗಿವೆ, ಅನೇಕವನ್ನು ಆಧಾರವಿಲ್ಲದೆ ಕೊಟ್ಟಿದೆಯೆಂದು ಎಲ್ಲೆಲ್ಲೂ ಎದ್ದಿರುವ ಕೆಟ್ಟ ಅಭಿಪ್ರಾಯವನ್ನು ದೂರಮಾಡುವುದಕ್ಕಾದರೂ ಇದು ಸಾಧಕವಾಗಿರುತ್ತದೆ. ಸರ್ಕಾರದವರ ದಕ್ಷತೆಯನ್ನು ತೋರಿಸಿಕೊಳ್ಳುವುದಕ್ಕಾಗಿ ಇಂಥ ಒಂದು ಸಮಿತಿಯನ್ನು ಏರ್ಪಾಡು ಮಾಡಬೇಕೆಂದು ಹೇಳಿ ಈ ಠರಾವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—Resolution moved:—

"ಸರ್ಕಾರದವರಿಂದ ಕೊಡಲ್ಪಟ್ಟಿರುವ ನಾನಾ ಸಹಾಯ ದ್ರವ್ಯಗಳೂ ("ಸಬ್ಸಿಡಿ"ಗಳೂ), ಸಾಲಗಳೂ ಮತ್ತು ಗ್ರಾಂಟುಗಳೂ ಸರಿಯಾಗಿ ಉಪಯೋಗಿಸಲ್ಪಟ್ಟಿವೆಯೆ ಅಥವಾ ಇಲ್ಲವೆ ಎಂಬುದನ್ನೂ ಮತ್ತು ಆ ಸಾಲಗಳಿಗೆ ಸರಿಯಾದ ಆಧಾರವನ್ನು ತೆಗೆದುಕೊಂಡು ಅವುಗಳನ್ನು ಕೊಡಲಾಗಿದೆಯೆ ಎಂಬುದನ್ನೂ ಪರಿಶೀಲಿಸುವುದಕ್ಕಾಗಿಯೂ, ಮತ್ತು ಅಂಥ ಸಹಾಯ ದ್ರವ್ಯಗಳ ("ಸಬ್ಸಿಡಿ"ಗಳ) ಮತ್ತು ಸಾಲಗಳ ವಿಷಯದಲ್ಲಿ ಸರ್ಕಾರದವರು ಮುಂದೆ ಅನುಸರಿಸಬೇಕಾದ ಕಾರ್ಯನೀತಿಯ ವಿಷಯದಲ್ಲಿ ಅವರಿಗೆ ಸಲಹೆ ಹೇಳುವುದಕ್ಕಾಗಿಯೂ ಈ ಶಾಸನವಿಧಾಯಕ ಸಭೆಯ ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಕಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

*ರಾಜಮಂತ್ರ ಪ್ರವೀಣ ಶ್ರೀ ಎಚ್. ಬಿ. ಗುಂಡಪ್ಪ ಗೌಡರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ವಿಚಾರದಲ್ಲಿ ಕೆಲವು ಮಾತಗಳನ್ನಾಡಬೇಕೆಂದು ನನ್ನ ಆಸೆ. ಸಾಲಕೊಡುವುದು ರೈತರಿಗೇ ಆಗಲಿ, ಇತರರಿಗೇ ಆಗಲಿ, ಯಾರಿಗೂ ಕೊಡಬೇಡಿದಂದು ನಾನು ಹೇಳುವುದಿಲ್ಲ. ಏಕೆಂದರೆ ಸರ್ಕಾರವವರಿರುವುದೇ ಸಹಾಯ ಮಾಡುವುದಕ್ಕೆ. ಆದರೆ ನಿಜವಾಗಿಯೂ deserving ಆಗಿರುವಂಥವರಿಗೆ ನ್ಯಾಯವಾದ ಕೆಲಸಕ್ಕೆ ಸಹಾಯ ಮಾಡಬೇಕೆಂಬುದರಲ್ಲೇನೂ ದನ್ನಾಭಿಪ್ರಾಯವಿಲ್ಲ. ಈ ನಿರ್ಣಯದಲ್ಲಿ ಕೇಳಿರುವುದಾದರೂ ಒಂದು ಸಮಿತಿಯನ್ನು ನೇಮಕಮಾಡಿ, ಎವರು ನೀವು ಇದುವರೆಗೂ ಸಾಲಕೊಟ್ಟಿರುವುದು ದಷ್ಟರ ಮಟ್ಟಿಗೆ ಸಾರ್ಥಕವಾಗಿದೆ, ಎಷ್ಟು ಭಾಗ ದುರುಪಯೋಗವಾಗಿದೆ ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ ವಿಮರ್ಶೆಮಾಡುವುದಕ್ಕೂ ಮತ್ತು ಮುಂದೆ ಸಾಲಕೊಡುವುದನ್ನೂ ಯಾವ ರೀತಿಯ ಪದ್ಧತಿ, ನಿಯಮಗಳಿಗನುಗುಣವಾಗಿ ಮಾಡಬೇಕೆಂಬುದನ್ನು ನಿರ್ಧರಿಸುವುದಕ್ಕೂ ಅವಕಾಶಮಾಡಿಕೊಡಿ ಎಂದು. ನನ್ನ ಅಭಿಪ್ರಾಯದಲ್ಲೂ ಇದು ಸಾಧುವಾಗಿದೆ ಮತ್ತು ಇದರಿಂದ ಹೆಚ್ಚಿನ ಅನುಕೂಲವಾಗುತ್ತದೆಂದು ತಿಳಿದುಕೊಂಡಿದ್ದೇನೆ. ಪ್ರಾಯಶಃ \ ಸರ್ಕಾರದವರಿಗಿರುವ ಭೀತಿ ಇಂಥ ಒಂದು ಸಮಿತಿಯನ್ನು ಸ್ಥಾಪಿಸಲಿಕ್ಕೆ ಹೇಗೆ ಒಪ್ಪಿಗೆ ಕೊಡೋಣ ಎಂದಿರಬಹುದು. ನನ್ನಂಥವನಾಗಿದ್ದರೆ ಇಂಥಾದ್ದನ್ನು ಸ್ವಾಗತಿಸುತ್ತಿದ್ದೆ. ಈ ರೀತಿ ಒಂದು ಸಮಿತಿಯನ್ನು ಮಾಡಿ ಎಲ್ಲೆಲ್ಲಿ ಹಣ ದುರುಪಯೋಗವಾಗಿದೆಯೆಂಬುದನ್ನು ಕಂಡುಹಿಡಿಯುವುದು ನ್ಯಾಯವಾಗಿದೆ. ಏಕೆಂದರೆ, ಈಗ ನೀವು ಸುಮಾರು ಒಂದು ಕೋಟಿ ರೂಪಾಯಿಗಳಿಗೆ ಮೀರಿ ಸಾಲಕೊಟ್ಟಿದ್ದೀರೆಂದು ತಿಳಿದುಕೊಂಡಿದ್ದೇನೆ. ಎಲ್ಲಾ ಸಾಲಗಳನ್ನೂ ಸರಿಯಾಗಿ deserving ಆಗಿರುವವರಿಗೇ ಕೊಟ್ಟಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ನನಗೆ ತಿಳಿದು ಬಂದಿರುವಂತೆ ದಾವಣಗೆರೆಯಲ್ಲಿ ಕೆಲವು ಮಿಲ್ಲುಗಳಿಗೂ ಈ ಸಂದರ್ಭದಲ್ಲಿ ಸಾಲಕೊಟ್ಟಿದೆಯೆಂದು ಗೊತ್ತಾಗಿದೆ. ಅದರಲ್ಲೂ ದಾವಣಗೆರೆಯಲ್ಲಿ ಈ ಮಿಲ್ಲಿಗೆ ಸಾಲ ಕೊಡುವ ವಿಷಯದಲ್ಲಿ ಕೆಲವು ವಿರೋಧಗಳು ಬಂದದ್ದರ ಮೇಲೆ ಸಂಬಂಧಪಟ್ಟ ಮಿಲ್ಲಿನವರೇ ಕ್ಯಾಬಿನೆಟ್ ಮುಂದೆ ಬಂದು argue ಮಾಡಿದರೆಂದು ಗೊತ್ತಾಗಿದೆ. ನಾವೆಂದೂ ಯಾರನ್ನೂ ಹೀಗೆ ಕ್ಯಾಬಿನೆಟ್ ಮುಂದೆ ಕರೆಸಿ ಅವಕಾಶ ಕೊಡುವುದನ್ನು ಕಂಡಿರಲಿಲ್ಲ.

ಒಬ್ಬ ಸದಸ್ಯರು.—ಲಾಯರಾಗಿರುವವರು ಹೋಗುವುದಿಲ್ಲವೇ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಮಂತ್ರಿಗಳು ವಿನಾ ಮತ್ತೆ ಯಾರೂ ಕ್ಯಾಬಿನೆಟ್ ಮೀಟಿಂಗುಗಳಲ್ಲಿರುವುದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಕ್ಯಾಬಿನೆಟ್ಟಿನಲ್ಲೇ arguments ಆಯಿತೆಂದು ಹೇಳಿದರೇ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಕ್ಯಾಬಿನೆಟ್ಟಿನಲ್ಲೇ ಆಯಿತೋ ಅಥವಾ Council of Ministers ಎದುರಿನಲ್ಲಿ ನಡೆಯಿತೋ ಹೇಳಲಾರೆ, ಎರಡೂ ಒಂದೇ. ನೀವದನ್ನು ವ್ಯತ್ಯಾಸ ಮಾಡಿರಬಹುದು. ಮಂತ್ರಿಗಳೆಲ್ಲರೂ ಒಟ್ಟಿಗೆ ಸೇರಿ ಚರ್ಚೆನಡೆಸಿದ ಮೇಲೆ ಅದರಲ್ಲಿ ವ್ಯತ್ಯಾಸವೇನೂ ಇಲ್ಲ. ಅಂತೂ ನನಗೆ ಬಂದಿರುವ ವರ್ತಮಾನ ಖಚಿತವಾಗಿದೆ. ದಾವಣಗೆರೆಯಲ್ಲಿ ಒಂದು ಮಿಲ್ಲಿನ ವಿಚಾರದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಸಾಲವಾಗಿ ಕೊಡಬೇಕೆಂಬ ಸಮಯದಲ್ಲಿ ಬೇರೆ ಕೆಲವು ಮಿಲ್ಲುಗಳವರು objection ತಂದದ್ದಕ್ಕೆ ಆ ಮಿಲ್ಲಿನ ಮ್ಯಾನೇಜರು ಕ್ಯಾಬಿನೆಟ್ ಮುಂದೆ ಬಂದು ತಮ್ಮ ಹೇಳಿಕೆಯನ್ನು ಕೊಟ್ಟರೆಂದು ತಿಳಿದುಕೊಂಡಿದ್ದೇನೆ. ಅವರ ಹೆಸರನ್ನು ನಾನು ಹೇಳಬೇಕಾದ್ದಿಲ್ಲ. ನಾನೇಕೆ ಹೇಳುತ್ತಿದ್ದೇನೆಂದರೆ ಸರ್ಕಾರದವರ ರೀತಿನೀತಿಗಳನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಇದೆಲ್ಲಾ ಅನುಕೂಲವಾಗುತ್ತದೆ ಎಂದು. ಆದರೆ ನಾನು ಎಲ್ಲಿಂದ ಬಂತು ಎಂಬುದನ್ನು ಹೇಳುವುದಿಲ್ಲ. ನನಗೆ ಬಂದಿರತಕ್ಕ information ಪ್ರಕಾರ ನಾನು ಹೇಳುತ್ತಿದ್ದೇನೆ. I am prepared to correct myself. I am not so dogmatic.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ಸರಿಯಾದ ಉತ್ತರ ಬಂದೇ ಬರುತ್ತದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಪ್ರಭಾವಶಾಲಿಗಳಾಗಿರತಕ್ಕಂಥವರು ಸಾಲ ಕೇಳುವುದಕ್ಕೆ ಬರುತ್ತಾರೆಂಬುದನ್ನು ಸಿದ್ಧಾಂತ ಮಾಡುವುದಕ್ಕಾಗಿ ಇದನ್ನೆಲ್ಲಾ ಹೇಳುತ್ತಿದ್ದೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪ್ರಭಾವಶಾಲಿಗಳಾಗಿರತಕ್ಕವರಿಗೇ ದಪ್ಪನಾಗಿ ಕಾಣಿಸತಕ್ಕವರಿಗೇ ಸಾಲ ಕೊಡುತ್ತೀರೆಂದು ಹೇಳುವುದು ಸರಿಯಲ್ಲ. ಹಾಗೆ ಯಾರಿಗೂ ಯಾವ ಕೈಗಾರಿಕೆಯವರಿಗೂ ಸಾಲ ಕೊಟ್ಟಿಲ್ಲ. I do not understand the implication of saying "ಪ್ರಭಾವ ಶಾಲಿಗಳು."

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಯಾರಾದರೂ ಸಾಲಕ್ಕೆ ಅರ್ಜಿ ಹಾಕಿದರೆ, ಆಗ ಮಧ್ಯಸ್ಥಗಾರರು ಬಂದೇ ಬರುತ್ತಾರೆ.

The Hon'ble Sri H. C. DASAPPA.—I am sorry if the Hon'ble Member who had held a responsible position in the Government should say sc. What is the meaning of saying "ಪ್ರಭಾವ ಶಾಲಿಗಳು"? If a person wants a loan he can approach the Government for the loan.

Sri H. B. GUNDAPPA GOWDA.—Shall I say "somebody else" in connection with the Davanagere Mills?

The Hon'ble H. C. DASAPPA.—There was no foreign element intervening in the matter.

Sri S. RANGA RAO (Chitaldrug District-General).—Only the Legal Adviser.

Sri H. B. GUNDAPPA GOWDA.—How can a Legal Adviser approach the Government?

The Hon'ble Sri H. C. DASAPPA.—He has a perfect right to come and explain the position, terms and everything else. In fact when the negotiations were conducted and agreement was reached with the Kolar Gold Field Mining Companies, their Legal Adviser was present.

Sri D. H. CHANDRASEKHARAIYA (Chitaldrug District-General).—The Legal Adviser came along with the mill owners?

The Hon'ble Sri H. C. DASAPPA.—Of course.

Sri H. B. GUNDAPPA GOWDA.—I doubt whether it is a correct procedure.

The Hon'ble Sri H. C. DASAPPA.—I consider that it is a very correct procedure.

Sri H. B. GUNDAPPA GOWDA.—I differ from that. He should not have been allowed to appear before the Government. There is the Advocate-General to help the Government in these matters. It must be on that level and not on the level of a Legal Adviser. They cannot circumvent and leave out the Advocate-General.

Sri D. H. CHANDRASEKHARAIYA.—There is nothing wrong, I suppose.

Sri H. B. GUNDAPPA GOWDA.—That may be because the Hon'ble Member was a member of Government then. This instance I quoted because there will be influences so far as loans are concerned.

The Hon'ble Sri H. C. DASAPPA.—When I assure the Hon'ble Member that there was no influence and that no foreign element was there, I think he ought to take the word.

Sri H. B. GUNDAPPA GOWDA.—I know something of the working of the human mind.

The Hon'ble Sri H. C. DASAPPA.—That may be the way of the Hon'ble Member's mind working but certainly not of the Government.

Sri H. B. GUNDAPPA GOWDA.—They must be a wonderful set of human beings.

The Hon'ble Sri H. C. DASAPPA.—I know that the loans to the two mills,- the Ganesha and the Shankara Textiles stand on the brains of a good number of Hon'ble Members. But let me assure them that it was done in the best interests and it was never subject to influence of any kind.

Sri S. RANGA RAO.—ಲಾಯರಾಗಿರತಕ್ಕವರು ಅವರು ಲೀಗಲ್ ಕ್ಯಪ್ಯಾಸಿಟಿಯಲ್ಲಿ ಬಂದರೇನು ತಪ್ಪು?

Sri H. B. GUNDAPPA GOWDA.—But I did not question the intentions of Government.

The Hon'ble Sri H. C. DASAPPA.—What else is when the Hon'ble Member is saying that there is extraneous influence and things of that kind?

Sri H. B. GUNDAPPA GOWDA.—If the Hon'ble Minister wants some more information I am prepared to discuss with him in private.

The Hon'ble Sri H. C. DASAPPA.—Please discuss it here. I do not want any discussion in private.

Sri H. B. GUNDAPPA GOWDA.—I do not want to go into this issue now. I have got some other things to say on the resolution.

Sri H. K. VEERANNA GOWDA (Mandya District—General).—The Hon'ble Member should not unnecessarily accuse and escape from disclosing it.

Sri H. B. GUNDAPPA GOWDA.—It is not a question of accusing Government and escaping. Are the Government prepared to give all the details here?

The Hon'ble Sri H. C. DASAPPA.—So far as the Davanagere loan is concerned I will give every bit and the results have justified the granting of the loan.

Sri H. B. GUNDAPPA GOWDA.—The results might have justified it. But what I am driving at is that there is scope for influence. Whether Government have been moved by that influence or not, that is a different matter.

The Hon'ble Sri H. C. DASAPPA.—I am sorry. It is far better to have a

proper explanation before the whole Cabinet composed of eight or nine Hon'ble Ministers than the influence outside it.

Sri H. B. GUNDAPPA GOWDA.—As I said there is scope for influence. Whether the Government were moved by that influence or not, I have not said a single word about it.

Sri A. BHEEMAPPA NAIK (Chitaldrug District-General).—Is the Hon'ble Minister arguing the case ?

The Hon'ble Sri H. C. DASAPPA.—There is no question of arguing the case. When the negotiations were conducted and agreement was reached with the Kolar Gold Field Mining Companies their Legal Adviser was present.

Sri H. B. GUNDAPPA GOWDA.—I am hearing a new thing. So far as I know no alien element used to be present at the Cabinet meeting.

The Hon'ble Sri H. C. DASAPPA.—It is not an alien element.

Sri H. B. GUNDAPPA GOWDA.—There the matter ends.

Sri K. PUTTASWAMY (Mandya District—General).—No alien element can be a party to a decision.

Sri H. B. GUNDAPPA GOWDA.—Whether it is a decision or a deliberation I have got definite views in the matter. I cannot modify them.

ಇದರ ವಿಚಾರದಲ್ಲಿ ಅನೇಕ ಅರ್ಜಿಗಳು ಬರುತ್ತವೆ. ವ್ಯವಸಾಯಕ್ಕೆ, ಬಾವಿಗಳಿಗೆ, ತಕಾವಿ, \ಇತ್ಯಾದಿ ಬಾಬುಗಳಿಗೆಲ್ಲಾ ಸಾಲ ಕೊಡಬೇಕೆಂದು ಅರ್ಜಿಗಳು ಅನೇಕ ಬರುತ್ತವೆ. ಆದರೆ ಹಾಗೆ ಕೊಡಲಾದ ಸಾಲದ ಹಣ ಸರಿಯಾಗಿ ವಿನಿಯೋಗವಾಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ನಿಗಾ ನೋಡಿಕೊಳ್ಳತಕ್ಕ ಬಗ್ಗೆ ಒಂದು ಸಮಿತಿ ಇರಬೇಕಾದ್ದು ಅಗತ್ಯ. ಸಾಲ ಹಾಕತಕ್ಕವರು ನಾನಾ ದೃಷ್ಟಿಯಿಂದ ಅರ್ಜಿ ಹಾಕುತ್ತಾರೆ. ಯಾರೋ ಒಬ್ಬ ಮನುಷ್ಯ ಒಂದು ಡ್ರೈಫಾರಂ ಇಡಲು ಸಾಲಕ್ಕೆ ಅರ್ಜಿ ಹಾಕುತ್ತಾನೆ; ಆಗ ಸಾಲ ಮಂಜೂರು ಮಾಡುವ ಮೊದಲು ಆತನಿಗೆ ಆ ಉದ್ಯೋಗದಲ್ಲಿ ಅನುಭವವಿದೆಯೇ, ಇಲ್ಲವೇ, ಆತನು ಆ ಲೈನನಲ್ಲಿದ್ದವನೇ, ಆತನಿಗೆ ಸಾಲ ಕೊಟ್ಟರೆ, ಅವನು ಎಷ್ಟರ ಮಟ್ಟಿಗೆ ಆ ಉದ್ಯೋಗದಲ್ಲಿ ಮುಂದುವರಿದು, ಸಾಲ ತೀರಿಸಲು ಶಕ್ತಿಯುಳ್ಳವನಾಗಿರುತ್ತಾನೆ; ಹಾಗೇನಾದರೂ ಆತನು ನಷ್ಟಪಟ್ಟುಕೊಂಡರೆ ಕೊಟ್ಟದ್ದ ಸಾಲವನ್ನು ವಸೂಲು ಮಾಡಿಕೊಳ್ಳಲು ಬೇರೆ ಅಡವು ಆಸ್ತಿಗಳೇನಾದರೂ ಇರುತ್ತವೆಯೇ ಎಂಬ ಇತ್ಯಾದಿ ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡಬೇಕು. ನನಗೆ ತಿಳಿದಹಾಗೆ ಮೊನ್ನೆ ಮೊನ್ನೆ ಯಾರೋ ಒಬ್ಬರು ನಾನು ಒಂದು ಡ್ರೈಫಾರಂ ಇಡಬೇಕಾಗಿದೆ, ನನಗೆ ಇಷ್ಟು ಸಾಲ ಬೇಕಾಗಿರುತ್ತೆಂದು ತಾಲ್ಲೂಕು ಅಮಲ್ದಾರರಿಗೆ ಒಂದು ಅರ್ಜಿ ಹಾಕಿದ್ದರಂತೆ. ಅಮಲ್ದಾರರು ಸದ್ರಿ ಅರ್ಜಿ ವಿಚಾರಣೆಗಾಗಿ ಸ್ಥಳಕ್ಕೆ ಹೋಗಿದ್ದಾಗ ಆತನು ಊರಿನಲ್ಲಿದ್ದ ದನಗಳನ್ನೆಲ್ಲಾ, ತನ್ನವೇ ಎಂದು ಹೇಳಿ ಸುಳ್ಳು ಮಹಜರ್ ಮಾಡಿಸಿ ಹಣ ಪಡೆದುಕೊಂಡರೆಂದು ತಿಳಿದು ಬಂದಿದೆ. ಆ ಮನುಷ್ಯನಲ್ಲಿ ಒಂದೂ ಜಾನುವಾರು ಇಲ್ಲ. ಇಂಥಾ ಪರಿಸ್ಥಿತಿ ಆದರೆ ಏನು ಮಾಡುತ್ತೀರಿ ? ಎಷ್ಟೋ ಜನ ಬಾವಿಗೆ ದುಡ್ಡು ಬೇಕೆಂದು ಸಾಲ ತೆಗೆದುಕೊಂಡು ಹೋಗಿ, ಹಳೇ ಬಾವಿಗಳನ್ನು ತೋರಿಸಿ ಆ ಸಾಲದ ಹಣವನ್ನು ದುರುಪಯೋಗ ಮಾಡಿದ್ದಾರೆ. ಹೀಗೆ ಲಕ್ಷಾಂತರ ರೂಪಾಯಿ ಸರ್ಕಾರದಿಂದ ಸಾಲವಾಗಿ ಕೊಟ್ಟಿದ್ದು ದುರುಪಯೋಗವಾಗಿದೆ. ಸರ್ಕಾರದವರಿಗೆ, ಅವರ ಪರವಾಗಿ ನಾನು ಹೇಳುವುದಿಷ್ಟೆ—ಹಣ ಕೊಡುವಾಗ್ಯೆ ಈ ಅಂಶಗಳನ್ನೆಲ್ಲ ಆಲೋಚನೆ ಮಾಡಲು ಒಂದು ಸಮಿತಿ ನೇಮಕ ಮಾಡತಕ್ಕದ್ದು ಅತ್ಯಗತ್ಯವೆಂಬುದನ್ನು ನಾನು ಒತ್ತಿ ಹೇಳುತ್ತೇನೆ. ಹಾಗೆ ಮಾಡಿದರೆ ಸರ್ಕಾರಕ್ಕೂ ಅನುಕೂಲ. ಆದರೆ ನನ್ನ ಅಭಿಪ್ರಾಯವಿರುವುದು, ಈ short term loansಗಳನ್ನು ಕೊಡತಕ್ಕದ್ದು ಉತ್ತಮ ಎಂದು. ವ್ಯವಸಾಯದ ಬಾಬುಗಳಲ್ಲಿ ಕೇವಲ 200, 300, 500 ರೂಪಾಯಿಗಳಾದರೆ ಸಾಕೆಂದು ನಾನು ತಿಳಿದುಕೊಂಡಿದ್ದೇನೆ. ಈ ನನ್ನ ತತ್ವದ ಮೇಲೆ ಒಂದು ಸಮಿತಿ ಮಾಡಿದರೆ ಸಾಲಗಾರರು ಎಷ್ಟರ ಮಟ್ಟಿಗೆ ತೆಗೆದುಕೊಂಡ ಸಾಲವನ್ನು ಹಿಂದಕ್ಕೆ ಕೊಡುತ್ತಾರೆ, ಎಷ್ಟು ಜನರು ಸಾಲ ವಾಪಸ್ಸು ಕೊಟ್ಟರು, ಎಷ್ಟು ಜನರು ಕೊಡಲಿಲ್ಲ ಎಂಬುದನ್ನೆಲ್ಲಾ ನಿರ್ದಿಷ್ಟವಾಗಿ ಪರಿಶೀಲನ ಮಾಡಲು ನಿರ್ದಿಷ್ಟವಾದ ಒಂದು ರೀತಿ ನೀತಿ ಅನುಸರಿಸಲು ಸಾಧ್ಯವಾಗುತ್ತದೆ; ಅದಕ್ಕಾಗಿ ಒಂದು ಸಮಿತಿಯನ್ನು ನೇಮಕಮಾಡುವುದು ಉತ್ತಮವಾದ್ದೆಂದು ನಾನು ಹೇಳಿ, ಈ ಠರಾವನ್ನು ಅನುಮೋದಿಸುತ್ತೇನೆ.

* ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಸ್ ಸಚಿವರು).—ಸ್ವಾಮಿ, ಸಾಲ ಕೊಡಬಾರದೆಂದು ಯಾರೂ ಅಭಿಪ್ರಾಯಪಡುವುದಿಲ್ಲ ; ಸಾಲ ಕೊಡುವುದರಲ್ಲಿ ವಿತರಣೆ ಇರಬೇಕು, ಕೊಟ್ಟಿದ್ದು ಉಪಯೋಗವಾಗುವ ರೀತಿಯಲ್ಲಿ ಹುಷಾರಾಗಿ ನೋಡಿಕೊಳ್ಳಬೇಕು ಎಂಬ ಉಪಯುಕ್ತ ಸಲಹೆಗಳ ಮೂಲಕ ಮಾನ್ಯ ಸದಸ್ಯರು ಇದುವರೆಗೆ ಭಾಷಣ ಮಾಡಿದ್ದಾರೆ. ಅದರಲ್ಲೂ ಶ್ರೀ ಸಂಪಂಗಿರಾಮಯ್ಯನವರು ಕೂಗು ಹೆಚ್ಚಿದೆ ಮತ್ತು ಉತ್ಪತ್ತಿ ಬಹಳವಿದೆಯೆಂದು ಹೇಳಿದ್ದಾರೆ. ಅದರಲ್ಲೇ ಉತ್ತರ ಅಡಕವಾಗಿದೆ. ಆ ಕಾರಣದಿಂದ ದೀರ್ಘವಾದ ಉತ್ತರ ಹೇಳುವುದು ಅನಾವಶ್ಯಕ. ಸಬ್ಸಿಡಿ ಸಾಲವನ್ನು ಹೆಚ್ಚಾಗಿ ಕೊಟ್ಟಿರುವುದು 1946–47ರಲ್ಲಿ. 1947ರಲ್ಲಿ ಸತ್ಯಾಗ್ರಹ ಕಾಲದಲ್ಲಿ ವಿಪರೀತ ಹಣವನ್ನು ವಿತರಣೆಯಿಲ್ಲದೆ ಉಪಯೋಗಿಸಲೇಬೇಕಾಗಿದೆ ಎಂದು ಶ್ರೀ ಗುಂಡಪ್ಪಗೌಡರು ಹೇಳಿದರು. ಅದಕ್ಕೆ ಆಗಿನ ಮಂತ್ರಿಮಂಡಲವನ್ನು ಆರೋಪಣೆ ಮಾಡತಕ್ಕದ್ದು ಎಷ್ಟು ಸಾಧುವಾದುದು ಎಂಬುದನ್ನು ಅವರೇ ಹೇಳಬೇಕಾಗಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಾನು ಆರೋಪ ಮಾಡುತ್ತೇನೆಂದು ತಿಳಿದುಕೊಳ್ಳಬಾರದು ; ಹೇಳುವುದನ್ನು ಸ್ವಾಗತಿಸಬೇಕು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಟ್ಟ ಸಾಲಗಳು ಕೆಲವು ಸಂದರ್ಭದಲ್ಲಿ ದುರುಪಯೋಗವಾಯಿತೆಂಬುದನ್ನು ಕಂಡುಹಿಡಿದು ಸರ್ಕಾರದವರು ಅಂಥ ಕೇಸುಗಳನ್ನು ಪತ್ತೆಮಾಡಿ ಸುಮಾರು ಈವರೆಗೆ 54 ಕೇಸುಗಳಲ್ಲಿ ಸಹಸ್ರಾರು ರೂಪಾಯಿಗಳನ್ನು ವಾಪಸು ಪಡೆಯುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಹಣ

(ಮಾನ್ಯ ಶ್ರೀ ಎಚ್. ಸಿದ್ದಯ್ಯನವರು)

ತೆಗೆದುಕೊಂಡ ಉದ್ದೇಶ ನೆರವೇರದೆ ಬೇರೆ ರೀತಿಯಲ್ಲಿ ಅದನ್ನು ಉಪಯೋಗಿಸಿಕೊಂಡಿದ್ದರಿಂದ ಸಾಲ ತೆಗೆದುಕೊಂಡವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಸಮನ್ ಕಳುಹಿಸಿ 54 ಕೇಸುಗಳಲ್ಲಿ ಎರಡು ಮೂರು ಜಿಲ್ಲೆಗಳಲ್ಲಿ ಹಣ ವಸೂಲು ಮಾಡಿದ್ದಾರೆ. ಹೀಗಿರುವಾಗ ಇದರ ಕಡೆ ಎಷ್ಟು ನಿಗಾ ಕೊಟ್ಟು ಸರ್ಕಾರ ಕೆಲಸ ಮಾಡಬೇಕೋ ಅಷ್ಟು ಸಮರ್ಪಕವಾಗಿ ಮಾಡಿಲ್ಲವೆಂದು ಹೇಳುವುದನ್ನು ವಿವರಿಸಿ ಹೆಚ್ಚಾಗಿ ಹೇಳಬೇಕಾದ್ದು ಅನಾವಶ್ಯಕ. ಇತ್ತೀಚೆಗೆ ಈ ತರಹ ಕೇಸುಗಳನ್ನು ಯಾರೂ ತಿಳಿಸಿಲ್ಲ. ಅಂಥಾದ್ದು ಯಾವುದಾದರೂ ಇದ್ದರೆ ಸರ್ಕಾರದ ಗಮನಕ್ಕೆ ಅಥವಾ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೆ ಪರಿಶೀಲಿಸಿ ಸರಿಪಡಿಸಲಾಗುತ್ತದೆ ಎಂದು ಧೈರ್ಯವಾಗಿ ಭರವಸೆ ಕೊಡುತ್ತೇನೆ.

ಇನ್ನು ಸಮಿತಿ ಏರ್ಪಡಿಸಬೇಕೆಂದು ಹೇಳಿದ್ದಾರೆ. ಕೊಡುವ ಸಬ್ಸಿಡಿ ಅಥವಾ ಸಾಲ ಅಥವಾ ಗ್ರಾಂಟು ಸದ್ವಿನಿಯೋಗವಾಗುತ್ತಿಲ್ಲವೆಂದು ಕಂಡರೆ ಮತ್ತು ಸರ್ಕಾರದವರು ಅಥವಾ ಅಧಿಕಾರವರ್ಗದವರು ಅದನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬುದನ್ನು ಆಧಾರಪೂರ್ವಕವಾಗಿ ಉದಾಹರಣೆಯಿಂದ ತೋರಿಸಿಕೊಟ್ಟರೆ ಆಗ್ಗೆ ಅವಶ್ಯಕತೆಯಿದ್ದರೆ ಅಂಥ ಸಮಿತಿಯನ್ನು ರಚಿಸಬಹುದು. ಈಗಿರುವ ಆಡಳಿತದಲ್ಲಿ ಈ ತರಹ ಯಾವ ತಪ್ಪುಗಳೂ, ಲೋಪಗಳೂ ಕಂಡುಬರದೆ ಇರುವಾಗ ಈ ಸಮಿತಿಯು ಅನಾವಶ್ಯಕವೆಂದು ನಮಗೆ ಕಾಣುತ್ತದೆ. ಮತ್ತು ಈಗ ಎಂಟು ದಿವಸಗಳಿಂದ ಬಹುಮಂದಿ ಮಾನ್ಯ ಸದಸ್ಯರು ಹೆಚ್ಚು ಹಣ ಇದಕ್ಕೆ ಸರ್ಕಾರ ಒದಗಿಸಬೇಕೆಂದು ಬಡ್ಜೆಟ್ ಭಾಷಣದಲ್ಲೂ ಮತ್ತು ಹೊರಗೂ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದನ್ನರಿತು ಸರ್ಕಾರದವರು ಬಹಳ ಉದಾರತೆಯಿಂದ ರೈತರಿಗೆ ಹೆಚ್ಚು ಧನ ಸಹಾಯವಾಗಬೇಕು ಅದರಿಂದ ಹೆಚ್ಚಿನ ಆಹಾರ ಪದಾರ್ಥಗಳನ್ನು ಬೆಳೆಯಬೇಕು ಇತ್ಯಾದಿ ಸದುದ್ದೇಶದಿಂದ, ಸದ್ಭಾವನೆಯಿಂದ ಇತ್ತೀಚೆಗೆ ಬಹಳ ಸಹಾಯ ಮಾಡುತ್ತಿದ್ದಾರೆ. ಬಡ್ಡಿಯ ದರವನ್ನು ಕಡಮೆ ಮಾಡಿದ್ದಾರೆ. ಸಬ್ಸಿಡಿ ಸಾಲಕ್ಕೆ ಸೇಕಡ ಎರಡರಂತೆ ಬಡ್ಡಿ ಹಾಕಿದ್ದಾರೆ, ತಕಾವಿ ಸಾಲಕ್ಕೆ ಸೇಕಡ ನಾಲ್ಕು ರೂಪಾಯಿ ಬಡ್ಡಿಯಿದೆ. ಮತ್ತು ಕೊಟ್ಟ ಹಣ ಈಚೆಗೆ ಸಾಲದೆಂದು ಹೋದ ವರ್ಷ ಮತ್ತು ಕಳೆದ ಜನವರಿ ತಿಂಗಳಲ್ಲಿ ಮಾನ್ಯ ಸದಸ್ಯರನೇಕರು ಅಪೇಕ್ಷೆಪಟ್ಟಿದ್ದರ ಮೇಲೆ 1949–50ರಲ್ಲಿ ತಕಾವಿ ಸಾಲಕ್ಕೆ $1\frac{3}{4}$ ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಕೊಟ್ಟಿದ್ದುದನ್ನು 1950–51ರಲ್ಲಿ ಮೊದಲು $2\frac{3}{4}$ ಲಕ್ಷ ರೂಪಾಯಿಗಳಿಗೇರಿಸಿ ಪುನಃ $3\frac{3}{4}$ ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದೆ. ಹೀಗೆ ಒಂದು ಲಕ್ಷ ರೂಪಾಯಿಗಳನ್ನು ಹೆಚ್ಚು ಮಾಡಿದೆ. ಈ ಸಾರಿ ಬಡ್ಜೆಟ್ಟಿನಲ್ಲಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನಿಗೆ 3 ಲಕ್ಷ, ತಕಾವಿಗೆ 5 ಲಕ್ಷ ಹೀಗೆ 8 ಲಕ್ಷ ರೂಪಾಯಿಗಳನ್ನು ಒದಗಿಸಿರುವುದನ್ನು 161ನೆಯ ಪುಟದಲ್ಲಿ ನೋಡಬಹುದು. ಇದು ಸದ್ವಿನಿಯೋಗಕ್ಕಾಗಿ ಕೊಟ್ಟಿದೆಯೇ ಹೊರತು ದುರ್ವಿನಿಯೋಗಕ್ಕಾಗಿ ಕೊಟ್ಟಿಲ್ಲ. ಈ ರೀತಿ ಕೊಟ್ಟಿರುವುದನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸಲು ತಕ್ಕ ಏರ್ಪಾಡು ಮಾಡುತ್ತೇವೆ.

Sri H. B. GUNDAPPA GOWDA.—The case is not that you are not giving loans; we agree that you are generous in giving loans.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಿಮ್ಮ ಸಲಹೆಯನ್ನು ಜ್ಞಾಪಕದಲ್ಲಿಟ್ಟು ಹೆಚ್ಚು ಸಹಾಯ ಮಾಡಬೇಕೆಂಬ ಉದ್ದೇಶವಿದೆ. ಕೊಟ್ಟಿರುವುದು ಸರಿಯಾಗಿ ಉಪಯೋಗವಾಗಬೇಕೆಂದು ಹೇಳುವುದರಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ಸಾಲ ಕೊಡಬೇಕಾದರೆ ಕೈಗಾರಿಕೆಗಳಿಗೆ ಇಷ್ಟು ಎಂದು ಗೊತ್ತು ಮಾಡಬೇಕು. ವ್ಯವಸಾಯಗಾರರಿಗೆ ಹೆಚ್ಚಾಗಿ ಕೊಡಬೇಕೆಂಬ ನೀತಿಯನ್ನನುಸರಿಸಬೇಕು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೈಗಾರಿಕೆ ವಿಚಾರವನ್ನು ಮಾನ್ಯ ಹಣಕಾಸಿನ ಸಚಿವರು ಹೇಳುತ್ತಾರೆ. ಲ್ಯಾಂಡ್ ಇಂಪ್ರೂವ್‌ಮೆಂಟ್, ಸಬ್ಸಿಡಿ ಮತ್ತು ತಕಾವಿ ಸಾಲಗಳ ವಿಚಾರ ನಾನು ಹೇಳುತ್ತಿದ್ದೇನೆ. ಈ ಬಾಬಿನಲ್ಲಿ ಹಣ ಉಳಿಯದ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ಹೆಚ್ಚು ನಿಗಾ ಕೊಡುತ್ತವೆಂದು ಹೇಳುವಾಗ ಸ್ವಲ್ಪ ಹೆಚ್ಚು ಶ್ರದ್ಧೆ ವಹಿಸುತ್ತೇವೆಂಬುದನ್ನು ಗಮನಿಸಬೇಕು. ಆದ್ದರಿಂದ ಈ ವಿಚಾರದಲ್ಲಿ ಯಾರೂ ಅನುಮಾನಪಡಬೇಕಾಗಿಲ್ಲ. ಮತ್ತು ಕೆಲವು ಕಡೆ ಅನಿರೀಕ್ಷಿತವಾಗಿ ಭೇಟಿಕೊಟ್ಟು ತಾಲ್ಲೂಕು ಆಫೀಸುಗಳಿಗೆ ಹೋಗಿ ಅರ್ಧಗಂಟೆ ಇದಕ್ಕೆ ಸಂಬಂಧಪಟ್ಟ ಕಾಗದಗಳನ್ನು ಹುಡುಕಿದ್ದೇನೆ. ದುರ್ವಿನಿಯೋಗವಾಗಿಲ್ಲ. 4–5 ಕಡೆ ಕ್ರಮ ತಪ್ಪಿರುವುದಕ್ಕೆ ಸರಿಯಾಗಿ ಶಿಕ್ಷೆಯಾಗಿದೆ ಎಂದು ಹೇಳಿದರೆ ಸಾಕಾಗಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ತಕಾವಿ ಸಾಲ ರೈತರ ಕೈಗೆ ಹೋಗುವಾಗ್ಗೆ ಎಷ್ಟು ಅವರಿಗೆ ಸಿಕ್ಕುತ್ತದೆ ಎಂದು ನೋಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಉತ್ಪ್ರೇಕ್ಷೆ. ಸಾಮಾನ್ಯವಾಗಿ ನೂರಕ್ಕೆ 50 ಸಹ ಕೈಸೇರುವುದಿಲ್ಲವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಆ ರೀತಿ ಹೇಳುವುದು ನಿಜವೆಂದು ಯಾರೂ ಒಪ್ಪುವುದಕ್ಕಾಗುವುದಿಲ್ಲ. ಪೂರ್ತಿಯಾಗಿ ಕೈಸೇರುತ್ತದೆಂಬುದು ನಮ್ಮ ಭಾವನೆ. ಹಳ್ಳಿಯಿಂದ ತಾಲ್ಲೂಕು ಆಫೀಸಿಗೆ ಬರಲು ಬಸ್ ಛಾರ್ಜನ್ನು ಸೇರಿಸಿಕೊಡುವುದಕ್ಕಾಗುವುದಿಲ್ಲ. ಅದು ಕೈಯಿಂದ ಬೀಳುತ್ತದೆ. ಅಂತೂ ಇಷ್ಟು ಮಾತ್ರ ಹೇಳಬಹುದು. ಬೇಗ ಬೇಗ ವ್ಯವಸಾಯದ ಕೆಲಸವಾಗಬೇಕೆಂಬ ಉದ್ದೇಶವಿದೆ. ಇನ್ನೂ ಹೆಚ್ಚಾದ ವ್ಯವಸ್ಥೆಯಿಂದ ಕೆಲಸ ನಡೆಯುವಂತೆ ಸರ್ಕಾರದವರು ಪ್ರಯತ್ನಪಡುತ್ತಾರೆ ಎಂದು ಭರವಸೆ ಕೊಡುತ್ತೇನೆ.

The Hon'ble Sri H. C. DASAPPA.—Sir, I do not think I should detain the House any longer. It is good that a debate on this subject has taken place in order to emphasise the fact, that I referred to in my reply to the Budget discussion, that every pie that the Government spends must be well spent and you must spend every pie to get back proper return. But the difficulty in accepting the resolution as it is, is that it relates to all loans and all subsidies. It would be too much of a

task for any single committee to go into the whole question and the principles that guide the grant of these takkavi and other loans. Likewise there are other loans, loans to House Building Societies, Co-operative Societies and so on. They have a technic of their own. So, we must take time to consider whether we should form one committee for all these miscellaneous things or have different committees. Take for instance, industrial loans. We have brought forward the State Aid to Industries Bill where you have got a committee which is composed of certain representatives of this Legislature and as soon as this is formed they would be fully seized with regard to all the industrial loans in the State. Before that Committee, composed of the representatives of the House, goes into the question and forms its plans, its procedure and programme and so on, whether it is desirable to constitute a committee superimposed on that is a matter which Government will have to consider and I hope, every Hon'ble Member will also have to consider. As regards the takkavi loans and so on, we shall consider what best can be done. Since I have interfered more often than I should have when Sri H. B. Gundappa Gowda was talking, I do not think I should refer to that again. I can only say in passing, let no Hon'ble Member go away with the impression that the Cabinet composed as it is of so many elements is going to be influenced by any representation made to it either by any party seeking the loan directly or through their legal representatives. I for one would like to disabuse the minds of the Hon'ble Members so that they may not have an impression that the appearance of the legal adviser is going to work a miracle on the psychology of the entire cabinet and it will result in any miscarriage of justice or anything like that. Far rather it is better that all the Ministers get to know the exact need and the requirements of industry in that fashion than that he should approach any one individual and get recommendation of that individual. I must emphatically differ from my Hon'ble friend in regard to that procedure. But I do not want to lengthen discussion on that but as I said it is far better.........

Sri A. BHEEMAPPA NAIK.—I hope that the same will be continued in other cases.

The Hon'ble Sri H. C. DASAPPA.—Thank you very much ; that means that the procedure adopted by the Government is welcomed by some Hon'ble Members. We will consider all these aspects.

The resolution as brought forward by my Hon'ble friend for appointing one Committee for all these things does not commend itself to us. But we will bear it in mind to see whether any particular categories of loan do need further enquiry and examination. I mean the procedure with regard to both giving loans and the utilisation of the loans—what is known as keeping track of the utilisation of the loan that is given by us.

Sri A. BHEEMAPPA NAIK.—Will the Hon'ble Finance Minister kindly tell us whether he has been contemplating to have a State Aid to Agriculturists' Bill on the lines of the State Aid to Industries Bill ?

The Hon'ble Sri H. C. DASAPPA.—The Hon'ble Member is addressing wrong quarters. The Industries Minister cannot give reply to that.

Sri A. BHEEMAPPA NAIK.—I expected the Finance Minister to say something on the basis of joint responsibliity.

The Hon'ble Sri H. C. DASAPPA.—We shall consider that point and let you know later.

Sri A. BHEEMAPPA NAIK.—Thank you, Sir.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಸರ್ಕಾರದವರು ಈ ನಿರ್ಣಯದ ತತ್ವವನ್ನು ಒಪ್ಪಿಕೊಂಡಿರುವುದರಿಂದ ಮತ್ತು ಇದನ್ನು ಈರೂಪದಲ್ಲಿ ತರುವುದಕ್ಕೆ ಕಷ್ಟವಿದೆ ಎಂದು ಹೇಳಿರುವುದರಿಂದ ಇದನ್ನು ಒತ್ತಾಯಪಡಿಸುವುದಿಲ್ಲ. ಇದನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಸಭೆಯ ಅನುಮತಿಯನ್ನು ಬೇಡುತ್ತೇನೆ.

The resolution was, by leave of the House, withdrawn.

RESOLUTION No. 8.

Withdrawal of all control orders relating to Food Commodities

ಅಧ್ಯಕ್ಷರು.—ಈ ನಿರ್ಣಯವು ಹಿಂದೆ ಆಗಲೇ ಚರ್ಚೆಯಾಗಿರುವ ನಿರ್ಣಯಕ್ಕೆ ಸಂಬಂಧಪಟ್ಟಿರುವುದರಿಂದ ಇದನ್ನು ಸೂಚಿಸಲು ಅವಕಾಶವಿಲ್ಲ. ನಿಬಂಧನೆಗಳ ಪ್ರಕಾರ ಈ ರೀತಿ ಇದೆ:—

"When a resolution has been withdrawn with the leave of the Assembly no resolution or amendment raising substantially the same question shall be moved during the same Session".

Mr. SPEAKER.—The next resolution No. 9 stands in the name of Sri V. S. Narayana Rao. He has requested Sri W. H. Hanumanthappa to move the resolution. He may do so.

RESOLUTION No. 9.

Amendment of Sales Tax Act of 1948 to provide for Appeals and Revision Petitions.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ನನ್ನ ನಿರ್ಣಯವು ಈ ರೀತಿ ಇದೆ.—

"ಸರಕುಗಳ ಮಾರಾಟದ ಮೇಲಿನ ತೆರಿಗೆಗೆ ಸಂಬಂಧಪಟ್ಟ ಮೊಕದ್ದಮೆಗಳ ಮೇಲೆ ಬರತಕ್ಕ ಅಪೀಲುಗಳ ಮತ್ತು ಪುನರ್ವಿಮರ್ಶೆಯ ಅರ್ಜಿಗಳ ವಿಷಯದಲ್ಲಿ ಸ್ವತಂತ್ರವಾದ ಒಂದು "ಅಪಲೇಟ್ ಟ್ರೈಬ್ಯೂನಲ್" ಮಂಡಲಿಯವರು ವಿಚಾರಣೆ ನಡೆಯಿಸಿ ಇತ್ಯರ್ಥಪಡಿಸಲು ಅವಕಾಶವಿರುವಹಾಗೆ "1948 ನೆಯ ಇಸವಿಯ ಸರಕುಗಳ ಮಾರಾಟದ ಮೇಲೆ ತೆರಿಗೆಯನ್ನು ವಿಧಿಸುವುದಕ್ಕೆ ಸಂಬಂಧಪಟ್ಟ ಆಕ್ಟ" ನ್ನು ಯುಕ್ತ ರೀತಿಯಲ್ಲಿ ತಿದ್ದುಪಾಟುಮಾಡಲು ಸರ್ಕಾರದವರು ಕೂಡಲೇ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಈ ನಿರ್ಣಯವನ್ನು ಮಾಡಿಸುತ್ತೇನೆ. ಈಗ ತಂದಿರತಕ್ಕ ನಿರ್ಣಯದಲ್ಲಿ ಎರಡು ಭಾಗ ಇದೆ. ಅಪಲೇಟ್ ಟ್ರೈಬ್ಯೂನಲ್ ನೇಮಕಮಾಡಬೇಕೆಂಬುದು ಮೊದಲನೆಯ ಭಾಗ. 48ನೆಯ ಇಸವಿಯ ಸೇಲ್ಸ್ ಟ್ಯಾಕ್ಸ್ ಆಕ್ಟನ್ನು ಯಾವ ರೀತಿ ತಿದ್ದುಪಡಿ ಮಾಡಬೇಕೆಂಬುದು ಎರಡನೆಯ ಭಾಗ. ಸೇಲ್ಸ್ ಟ್ಯಾಕ್ಸ್ ವಿಷಯದಲ್ಲಿ ಬಹಳ ಜನಗಳಿಗೆ ಬಹಳ ಕಷ್ಟ ಉಂಟಾಗುತ್ತಿದೆ. ಅವರು ಹೇಳುವ ರೀತಿಯಲ್ಲಿ ನಮ್ಮ ದೇಶದಲ್ಲಿ ಅನೇಕ ವರ್ತಕರಿಗೆ ಲೆಕ್ಕಗಳನ್ನಿಡಲು ಸಾಧ್ಯವಿಲ್ಲ. ಅವರು ಪೂರ್ವದ ಪದ್ಧತಿಯನ್ನು ಅನುಸರಿಸಿಕೊಂಡು ಮಾಡತಕ್ಕ ವ್ಯಾಪಾರದ ರೀತಿಯಲ್ಲಿ ಲೆಕ್ಕಗಳನ್ನಿಟ್ಟುಕೊಂಡು ಬರುತ್ತಾ ಇದ್ದಾರೆ. ಈ ಲೆಕ್ಕಗಳನ್ನು ಸಂಬಂಧಪಟ್ಟ ಆಫೀಸರುಗಳು ಒಪ್ಪುವುದಿಲ್ಲ. ಅವರು ಹೇಳುವ ರೀತಿಯಲ್ಲಿ ಒಂದು ಲೆಕ್ಕ ಇಡಬೇಕು. ಇಲ್ಲದಿದ್ದರೆ ಅವರು ತೋಚಿದ ತೆರಿಗೆಯನ್ನು ಹಾಕುತ್ತಾರೆ. ಆ ತೆರಿಗೆ ಹಾಕಿದ ಕಾಲದಲ್ಲಿ ವರ್ತಕರು ಸರಿಯಾಗಿಲ್ಲ, ಹೆಚ್ಚು ಎಂದು ಹೇಳಿದರೆ, ಅದನ್ನು ಅದಕ್ಕೆ ಸಂಬಂಧಪಟ್ಟ ಆಫೀಸರುಗಳಲ್ಲಿ ಹೇಳಬೇಕು. ಅವರು ತಮ್ಮ ನೌಕರರು ಮಾಡಿದ ಠರಾವನ್ನೇ ಬದಲಾವಣೆ ಮಾಡುವುದಕ್ಕೆ ಇಷ್ಟವಿಲ್ಲದೇ, ಬದಲಾವಣೆ ಮಾಡುವುದಿಲ್ಲ. ಅದಕ್ಕೆ ಅಪೀಲು ಮಾಡಬೇಕಾಗಿ ಬಂದರೆ ಅವರ ಮೇಲಿನ ಆಫೀಸರುಗಳಿಗೆ ಹೋದಾಗಲೂ ಕೂಡ ವರ್ತಕರಿಗೆ ಒಂದು ವಿಧವಾದ ನ್ಯಾಯ ದೊರಕುವುದಿಲ್ಲ. ಆಗ ಸರ್ಕಾರದವರಿಗೆ ಅಪೀಲು ಮಾಡಿಕೊಳ್ಳಬೇಕು. ಮದರಾಸಿನಲ್ಲಿ ಈಗ ಈ ರೀತಿ ಅಪೀಲೇಟ್ ಟ್ರೈಬ್ಯೂನಲ್ ಏರ್ಪಡಿಸಿದ್ದಾರೆ. ಈ ರೀತಿ ಮಾಡುವುದರಿಂದ ವರ್ತಕರಿಗೆ ಸದವಕಾಶ ಕೊಟ್ಟಂತಾಗಿ ಅವರ ಮನಸ್ಸಿನಲ್ಲಿರುವ ಭಿನ್ನಾಭಿಪ್ರಾಯ ಹೋಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ನಿರ್ಣಯದಲ್ಲಿ ಕಂಡ ಅನುಕೂಲತೆ ಏರ್ಪಡಿಸಿ ಕೊಡಬೇಕೆಂಬುದಾಗಿ ಸರ್ಕಾರದವರನ್ನು ನಾನು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—Resolution moved.—

"ಸರಕುಗಳ ಮಾರಾಟದ ಮೇಲಿನ ತೆರಿಗೆಗೆ ಸಂಬಂಧಪಟ್ಟ ಮೊಕದ್ದಮೆಗಳ ಮೇಲೆ ಬರತಕ್ಕ ಅಪೀಲುಗಳ ಮತ್ತು ಪುನರ್ವಿಮರ್ಶೆಯ ಅರ್ಜಿಗಳ ವಿಷಯದಲ್ಲಿ ಸ್ವತಂತ್ರವಾದ ಒಂದು "ಅಪಲೇಟ್ ಟ್ರೈಬ್ಯೂನಲ್" ಮಂಡಲಿಯವರು ವಿಚಾರಣೆ ನಡೆಯಿಸಿ ಇತ್ಯರ್ಥಪಡಿಸಲು ಅವಕಾಶವಿರುವ ಹಾಗೆ "1948 ನೆಯ ಇಸವಿಯ ಸರಕುಗಳ ಮಾರಾಟದ ಮೇಲೆ ತೆರಿಗೆಯನ್ನು ವಿಧಿಸುವುದಕ್ಕೆ ಸಂಬಂಧಪಟ್ಟ ಆಕ್ಟ" ನ್ನು ಯುಕ್ತ ರೀತಿಯಲ್ಲಿ ತಿದ್ದುಪಾಟು ಮಾಡಲು ಸರ್ಕಾರದವರು ಕೂಡಲೇ ಕಾರ್ಯಕ್ರಮಗಳನ್ನೂ ಕೈಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಸಚಿವರು).—ಸ್ವಾಮಿ, ಇದರಲ್ಲಿ ಹೆಚ್ಚೇನೂ ಹೇಳಬೇಕಾಗಿಲ್ಲ. ಈ ತತ್ವವನ್ನು ಹಿಂದೆಯೇ ಬಹುಶಃ ನಾನೂ ಕೂಡ ಒಪ್ಪಿಕೊಂಡಿದ್ದೇನೆ ಎಂದು ಕಾಣುತ್ತದೆ. ಯಾವಾಗ ಇದರ ಮೇಲಿನ ಜ್ಯೂರಿಸ್‌ಡಿಕ್ಷನ್ ಕೋರ್ಟ್‌ನಿಂದ ತೆಗೆಯಿತೋ ಆಗ ಈ ರೀತಿ ಮಾಡುವುದು ಸೂಕ್ತ. ಆದಷ್ಟು ಬೇಗ ಇದಕ್ಕೆ ನಿಬಂಧನೆಗಳನ್ನು ತಯಾರು ಮಾಡಿ ಈ ರೀತಿ ಒಂದು ಟ್ರೈಬ್ಯೂನಲ್ ಸ್ಥಾಪಿಸುವುದಕ್ಕೆ ಪ್ರಯತ್ನಪಡುತ್ತೇವೆ ಎಂದು ಹೇಳಿ ಭರವಸೆ ಕೊಡುತ್ತೇನೆ. ಆದ್ದರಿಂದ ದಯವಿಟ್ಟು ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಬ್ಲ್ಯು ಎಚ್. ಹನುಮಂತಪ್ಪನವರು.—ಸರ್ಕಾರದವರ ಭರವಸೆಯ ಮೇಲೆ ಈ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತೇನೆ ಮತ್ತು ಸರ್ಕಾರದವರಿಗೆ ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ.

The resolution was, by leave of the House, withdrawn.

Resolution No. 10.

Bifurcation of the Anti-Corruption Department and appointment of a three-member Commission for the Department.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—ಸ್ವಾಮಿ, ನಾನು ಮಂಡಿಸತಕ್ಕ ನಿರ್ಣಯ ಈರೀತಿ ಇದೆ :

ಲಂಚ ನಿರೋಧಕ ಇಲಾಖೆಯ ಡೈರೆಕ್ಟರವರ ಆಫೀಸನ್ನು "ಎಫಿಷಿಯೆನ್ಸಿ ಆಡಿಟ್"ಗೆ ಸಂಬಂಧಪಟ್ಟ ಆಫೀಸಿನಿಂದ ಪ್ರತ್ಯೇಕಿಸಬೇಕೆಂದೂ ಮತ್ತು ಲಂಚ ನಿರೋಧಕ ಇಲಾಖೆಗೆ ಮೂರುಮಂದಿ ಸದಸ್ಯರುಗಳಿಂದ ಕೂಡಿದ ಒಂದು "ಕಮಿಷನ್" ಮಂಡಲಿಯನ್ನು ನೇಮಕ ಮಾಡಬೇಕೆಂದೂ ಈ ಸಭೆಯವರು ಅಭಿಪ್ರಾಯಪಡುತ್ತಾರೆ.

ಸ್ವಾಮಿ, ಎಫಿಷಿಯೆನ್ಸಿ ಆಡಿಟ್ ಮತ್ತು ಲಂಚನಿರೋಧಕ ಇಲಾಖೆಗಳು ಹೊಸದಾಗಿ ಏರ್ಪಾಡಾಗುವವರೆಗೂ ಈ ಎರಡು ಕೆಲಸಗಳನ್ನೂ ಸರ್ಕಾರದವರೂ, ಅಧಿಕಾರಿಗಳೂ ಮತ್ತು ಆಯಾ ಇಲಾಖೆಗಳು ತಮ್ಮ ಸರ್ವೆಸಾಮಾನ್ಯ ಕೆಲಸಗಳು, ಎಂದರೆ ಪ್ರತಿದಿನ ಮಾಡಬೇಕಾದ ಕರ್ತವ್ಯಗಳಲ್ಲಿ ಒಂದು ಭಾಗವೆಂದು ಪರಿಗಣಿಸಿ ಮಾಡುತ್ತಿದ್ದರು. ಈಗ ಈ ಹೊಸ ಇಲಾಖೆಗಳು ಪ್ರಾರಂಭವಾದ ಮೇಲೆ ಕೆಲವು ತಿಂಗಳುಗಳಿಂದ ಹದಿನೈದು ದಿನ ಅಥವ ಒಂದು ತಿಂಗಳಿಗೊಮ್ಮೆ ಈ ಇಲಾಖೆಯಿಂದ ವರದಿಗಳು ಬರುತ್ತಿವೆ. ಈ ವರದಿಗಳನ್ನು ನೋಡಿದರೆ, ಹಿಂದೆ ಯಾವ ಕೆಲಸವನ್ನು ಬೇರೆಬೇರೆ ಇಲಾಖೆಗಳೇ ಸಾಮಾನ್ಯವಾಗಿ ಮಾಡುತ್ತಿದ್ದರೋ ಆ ಕೆಲಸಗಳನ್ನೇ ಈ ಹೊಸ ಇಲಾಖೆಯವರೂ ಮಾಡುತ್ತಿದ್ದಾರೆಂಬುದು ವ್ಯಕ್ತವಾಗುತ್ತದೆ. ಯಾವ ಕೆಲಸಕ್ಕೆ ಈ ಹೊಸ ಇಲಾಖೆ ನಿಯೋಜಿಸಲ್ಪಟ್ಟಿತೋ ಆ ಕೆಲಸ ಇದರಿಂದ ಅಷ್ಟಾಗಿ ಜರುಗುತ್ತಿಲ್ಲವೆಂಬುದೂ ವ್ಯಕ್ತವಾಗುತ್ತದೆ. ಇದರಲ್ಲಿ ಎರಡು ಲೋಪದೋಷಗಳು ಕಾಣುತ್ತವೆ. ಮೊದಲನೆಯದಾಗಿ, ಸಾಮಾನ್ಯ ಕೆಲಸಗಳನ್ನು ಮಾಡತಕ್ಕ ಇಲಾಖೆಗಳು ತಮಗೆ efficiencyಗೆ ಸಂಬಂಧಪಟ್ಟ ಯಾವ ಅರ್ಜಿ ಬರಲಿ, ಪ್ರಾಮಾಣಿಕತೆಗೆ ಸಂಬಂಧಪಟ್ಟ ಯಾವ ಅರ್ಜಿ ಬರಲಿ ಅದನ್ನು ಈ ಹೊಸ ಇಲಾಖೆಗೆ ಕಳುಹಿಸಿಬಿಟ್ಟು ತಾವು ಕೈಕಟ್ಟಿಕೊಂಡು ಕುಳಿತುಬಿಡುತ್ತಾರೆ. ಈ ಎಫಿಷಿಯನ್ಸಿ ಆಡಿಟ್ ಮತ್ತು ಲಂಚನಿರೋಧಕ ಇಲಾಖೆಯವರಲ್ಲಿಗೆ ಇಂತಹ ಎಲ್ಲ ಅರ್ಜಿಗಳೂ ಹೋಗಿ ಅಲ್ಲಿ ಶೇಖರಣೆಯಾಗಿ ಒಂದು ವರ್ಷ ಎರಡು ವರ್ಷಕ್ಕೆ ಮೇಲ್ಪಟ್ಟು ಮುಲ್ಕ ಬಿದ್ದಿವೆಯೆಂದು ಗೊತ್ತಾಗಿದೆ. ಈ ಎಫಿಷಿಯನ್ಸ್ ಆಡಿಟ್ ಇಲಾಖೆಯವರೇನೋ ಕೆಲಸವನ್ನು ಮೆಹನತ್ತಿನಿಂದಲೂ ದಕ್ಷತೆಯಿಂದಲೂ ಮಾಡುತ್ತಿದ್ದಾರೆ. ಆದರೆ ಮಾಮೂಲಾಗಿ ಇಲಾಖೆಯವರು ಮಾಡುತ್ತಿದ್ದ ಕೆಲಸವೇ ವಿನಾ ಇದರಿಂದ ಯಾವ ಕೆಲಸ ಎಷ್ಟು ಸಮರ್ಪಕವಾಗಿ ನಡೆಯಬೇಕಾಗಿತ್ತೋ ಅಷ್ಟು ನಡೆಯುತ್ತಿಲ್ಲವೆಂದು ಕಂಡುಬರುತ್ತದೆ.

ಎರಡನೆಯದಾಗಿ, ಹುದ್ದೆಗಳ ಮೇಲೆ ಹುದ್ದೆಗಳನ್ನು ಸಂಪಾದಿಸಿಕೊಂಡು, ಬಹು ಕಾಲದಿಂದ ಸರ್ವಿಸಿನಲ್ಲಿದ್ದುಕೊಂಡು ಅನುಭವ ಪಡೆದಿರುವವರು ಈ ಇಲಾಖೆಯ ಕೆಲಸ ಮಾಡುವುದು ಸೂಕ್ತ. ಅವರಿಗೆ ಚೆನ್ನಾಗಿ ಪರಿಶ್ರಮವಿರುವುದರಿಂದ ಲೋಪದೋಷಗಳು ಬೇಗ ಗೊತ್ತಾಗುತ್ತದೆ. ಹಾಗಿಲ್ಲದೆ ಯಾವುದೋ ಇಲಾಖೆಯಲ್ಲಿದ್ದವರಿಗೆ ಬೇರಾವುದೋ ಕೆಲಸವನ್ನು ವಹಿಸಿದರೆ ಆ ಕೆಲಸ ಸಮರ್ಪಕವಾಗಿ ಆಗಲಾರದು. ಆದುದರಿಂದ ಈ ಒಂದು ನ್ಯೂನತೆ ಕಂಡುಬರುತ್ತದೆ. ಇದನ್ನು ಸರಿಪಡಿಸಬೇಕಾದರೆ, ಮೊದಲು ಈ ಅಧಿಕಾರಿಗಳು ಯಾವ ಯಾವ ಕೆಲಸ ಮಾಡುತ್ತಿದ್ದರೋ ಆ ಇಲಾಖೆಗಳಿಗೆ ಸಂಬಂಧಪಟ್ಟ ಕೆಲಸಗಳನ್ನೇ ಇವರಿಗೆ ವಹಿಸಬೇಕು. ಆಗ ಇವರು ಅಲ್ಲಿರುವ ಲೋಪದೋಷಗಳನ್ನು ಸುಲಭವಾಗಿ ಗ್ರಹಿಸಿ ಸರಿಪಡಿಸಬಹುದು. ಅನೇಕ ಸಂದರ್ಭಗಳಲ್ಲಿ ಹೊಸ ಕೆಲಸಗಳನ್ನು ಮಾಡಬೇಕಾದರೆ ಅವರಿಗೆ ಅಧಿಕಾರವಿದೆಯೋ ಇಲ್ಲವೋ ಎಂಬ ಅನುಮಾನ ಬಂದು ಕೆಲಸ ಸರಿಯಾಗಿ ನಡೆಯುವುದಿಲ್ಲ. ಲಂಚ ನಿರೋಧಕ ಕೆಲಸವನ್ನು ಕೂಡ ಆಯಾ ಇಲಾಖೆಯೇ ಮಾಡಬೇಕು. ಅದನ್ನು ಬಿಟ್ಟು ಈ ಇಲಾಖೆಗೆ ವಹಿಸಿದುದರಿಂದ, ದೊಡ್ಡದೊಡ್ಡ ಕೆಲಸಗಳಿಗೆ ಇವರು ಗಮನಕೊಡವುದು ಬಿಟ್ಟು ಗುಮಾಸ್ತರು ಪೋಲೀಸ್ ಕಾನ್ಸ್ಟೇಬಲ್‌ಗಳು ಇವರ ಮೇಲೆ ಬಂದ ದೂರುಗಳ ಕಡೆ ಗಮನ ಕೊಡುತ್ತಿದ್ದಾರೆ. ಇದರಿಂದ ಎಲ್ಲ ಕಡೆಯೂ ಅಸಮಾಧಾನ ಕಂಡುಬರುತ್ತಿದೆ. ದೊಡ್ಡದೊಡ್ಡ ಇಲಾಖಾ ಮೊಖ್ತೇಸರುಗಳ ಮೇಲೆ ಬರುವ ವಿಷಯಗಳನ್ನು ಇವರಿಗೆ ವಹಿಸುವುದರಿಂದ ಅಸಮಾಧಾನ ಕಂಡುಬಂದಿರುವುದರಿಂದ ಕೆಲವು ದೊಡ್ಡ ಅಧಿಕಾರಿಗಳ ವಿಚಾರದಲ್ಲಿ ತನಿಖೆ ನಡೆಸಬೇಕಾದರೆ ಮೂರು ಜನರಿರುವ ಒಂದು ಸಮಿತಿಯನ್ನು ಮಾಡಿದರೆ ಒಳ್ಳೆಯದು. ಇದೊಂದು ಆಡ್‌ಹಾಕ್ ಸಮಿತಿಯಾಗಿರಬಹುದು. ಅಥವ ಬೇರೆ ರೀತಿಯ ಸಮಿತಿಯಾಗಿರಬಹುದು. ಅಂತೂ ಒಬ್ಬ ಅಧಿಕಾರಿಯ ಕೈವಾಡದಿಂದ ಈ ಶಾಖೆಯನ್ನು ತಪ್ಪಿಸಿ ಮೂರು ಜನರನ್ನೊಳಗೊಂಡ ಒಂದು ಕಮಿಷನ್ ಮಾಡಿದರೆ ಅದರಿಂದ ಹೆಚ್ಚು ನ್ಯಾಯ ದೊರಕುತ್ತದಲ್ಲದೆ ಸರ್ಕಾರದವರ ಉದ್ದೇಶವೂ ಸಾಧನೆಯಾಗುತ್ತದೆ.

ಅಧ್ಯಕ್ಷರು.—Resolution moved :

"ಲಂಚನಿರೋಧಕ ಇಲಾಖೆಯ ಡೈರೆಕ್ಟರವರ ಆಫೀಸನ್ನು "ಎಫಿಷಿಯೆನ್ಸಿ ಆಡಿಟ್"ಗೆ ಸಂಬಂಧಪಟ್ಟ ಆಫೀಸಿನಿಂದ ಪ್ರತ್ಯೇಕಿಸಬೇಕೆಂದೂ ಮತ್ತು ಲಂಚ ನಿರೋಧಕ ಇಲಾಖೆಗೆ ಮೂರುಮಂದಿ ಸದಸ್ಯರುಗಳಿಂದ ಕೂಡಿದ ಒಂದು 'ಕಮಿಷನ್' ಮಂಡಲಿಯನ್ನು ನೇಮಕ ಮಾಡಬೇಕೆಂದೂ ಈ ಸಭೆಯವರು ಅಭಿಪ್ರಾಯಪಡುತ್ತಾರೆ."

*ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ಈ ನಿರ್ಣಯದಲ್ಲಿ ಎರಡು ಭಾಗಗಳಿವೆ. ಒಂದು, ಎಫಿಷಿಯನ್ಸಿ ಆಡಿಟ್ ಇಲಾಖೆಯನ್ನೂ ಲಂಚನಿರೋಧಕ ಇಲಾಖೆಯನ್ನೂ ಬೇರೆ ಮಾಡುವುದು. ಎರಡನೆಯದು ಲಂಚನಿರೋಧಕ ಇಲಾಖೆಗೆ ಒಂದು ಕಮಿಷನ್ ನೇಮಕಮಾಡಬೇಕೆಂಬುದು. ಇದರಲ್ಲಿ ಲಂಚನಿರೋಧಕ ಇಲಾಖೆಗೆ ಒಂದು ಕಮಿಷನ್ ನೇಮಕ ಮಾಡಬೇಕೆಂಬುದು ಸರಿಹೋಗುವುದಿಲ್ಲವೆನಿಸುತ್ತದೆ. ಈ ಲಂಚನಿರೋಧಕ ಇಲಾಖೆಯಲ್ಲಿ ಅಧಿಕಾರಿಯೊಬ್ಬರಿದ್ದು ಜಬರದಸ್ತಿನಿಂದ ಕೆಲಸ ನಡೆಸಿಕೊಂಡು ಹೋಗುತ್ತಾ ಯಾವ influenceಗೂ ಸಿಕ್ಕದೇಯಿರುವ ಹಾಗಿದ್ದರೇ ಅನುಕೂಲವೆಂದು ಕಾಣುತ್ತದೆ. Corruption ಎಂಬುದು ಎಂತಹ ದೊಡ್ಡ ಖಾಯಿಲೆ ಎಂಬುದು ಎಲ್ಲರಿಗೂ ಗೊತ್ತಿದೆ. ಇದನ್ನು ಜಾಗ್ರತೆ ಕಂಡು ಹಿಡಿದು ಇದಕ್ಕೆ ತಕ್ಕ ಶಾಸ್ತಿ ಮಾಡಬೇಕು. ಇದಕ್ಕೆ ಮೂರು ಜನರನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿ

(ಶ್ರೀ ಎಚ್. ಬಿ. ಗುಂಡಪ್ಪಗೌಡರು.)

ಅದು ಹೈಕೋರ್ಟಿನಂತ ತೀರ್ಮಾನ ತೆಗೆದುಕೊಳ್ಳುವುದು ಎಂದರೆ, ಇದೇ final authority ಆಗಬೇಕಾಗುತ್ತದೆ. ಈಗ ಅಖೈರು ತೀರ್ಮಾನ ಕೊಡತಕ್ಕವರು ಸರ್ಕಾರದವರು. ಲಂಚನಿರೋಧಕ ಇಲಾಖೆಯವರು ವರದಿಯನ್ನು ಕಳುಹಿಸುತ್ತಾರೆ ಅಷ್ಟೆ. ಅದೊಂದು ಸರ್ಕಾರಿ ಇಲಾಖೆ ಇದ್ದಂತಿದೆ. ಹಾಗಿಲ್ಲದೆ ಅದೇ ಈಗ ಅಖೈರು ತೀರ್ಮಾನ ಕೊಡುವ authority ಆಗಿದ್ದರೆ ಆ ಸ್ಥಾನದಲ್ಲಿ ಒಂದು ಕಮಿಷನ್ ಮಾಡಬಹುದಾಗಿತ್ತು. ಆದರೆ ಹಾಗಿಲ್ಲ. ಜಾಗ್ರತೆ ಕೆಲಸಗಳು ನಡೆಯುವ ದೃಷ್ಟಿಯಿಂದಲೂ ಅದನ್ನು final authority ಮಾಡುವುದಕ್ಕಾಗುವುದಿಲ್ಲವಾದುದರಿಂದ ಈ ನಿರ್ಣಯದಲ್ಲಿ ಸೂಚಿಸಿರುವುದು ಅಷ್ಟು ಮನಸ್ಸಿಗೆ ಒಪ್ಪಲಿಲ್ಲ.

ಎರಡನೆಯದಾಗಿ, ಎಫಿಷಿಯನ್ಸಿ ಆಡಿಟ್ ಇಲಾಖೆಯನ್ನು ಬೇರೆ ಮಾಡಬೇಕೆಂದು ಸೂಚಿಸಿದ್ದಾರೆ. ಇದರಲ್ಲಿ ಸ್ವಲ್ಪ ಅರ್ಥವಿದೆ. ಈಗ ಒಟ್ಟಿನಲ್ಲಿ ಸಾಮಾನ್ಯ ಆಡಿಟ್ ನಡೆಯುತ್ತಿದೆ. ಎಫಿಷಿಯನ್ಸಿ ಆಡಿಟ್‌ನವರು bottle neck ಎಲ್ಲಿದೆ, ತೊಡಕು ಎಲ್ಲೆಲ್ಲಿದೆ, unnecessary procedure ಎಲ್ಲೆಲ್ಲಿದೆ, red tapism ಎಲ್ಲೆಲ್ಲಿದೆ, ಕೆಲಸ ಜಾಗ್ರತೆ ಹೇಗೆ ನಡೆಯುವಂತೆ ಮಾಡಬೇಕು ಎಂಬುದನ್ನೆಲ್ಲಾ ತಿಳಿದು ತೊಂದರೆಗಳನ್ನೆಲ್ಲಾ ನಿವಾರಣೆ ಮಾಡಬೇಕು. ಇದಕ್ಕೆ ಬಹಳ ಅನುಭವಸ್ಥರಾದವರಿದ್ದರೆ ಒಳ್ಳೆಯದೆನಿಸುತ್ತದೆ. ಆದರೆ ಈಗಿನ ಹಣಕಾಸಿನ ಸ್ಥಿತಿಯಲ್ಲಿ ಇದಕ್ಕೆ ಬೇರೊಬ್ಬರು ಅಧಿಕಾರಿಯನ್ನು ನೇಮಿಸಿ, ಲಂಚನಿರೋಧಕ ಸಮಿತಿಯನ್ನು ಬೇರೆ ಮಾಡುವುದು ಎಷ್ಟುಮಟ್ಟಿಗೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಹಾಗೂ ಒಂದುವೇಳೆ ನಮ್ಮ ಕೆಲಸ ಇದರಿಂದ ಚುರುಕಾಗಿ ನಡೆಯುತ್ತದೆ ಎಂದು ಇದನ್ನು ಮಾಡಬೇಕೆಂದರೆ ಅದನ್ನು ಯೋಚನೆ ಮಾಡಬಹುದು. ಆದರೂ ನನಗೆ ಈ ಸಂದರ್ಭದಲ್ಲಿ ಈ ನಿರ್ಣಯದಲ್ಲಿರುವ ಸಲಹೆಯನ್ನಂಗೀಕರಿಸಿ ಮಾಡಿದರೂ ಕಾರ್ಯರೂಪದಲ್ಲಿ ಹೆಚ್ಚು ಕೆಲಸ ನಡೆಯುತ್ತದೆಂಬ ಭರವಸೆ ಹೊಂದಲು ಅವಕಾಶವಿಲ್ಲವೆಂದು ತೋರುತ್ತದೆ.

*ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈ ನಿರ್ಣಯದಲ್ಲಿ ಹೇಳಿರುವ ಪ್ರಕಾರ ಈ ಎರಡು ಶಾಖೆಗಳನ್ನೂ ಬೇರೆಬೇರೆ ಮಾಡಬೇಕೆಂಬ ವಿಚಾರದಲ್ಲಿ ನನ್ನ ಒಪ್ಪಿಗೆ ಇದೆ. ಆದರೆ ಲಂಚ ನಿರೋಧಕ್ಕೆ ಒಂದು ಇಲಾಖೆ ಇರಬೇಕೇ ಎಂಬುದು ನನಗೆ ಅರ್ಥವಾಗುವುದಿಲ್ಲ. ನನಗಂತೂ ಇದು ಸರಿ ಎನಿಸುವುದಿಲ್ಲ.

ಅಧ್ಯಕ್ಷರು.—ಲಂಚನಿರೋಧಕ ಇಲಾಖೆ ಇರಬಾರದೆಂದು ಹೇಳುತ್ತೀರಾ ? ಇದಕ್ಕೆ ಇಲ್ಲಿ ಅವಕಾಶವೆಲ್ಲಿದೆ ?

ಶ್ರೀ ಬಿ. ಹುಚ್ಚೇಗೌಡರು.—ಈಗ ಎರಡು ಇಲಾಖೆಗಳನ್ನು ಮಾಡಬೇಕೆಂದು ಸೂಚಿಸಿದ್ದಾರೆ. ಕಮಿಷನ್ ಮಾಡಬೇಕೆಂದು ಹೇಳಿದ್ದಾರೆ. ಕಮಿಷನ್ ಮಾಡಬಾರದೆಂದು ಹೇಳುತ್ತೇನೆ. ಎಫಿಷಿಯೆನ್ಸಿ ಆಡಿಟ್ ಇರಬೇಕೇ ಹೊರತು ಆಂಟಿ ಕರಪ್ಷನ್ ಇಲಾಖೆಗೆ 3 ಜನರನ್ನೊಳಗೊಂಡ ಒಂದು ಕಮಿಷನ್ ಇರಬೇಕೆಂಬುದಕ್ಕೆ ನನ್ನ ಒಪ್ಪಿಗೆಯಿಲ್ಲವೆಂದು ಹೇಳುತ್ತೇನೆ. ಇದು ಅನಾವಶ್ಯಕ. ಆದರೆ ಇಲಾಖಾ ಮೊಖ್ತೇಸರುಗಳೇ ಈ ಎಫಿಷಿಯನ್ಸಿ ಆಡಿಟ್ ಕೆಲಸವನ್ನು ಮಾಡಬಹುದು. ಈಗ ನೀವು ಬೇರೆಯಾಗಿ ಎಫಿಷಿಯನ್ಸಿ ಆಡಿಟ್ ಇಲಾಖೆಗೆ ಒಬ್ಬರನ್ನು ನೇಮಿಸಬೇಕಾದರೂ ಇದೇ ಇಲಾಖೆಯ ಮೊಖ್ತೇಸರ ದರ್ಜೆಯವರೊಬ್ಬರನ್ನು ನೇಮಿಸುತ್ತೀರಿ. ಇವರು ಹೋಗಿ ಎಲ್ಲಾ ಇಲಾಖೆಯನ್ನೂ ತನಿಖೆಮಾಡಬೇಕೆಂದರೆ, ಆಯಾ ಇಲಾಖೆಯ ಮೊಖ್ತೇಸರುಗಳಿಗೇನು ಜವಾಬ್ದಾರಿ ಉಳಿದಿದೆ ? ಅವರೇ ಏಕೆ ತಮ್ಮ ಕೈಕೆಳಗಿನ ಅಧಿಕಾರಿಗಳ ಮೇಲೆ ತನಿಖೆ ಮಾಡಿ ದಕ್ಷತೆಯಿಂದ ಕೆಲಸ ಮಾಡಕೂಡದು ? ಈಗ ನಾವು ನೋಡುತ್ತಿರುವ ಹಾಗೆ ಈಚೆಗೆ ಈ Anti-Corruption ಇಲಾಖೆ ಬಂದ ಮೇಲೆ, ಯಾವ ವಿಷಯ ತಮ್ಮ ಇಲಾಖೆಯಲ್ಲಿ ಬರಲಿ, ಮಾತೆತ್ತಿದರೆ ಒಂದು ರಿಪೋರ್ಟು ಬರೆದು ಆ ಇಲಾಖೆಯವರಿಗೆ ಬರೆದು ಕಳುಹಿಸಿ ತಾವು ಸುಮ್ಮನೆ ಕುಳಿತುಕೊಳ್ಳುತ್ತಾರೆ Anti-Corruption ಇಲಾಖೆಯವರು ಬಂದರೆ ಅವರೊಡನೆ ಸಹಕರಿಸಿ ಕೆಲಸಮಾಡುವುದೂ ಇಲ್ಲ.

ಅಧ್ಯಕ್ಷರು.—ಕಮಿಷನ್ ಬೇಕೇ ಬೇಡವೆ ಎಂಬುದನ್ನು ಹೇಳಿ. ಅದು ಬಿಟ್ಟು ಆ ಡಿಪಾರ್ಟ್‌ಮೆಂಟಿನ ಎಲ್ಲ ವಿಷಯಗಳನ್ನು ಏಕೆ ಚರ್ಚೆ ಮಾಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪ್ರತ್ಯೇಕ ಮಾಡುವುದು ಅವಶ್ಯಕವೇ ಇಲ್ಲವೇ ಎಂದು ತಿಳಿಸಿದರೆ ಸಾಕು.

ಶ್ರೀ ಬಿ. ಹುಚ್ಚೇಗೌಡರು.—ಪ್ರತ್ಯೇಕ ಮಾಡುವುದು ಅಗತ್ಯವೆಂದು ಹೇಳುತ್ತೇನೆ. ಆದರೆ ಇಲ್ಲಿ ಹೇಳಿರುವಂತೆ ಕಮಿಷನ್ ಬೇಕಾಗಿಲ್ಲ. ಆಯಾ ಇಲಾಖಾ ಮೊಖ್ತೇಸರರ ಜವಾಬ್ದಾರಿ ಇದರಿಂದ ತಪ್ಪಿಹೋಗುತ್ತದೆ. ಆಂಟಿ-ಕರಪ್ಷನ್ ಇಲಾಖೆಯಿದೆಯೆಂದು ಹೇಳಿ ಇಲಾಖೆಯ ಮೊಖ್ತೇಸರುಗಳು ಏನೂ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಎಫಿಷಿಯನ್ಸಿ ಆಡಿಟ್ಟನ್ನೂ, ಆಂಟಿ ಕರಪ್ಷನ್ ಕೆಲಸವನ್ನೂ ಒಂದಕ್ಕೊಂದಕ್ಕೆ ಸಂಬಂಧಿಸಕೂಡದೆಂದು ಹೇಳಿ ನಾನು ಈ ಖೋತಾ ಸೂಚನೆಯ ಸಂಬಂಧದಲ್ಲಿ ಹೇಳುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಈಗ ಮಾನ್ಯ ಸದಸ್ಯರು ಮಾತನಾಡಿದ್ದರಲ್ಲಿ ಎಫಿಷಿಯನ್ಸಿ ಆಡಿಟ್ ಮತ್ತು ಆಂಟಿ ಕರಪ್ಷನ್ ಕೆಲಸಗಳನ್ನು ವಿಭಾಗ ಮಾಡುವುದು ಒಳ್ಳೆಯದೆಂದು ಅನೇಕರು ಅಭಿಪ್ರಾಯಪಟ್ಟಿರುವ ಹಾಗಿದೆ. ನನ್ನ ದೃಷ್ಟಿಯಲ್ಲೂ ಈ ಎಫಿಷಿಯನ್ಸಿ ಆಡಿಟ್ ಕೆಲಸವನ್ನು ಆಯಾ ಇಲಾಖೆಯವರೇ ಮಾಡಿದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

ಎರಡನೆಯದಾಗಿ ಆಂಟಿ ಕರಪ್ಷನ್ ವಿಚಾರದಲ್ಲಿ ಕಮಿಷನ್ ಎಂದರೆ ಎರಡು ಮೂರು ಜನರು ಇರಬೇಕಾಗುತ್ತದೆ. ಒಬ್ಬರೇ ಇದ್ದರೆ ಸಾಕೆಂದು ಹೇಳಿದರು. ಅದರಂತೆಯೂ ಬೇಕಾದರೆ ಮಾಡಬಹುದು. ಒಬ್ಬರೇ ಇದ್ದರೂ ಇರಬಹುದು.

The Hon'ble Sri H. C. DASAPPA.—Mr. Speaker, Sir, there are only two points in this resolution. The first is bifurcation of the work of the efficiency Audit from the question of dealing with anti-corruption cases; the other is about the constitution of a Commission. The House may be aware of the fact that in 1945 a Committee was constituted presided over by Sir Albion Rajkumar Banerjee to go into this very question which arose as a result of the resolution passed in the Representative Assembly. The recommendations of that Committee are contained in para 139 and in

subsequent paras. This is what they say:

"The most important recommendation in this category that we would make is the creation of a Special Officer for Efficiency Audit and Anti-corruption Measures."

It is not only a question of its being conducive to efficient working but it is a measure of economy also not to have too many officers for these very purposes which so often are dovetailed to one another. The overlap so often. Therefore I think it is very desirable that there should be—whether it is a question of commission or one officer—one officer, which would be very helpful. So I think that following up this recommendation Government have been pleased to appoint one Special Officer for both these purposes. I think, bifurcation would mean, apart from doubtful increase of efficiency, certainly additional cost.

As regards the Commission, I think I am inclined to agree with the Hon'ble Member Sri A. G. Ramachandra Rao that it must be vested with more powers almost of a decisive character. We are also contemplating the constitution of a Public Service Commission and its scope, extent, and the nature of work is to be seen. I think another Commission of this nature to go into only anti-corruption matters is not called for, at any rate at this stage and I need not say to the Hon'ble Members that it means certainly a great deal more of expenditure. My own fear is that if you have a Commission it will also entail considerable delay in the disposal of the cases. For these reasons I request the Hon'ble Member not to press the resolution at this moment. Let us await the progress that is being made now. If he sees the recommendation he will find the powers are very wide; for instance, there are things like this:

Government should compel Public Servants to furnish all relevant information with regard to their property such as bank accounts, shares and other investments, insurance policies, immovable property held or acquired by them or transferred by them to their dependants or others on pain of dismissal. These returns should be half-yearly in prescribed forms."

and so on. I think if the work of the present Special Officer is going to be implemented in the manner indicated in this report much of the criticism will be obviated and we will be really making him a very effective instrument of maintaining efficiency and getting rid of corruption in the State. So I request the Hon'ble Member not to press the resolution.

Sri A. G. RAMACHANDRA RAO.—In the circumstances explained by the Hon'ble Minister I beg leave of the House to withdraw the resolution.

The resolution was, by leave of the House, withdrawn.

Mr. SPEAKER.- Next Resolution. Sri D. M. Siddiah.

Kannada to be the Medium of Instruction in the University.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮಾನ್ಯ ಅಧ್ಯಕ್ಷರೇ, ನನ್ನ ನಿರ್ಣಯ ಈ ರೀತಿಯಿದೆ :—

"ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡವು ಶಿಕ್ಷಣ ಮಾಧ್ಯಮವಾಗಿರಬೇಕೆಂಬುದಾಗಿ ಈ ಸಭೆಯವರು ಅಭಿಪ್ರಾಯಪಡುತ್ತಾರೆ."

ಸ್ವಾಮಿ, ಈ ನಿರ್ಣಯ ಎಷ್ಟು ಪ್ರಾಮುಖ್ಯವಾದ್ದೆಂಬದನ್ನು ಈ ಸಭೆಯ ಗಮನಕ್ಕೆ ತರಬೇಕಾದ್ದು ಅನಗತ್ಯ. ಎಲ್ಲರಿಗೂ ಈ ನಿರ್ಣಯದ ಮಹತ್ವ ತಿಳಿದೇ ಇದೆ. ಒಂದು ಮಾತಿನಲ್ಲಿ ಹೇಳುವುದಾದರೆ, ಮನುಷ್ಯನಿಗೆ ಅತ್ಯವಶ್ಯಕವಾಗಿ ಬೇಕಾದ ಅನ್ನಬಟ್ಟೆಗಳ ಜೊತೆಗೆ ಅವನಿಗೆ ತನ್ನ ಭಾಷೆಯಲ್ಲಿ ತಾನು ವಿದ್ಯೆ ಕಲಿಯುವ ಸ್ವಾತಂತ್ರ್ಯವಿರುವುದೂ ಅತ್ಯಗತ್ಯ. ನಮ್ಮ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಹೋರಾಟ ಪ್ರಾರಂಭವಾಗುವುದಕ್ಕೆ ಮುಂಚೆಯೇ ಈ ಕನ್ನಡದ ಚಳವಳಿಯು ಪ್ರಾರಂಭವಾಯಿತು. ಅದರ ಪರಿಣಾಮವಾಗಿ ಮಾಧ್ಯಮಿಕ ಮತ್ತು ಹೈಸ್ಕೂಲುಗಳಲ್ಲಿ ಕನ್ನಡವು ಬೋಧಕ ಭಾಷೆಯಾಗಿ ಜಾರಿಗೆ ಬಂತು. ಆದರೆ ಅಲ್ಲಿ ಸಂಪೂರ್ಣವಾಗಿ ಪ್ರಾರಂಭಿಸದೆ ಇನ್ನೂ ಸ್ವಲ್ಪಮಟ್ಟಿಗೆ ಇಂಗ್ಲಿಷ್ ಭಾಷೆಯನ್ನು ಇಟ್ಟಿದ್ದರಿಂದ ತೊಡಕಿಗೆ ಕಾರಣವಾಯಿತು. ಆಗಲೇ ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು ಮಾಧ್ಯಮಿಕ ಭಾಷೆಯಾಗಿ ಮಾಡದೆ ಇಂದು ನಾವು ಇಷ್ಟೊಂದು ದುಸ್ಥಿತಿಗೆ ಬಂದಿದ್ದೇವೆಂದು ಹೇಳಿದರೆ ನಿಜವಾಗಿಯೂ ಕನ್ನಡಿಗರಾದ ನಾವು ತಲೆತಗ್ಗಿಸಬೇಕಾಗಿ ಬಂದಿದೆ. ನಮ್ಮ ಮಕ್ಕಳು ಮಿಡ್ಲ್ ಸ್ಕೂಲು ಮತ್ತು ಹೈಸ್ಕೂಲಿನಲ್ಲಿ ಕನ್ನಡದಲ್ಲಿ ವಿದ್ಯಾಭ್ಯಾಸ ಮಾಡಿ ಈಗ ವಿಶ್ವವಿದ್ಯಾನಿಲಯಕ್ಕೆ ಬಂದ ತಕ್ಷಣ ಇಂಗ್ಲೀಷಿನಲ್ಲಿ ಕಲಿಯುವುದಕ್ಕೆ ಪ್ರಾರಂಭ ಮಾಡಬೇಕಾಗಿದೆ. ಇದು ಬಹಳ ತೊಡಕಿನ ಸಮಸ್ಯೆ. ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ಯಾವ ವಿಶ್ವವಿದ್ಯಾನಿಲಯದಲ್ಲಿ ಒಂದು ಪ್ರೌಢ ಶಿಕ್ಷಣವನ್ನು ಸೋಷಿಯಲ್ ಸೈನ್ಸ್ ಮತ್ತು ವೈಜ್ಞಾನಿಕ ಹಾಗೂ ರಾಜಕೀಯ ಶಾಸ್ತ್ರ